ದೇವವಾಣಿ ಸಂಸ್ಕೃತ ವಿಶ್ವಜನೀನಾ

ವಿದ್ವಾನ್ ಎನ್. ರಂಗನಾಥಶರ್ಮಾ
ಮಹಾಮಹೋಪಾಧ್ಯಾಯಃ

ವಿದ್ಯಾಗಣಪತಿ ಪ್ರಕಾಶನ
2011

ದೇವವಾಣಿ ಸಂಸ್ಕೃತ
ವಿಶ್ವಜನೀನಾ

ವಿದ್ವಾನ್ ಎನ್. ರಂಗನಾಥಶರ್ಮಾ

ಮಹಾಮಹೋಪಾಧ್ಯಾಯಃ

ವಿದ್ಯಾಗಣಪತಿ ಪ್ರಕಾಶನ

2011

Devavanee Samskrita Vishwa Jananee
(A Collection of articles)
by
Vidwan N. Raṇganatha Sharma
Mahamahopadhyaya
1261, Dharani
13th Cross, 2nd Phase
Girinagar, Bangalore - 85

Published by
Vidyaganapati
Bangalore

ದೇವವಾಣಿ ಸಂಸ್ಕೃತ ವಿಶ್ವ ಜನನೀ
ಲೇಖಕರು : ವಿದ್ವಾನ್ ಎನ್. ರಂಗನಾಥಶರ್ಮಾ
ಮಹಾಮಹೋಪಧ್ಯಾಯಃ
ನಿವೃತ್ತ ವ್ಯಾಕರಣ ಶಾಸ್ತ್ರ ಪ್ರಾಧ್ಯಾಪಕರು
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆ
ಬೆಂಗಳೂರು
(ಸುಪ್ರಸಿದ್ಧ ಸಂಸ್ಕೃತ-ಕನ್ನಡ ಲೇಖಕರು)

ಪ್ರಕಾಶಕರು :
ವಿದ್ಯಾಗಣಪತಿ ಪ್ರಕಾಶನ, ಬೆಂಗಳೂರು

ಮುದ್ರಣ : ವಿಶ್ವ ಸಂಸ್ಕೃತಪುಸ್ತಕಪ್ರದರ್ಶಿನೀ, ಬೆಂಗಳೂರು
ಜನವರಿ 7 - 11, 2011

ಪುಟಗಳು : 54

ಪ್ರಸ್ತಾವನೆ

'ಭಾಷೆಗಳಲ್ಲಿ ಮುಖ್ಯವೂ, ಮಧುರವೂ, ದಿವ್ಯವೂ ಆದ ಗೀರ್ವಾಣ ವಾಣಿಯು ಸಂಸ್ಕೃತ' ಎಂಬಿತ್ಯಾದಿ ವಾಕ್ಯಗಳಿಂದ ಮುದಗೊಳ್ಳುವ ನಮಗೆ ಸಂಸ್ಕೃತಭಾಷೆಯು ನಿಂದೆಯನ್ನು ಕೇಳಿದರೆ ದುಃಖವುಂಟಾಗುತ್ತದೆ. ಹೀಗೆ ನಿಂದಿಸುವ ಅಜ್ಞರು ಸಂಸ್ಕೃತ ಸಾಹಿತ್ಯದ ಬಗ್ಗೆ ಏನನ್ನೂ ತಿಳಿದಿರುವುದಿಲ್ಲ. ಆದುದರಿಂದ ಈ ಭಾಷೆಯನ್ನು ಮೃತಭಾಷೆಯೆನ್ನುತ್ತಾರೆ. ಈ ರೀತಿಯ ನಿಂದಾ ವಾಕ್ಯಗಳನ್ನು ಮತ್ತೆ ಮತ್ತೆ ಕೇಳಿದ ನನ್ನ ಮನಸ್ಸು ತುಂಬಾ ಖೇದಗೊಂಡಿತ್ತು. ಆಗ ನಾನು ಈ ಪ್ರಬಂಧಗಳನ್ನು, ರಚಿಸಲು ಕಾರ್ಯಗತನಾದೆ. ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಲೇಖನಗಳನ್ನು ಓದುಗರ ಸೌಲಭ್ಯಕ್ಕಾಗಿ ಇಲ್ಲಿ ಒಟ್ಟುಗೂಡಿಸಿದೆ. ಬೆಂಗಳೂರು ನಗರದಲ್ಲಿ ನಡೆದ ವಿಶ್ವ ಸಂಸ್ಕೃತ ಪುಸ್ತಕ ಮೇಳದಲ್ಲಿ ಸೇರಿದ್ದ ಅನೇಕ ಸಂಸ್ಕೃತಾಭಿಮಾನಿಗಳಿಗೆ ಈ ಪ್ರಬಂಧಗಳು ಸಂತೋಷವನ್ನುಂಟುಮಾಡಬಲ್ಲವೆಂಬ ಧೃಡವಿಶ್ವಾಸವು ನನ್ನಲ್ಲಿದೆ.

ಚಿಕ್ಕದಾದರೂ ಈ ಪ್ರಬಂಧಕ್ಕೆ ಅಮೂಲ್ಯವಾದ ಮುನ್ನುಡಿಯನ್ನು ಬರೆದುಕೊಟ್ಟ ಶ್ರೀಯುತ ಮಲ್ಲೇಪುರಂ ಜಿ. ವೆಂಕಟೇಶ್ ಅವರ ಉಪಕಾರವನ್ನು ಸದಾ ಸ್ಮರಿಸುತ್ತೇನೆ. ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯದ ಕುಲಪತಿಗಳೂ ಆಗಿರುವ ಶ್ರೀಯುತ ವೆಂಕಟೇಶ್‌ರವರು ಅತ್ಯಂತ ಸರಳವೂ ಮಹಾವಿದ್ವಾಂಸರೂ ವಿಶೇಷವಾಗಿ ಸಂಸ್ಕೃತ ಭಾಷಾಜ್ಞಾನವುಳ್ಳವರೂ, ಸಂಸ್ಕೃತಾಭಿಮಾನಿಗಳೂ ಆಗಿರುವರೆಂಬುದು ಈ ಭಾಷಾಭಿಮಾನಿಗಳಾದ ನಮ್ಮೆಲ್ಲರಿಗೂ ಸಂತೋಷವನ್ನುಂಟುಮಾಡಿದೆ. ಭಗವತಿಯಾದ ಸರಸ್ವತಿಯು ಶ್ರೀಯುತ ಮಲ್ಲೇಪುರಂ ಜಿ. ವೆಂಕಟೇಶರಿಗೆ ಸರ್ವದಾ ಪೂರ್ಣಾನುಗ್ರಹ-ಕಾರಕಳಾಗಿರಲಿ ಎಂದು ನಮ್ಮ ಹಾರೈಕೆಗಳು.

ಮುನ್ನುಡಿ

ಯತ್ಪ್ರಭಾಪಟಲೋದ್ಭಾಸಾ ಭಾಸತೇ ಅದ್ಯಾಪಿ ಭಾರತಮ್ ।
ದಿವ್ಯಂ ತತ್ ಸಂಸ್ಕೃತಂ ಜ್ಯೋತಿರಾಸಂಸಾರಂ ಪ್ರಕಾಶತಾಮ್ ॥

ಮಹಾಮಹೋಪಾಧ್ಯಾಯರಾದ ವಿದ್ವಾನ್ ಎನ್. ರಂಗನಾಥಶರ್ಮಾ ಇವರಿಂದ ರಚಿತವಾದ 'ದೇವವಾಣಿ ಸಂಸ್ಕೃತ ವಿಶ್ವಜನೀನಾ ಎಂಬ ಲೇಖನ ಸಂಗ್ರಹವು ಅನೇಕ ಕಾರಣಗಳಿಂದ ವೈಶಿಷ್ಟ್ಯ ಪೂರ್ಣವಾಗಿದೆ. ವಿದ್ವದ್ವರೇಣ್ಯರಾದ ರಂಗನಾಥಶರ್ಮರು ಸಂಸ್ಕೃತ ಮತ್ತು ಕನ್ನಡ ಭಾಷೆಗಳೆರಡಕ್ಕೂ ಪೋಷಕರಾಗಿದ್ದಾರೆ. ಸಂಸ್ಕೃತವು ದೇವವಾಣಿಯೆನ್ನುವುದಕ್ಕೆ ಕಾರಣಗಳೇನು ? ಎನ್ನುವ ವಿಷಯವನ್ನು ಈ ಪ್ರಬಂಧಗಳಲ್ಲಿ ಸುದೀರ್ಘವಾಗಿ ಚರ್ಚಿಸಿ ಸಮಾಧಾನಗಳನ್ನೂ ತಿಳಿಸಿಕೊಟ್ಟಿದ್ದಾರೆ.

ಪ್ರಾಚೀನ ಕಾಲದಲ್ಲಿ ಸಂಸ್ಕೃತವು ವ್ಯಾವಹಾರಿಕ ಭಾಷೆಯೇ ಆಗಿತ್ತು. ಇದು ಎಲ್ಲ ಭಾಷೆಗಳ ಮಾತೃಸ್ಥಾನದಲ್ಲಿದೆ. ಪ್ರಪಂಚದ ಭಾಷಾ ವಿಜ್ಞಾನಿಗಳ ಮತದಂತೆ ಸಂಸ್ಕೃತವು ಇಂಡೋ-ಯುರೋಪಿಯನ್ ಭಾಷೆಗಳ ಸಂಬದ್ಧವಾಗಿದೆ. ಪೂರ್ವ ಪಶ್ಚಿಮಗಳ ಸಂಸ್ಕೃತ ಪರಂಪರೆಯನ್ನು ಸಂಯೋಜಿಸುವ ಈ ಭಾಷೆಯು ಅನೇಕ ಭಾಷೆಗಳಿಗೆ ಸ್ಫೂರ್ತಿದಾಯಿನಿಯಾಗಿದೆ.

'ಸರ್ವೇ ಜನಾಃ ಸುಖಿನೋ ಭವಂತು' ಎಂಬ ಸೂಕ್ತಿಗೆ ಅನ್ವರ್ಥವಾಗಿದೆ. ಭಾಷೆಯು ಕೇವಲ ಭಾಷಾಮಾತ್ರವಲ್ಲ. ನಮ್ಮೆಲ್ಲರ ಮನಸ್ಸುಗಳಲ್ಲಿ ಐಕ್ಯತೆಯನ್ನು ಮೂಡಿಸುವ ಜೀವನ ತತ್ತ್ವವಾಗಿದೆ.

ಇದಮಂಧಂತಮಃ ಕೃತ್ಸ್ನಂ ಜಾಯೇತ ಭುವನತ್ರಯಮ್
ಯದಿ ಶಬ್ದಾಹ್ವಯಂ ಜ್ಯೋತಿರಾಸಂಸಾರಂ ನ ದೀಪ್ಯತೇ ॥

ಇದು ಪ್ರಾಚೀನ ಕಾವ್ಯಚಿಂತನಕಾರನಾದ ದಂಡಿಯ ಉಕ್ತಿ.

ಜೀವನಕ್ಕೆ ಭಾಷೆಯು ಅವಶ್ಯಕ. ಇದು ಲೋಕೋಪಯೋಗಿ. ಜನೋಪಯೋಗಿ ಮತ್ತು ಭಾವೋಪಯೋಗಿಯೂ ಹೌದು. ಈ ರೀತಿಯ ಮೂರು ಪ್ರಯೋಜನಗಳು ಸಂಸ್ಕೃತಭಾಷೆಯಿಂದ ಮಾತ್ರ ಸಾಧ್ಯ. ಇದು ನಮ್ಮ ಅಂತರಾಳವನ್ನು ಪ್ರಕಾಶಪಡಿಸುವ ಮಧುರ-ಸುಂದರ ಭಾಷೆ. ಈ ಭಾಷೆಯೊಂದಿಲ್ಲದಿದ್ದರೆ ನಮ್ಮ ಸಂಭಾಷಣಾಮಾಧ್ಯಮವು ಅಂಧಕಾರದಲ್ಲಿ ಮುಳುಗಿ ಹೋಗುತ್ತಿತ್ತು. ಆಗ ಜ್ಞಾನ ಮಾಧ್ಯಮವೂ ಕಿಂಕರ್ತವ್ಯತಾಮೂಢವಾಗುತ್ತಿತ್ತು.

ಕೆಲವರು ಸಂಸ್ಕೃತ ಭಾಷೆಯನ್ನು ನಿರ್ಜೀವ ಭಾಷೆಯೆನ್ನುತ್ತಾರೆ. ಆದರೆ ಇದು ಜೀವಂತ ಭಾಷೆ. ಭಾರತದ ಬಹಳ ಪ್ರದೇಶಗಳಲ್ಲಿ ಸಂಸ್ಕೃತವು ಮಾತೃಭಾಷೆಯಾಗಿದೆಯೆನ್ನುವುದು ನೆನಪಿನಲ್ಲಿಡಬೇಕಾದ ಅಂಶ. ಕರ್ನಾಟಕ ರಾಜ್ಯದ ಮತ್ತೂರು, ಹೊಸಹಳ್ಳಿ ಮುಂತಾದ ಗ್ರಾಮಗಳಲ್ಲಿ, ಮಧ್ಯಪ್ರದೇಶದ ಮೊಹದ-ರಘುರಿ ಗ್ರಾಮಗಳಲ್ಲಿ ವ್ಯವಹಾರ ಭಾಷೆಯು ಸಂಸ್ಕೃತವೇ ಆಗಿದೆ. ಸಂಸ್ಕೃತ ಮಹಾವಿದ್ಯಾಲಯಗಳಲ್ಲಿ

ದೇವವಾಣಿ ಸಂಸ್ಕೃತ
ವಿಶ್ವಜನೀನಾ

ಸಂಸ್ಕೃತ ಮಾಧ್ಯಮದಲ್ಲೇ ಪಾಠಗಳು ನಡೆಯುತ್ತವೆ. ಸಂಸ್ಕೃತ ಭಾರತಿಯ ಕಾರ್ಯಕರ್ತೃಗಳು ದೈನಂದಿನ ಜೀವನದಲ್ಲಿ ಸರಲವೂ ಸುಂದರವೂ ಆದ ಸಂಸ್ಕೃತ ಭಾಷೆಯಲ್ಲಿಯೇ ಮಾತನಾಡುತ್ತಾರೆ. ಎಲ್ಲ ಸಂಸ್ಕೃತಾಭಿಮಾನಿಗಳ ಮನೆಗಳಲ್ಲಿಯೂ ಸಂಸ್ಕೃತವು ಮನೆಮಾತಾಗಿದೆ. ಈ ಭಾಷೆಯು ಭಾವನೆಗಳನ್ನು ದೃಢಗೊಳಿಸುತ್ತದೆ. ಸಂಬಂಧಗಳನ್ನು ಸ್ಥಿರಗೊಳಿಸುತ್ತದೆ. ನಮ್ಮಲ್ಲಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಈ ವಾಸ್ತವಿಕಾಂಶವನ್ನು ವಿದ್ವಾಂಸರಾದ ರಂಗನಾಥಶರ್ಮರು ಅನೇಕ ಪ್ರಕಾರಗಳಿಂದ ಪ್ರತಿಪಾದಿಸಿದ್ದಾರೆ.

ಸಂಸ್ಕೃತ ಭಾಷೆಯು ಭಾರತೀಯಭಾಷೆಗಳ ಅಂತರಂಗದಲ್ಲಿ ಸಾತ್ವಿಕ ಭಾವವನ್ನು ಜಾಗೃತಗೊಳಿಸುತ್ತದೆ. ಸಂಸ್ಕೃತ-ಸಂಸ್ಕೃತಿಗಳೆರಡನ್ನು ಒಂದೇ ಭೂಮಿಕೆಯಲ್ಲಿ ಪರಿಗ್ರಹಿಸಿಕೊಡುವುದು ಈ ಭಾಷೆ. ವೇದಗಳಲ್ಲಿ ಕಂಡುಬರುವ ಈ ದೇವವಾಣಿಯು ಕಾಳಿದಾಸ, ಭಾಸ ಮುಂತಾದ ಕವಿಗಳ, ನಾಟಕಕಾರರ ನಾಡಿಗಳಲ್ಲಿ ಹರಿಯುತ್ತಿದೆ. ವಾಲ್ಮೀಕಿ ವ್ಯಾಸ ಮುಂತಾದವರ ಮಹಾಕಾವ್ಯಗಳಲ್ಲಿ ದೈವೀಭಾವವನ್ನು ಹುಟ್ಟಿಸುತ್ತದೆ. ನಮ್ಮ ಜೀವನದಲ್ಲಿ ದೈವೀಭಾವವು ಅಪೇಕ್ಷಿತವಾದದ್ದಲ್ಲವೇ ? ನಾವು ಈ ಭಾವವನ್ನು ಪಡೆಯಲು ದೇವವಾಣಿಯಾದ ಈ ಭಾಷೆಯನ್ನು ಹೃತ್ಪೂರ್ವಕವಾಗಿ ಅಂಗೀಕರಿಸಬೇಕು. ಗ್ರಂಥಕಾರರು ಈ ಭಾಷೆಯ ಉತ್ಪತ್ತಿ, ಭಾಷಾವಿಕಾಸ, ಸಂಸ್ಕೃತಿ ಮಾರ್ಗದರ್ಶನ ಮುಂತಾದ ವಿಷಯಗಳನ್ನು ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ.

ಈ ಗ್ರಂಥರಚನೆಯುಮೂಲಕ ವಿದ್ವಾನ್ ರಂಗನಾಥಶರ್ಮರು ಭಾಷಾ ಋಣದಿಂದ ಮುಕ್ತರಾಗಿದ್ದಾರೆ. ಸಂಸ್ಕೃತವನ್ನು ತಿಳಿಯದಿದ್ದವರಿಗೂ ಉತ್ತಮವಾದ ಮಾರ್ಗ-ದರ್ಶನವನ್ನೂ ನೀಡಿದ್ದಾರೆ.

ಕರ್ನಾಟಕದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದ ಆರಂಭವಾದ ಸಮಯದಲ್ಲಿ ಹಿರಿಯರೂ, ತತ್ತ್ವಜ್ಞಾನಿಗಳೂ, ಜ್ಞಾನವೃದ್ಧರೂ, ವೈಯಾಕರಣರೂ ಆದ ಮಹಾಮಹೋಪಾಧ್ಯಾಯ ವಿದ್ವಾನ್ ರಂಗನಾಥಶರ್ಮರಿಂದ ರಚಿಸಲ್ಪಟ್ಟ ಈ ಕೃತಿಗೆ ಮುನ್ನಡಿಯನ್ನು ಬರೆಯಲು ದೊರಕಿದ ಅವಕಾಶಕ್ಕೆ ಕೃತಜ್ಞನಾಗಿದ್ದಾನೆ.

॥ ಜೀಯಾತ್ ಗೀರ್ವಾಣಭಾರತಿ ॥

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್
ಕುಲಪತಿಗಳು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ದೇವವಾಣಿ ಸಂಸ್ಕೃತ

ಸಂಪ್ರದಾಯವಿದೋ ನತ್ವಾ ಗುರೂನ್ ಶಬ್ದಾರ್ಥಪಾರಗಾನ್ ।
ದೇವವಾಣ್ಯಾ ಅಪೂರ್ವೋಽಯಮಲಂಕಾರೋ ವಿಧೀಯತೇ ॥

ಭಾಷೆಯು ಮನುಷ್ಯನಿಗೆ ಬಯಸದೇ ಬಂದ ಭಾಗ್ಯ. ಮಾತೆಯ ಮಡಿಲಿನಲ್ಲಿರುವ ಮಗುವೂ ಕೂಡ ಯಾವ ಯತ್ನವೂ ಇಲ್ಲದೆ ಭಾಷೆಯನ್ನು ಕಲಿಯಲು ಆರಂಭಮಾಡುತ್ತದೆ. ಭಾಷೆಯಿಲ್ಲದೆ, ಎಲ್ಲ ವೈದಿಕ, ಲೌಕಿಕ ವ್ಯವಹಾರಗಳೂ ದುಸ್ತರವೆನ್ನುವುದು ಸುಸ್ಪಷ್ಟ.

'ಅಜ್ಞಾನಿಯು ಪಶು ಸಮಾನನಾಗುತ್ತಾನೆ.' ಎಂಬುದರ ಪ್ರಕಾರ ಪಶು ಮತ್ತು ಮಾನವರನ್ನು ಪ್ರತ್ಯೇಕಿಸುವ ಜ್ಞಾನವು ಭಾಷಾಧೀನವೇ ಆಗಿದೆ. ಇಂತಹ ವರ್ಣಗಳ ಉಚ್ಚಾರದಿಂದ ವ್ಯಕ್ತವಾಗುತ್ತದೆ. ವರ್ಣಗಳೇ ಮಾತಾಗಿ ಬೆಳೆಯುತ್ತವೆ. ಮಾನವನಲ್ಲಿರುವ ಈ 'ಧೀಶಕ್ತಿ'ಯು ಪರಮೇಶ್ವರನು ಕರುಣೆಯಿಂದ ಕೊಟ್ಟಿರುವ ವರವಾಗಿದೆ.

ಮೊದಲು ವರ್ಣಗಳ ಉಚ್ಚಾರಣೆ, ನಂತರ ಮಾತು, ಈ ಮೂಲಕ ನಮ್ಮ ಭಾವನೆಗಳನ್ನು ಹೊರ ಹಾಕುವಿಕೆ. ಇದಕ್ಕೆ ಸಾಧನವಾದ ಭಾಷೆಯು ಇಲ್ಲದೇ ಇದ್ದಿದ್ದರೆ ಈ ಜಗತ್ತು ಹೇಗಿರುತ್ತಿತ್ತು ಎಂದು ಊಹೆ ಮಾಡಲೂ ಸಾಧ್ಯವಿಲ್ಲ. 'ಶಬ್ದವೆಂದು ಕರೆಸಿಕೊಳ್ಳುವ ಈ ಜ್ಯೋತಿಯು ಪ್ರಪಂಚದಲ್ಲಿ ಬೆಳಗದೇ ಇದ್ದಿದ್ದರೆ, ವಿಶಾಲವಾದ ಮೂರು ಲೋಕಗಳೂ ಅಂಧಕಾರದಲ್ಲಿ ಮುಳುಗಿ ಹೋಗಿರುತ್ತಿದ್ದವು ಎಂದು ಮಹಾಕವಿ ದಂಡಿಯ ವಚನವಿದೆ.

ಇದಮಂಧಂತಮಃ ಕೃತ್ಸ್ನಂ ಜಾಯೇತ ಭುವನತ್ರಯಮ್ ।
ಯದಿ ಶಬ್ದಾಹ್ವಯಂ ಜ್ಯೋತಿರಾಸಂಸಾರಂ ನ ದೀಪ್ಯತೇ ॥

ಮೊದಲು ಭಾಷೆ, ಅನಂತರ ಲಿಪಿ, ಸಾಮಾನ್ಯವಾದ ಗ್ರಂಥರಚನೆ, ಶಾಸ್ತ್ರ ಕಾವ್ಯಗಳ ಉತ್ಪತ್ತಿ, ಅದರಂತೆ ಸಂಸ್ಕೃತಿ, ಇದು ಭಾಷೆಯ ಬೆಳವಣಿಗೆಯ ಕ್ರಮ. ಶಾಸ್ತ್ರ ಗ್ರಂಥಗಳು ವಿಸ್ತಾರವಾಗುತ್ತಿದ್ದಂತೆ ಭಾಷಾಶಬ್ದಗಳಲ್ಲಿ, ವಾಕ್ಯರಚನಾಕ್ರಮದಲ್ಲಿ, ಅನೇಕ ವಿಧದ ಪರಿಣಾಮಗಳು ಉಂಟಾಗಿವೆಯೆಂದು ಉತ್ಪ್ರೇಕ್ಷಿಸಿಬಹುದು ಮತ್ತು ಹಾಗಾಗುವುದು ಅನಿವಾರ್ಯವೆಂದು ವಿದ್ವಾಂಸರ ಅಭಿಪ್ರಾಯ.

ಇಂತಹ ಭಾಷೆಯು ಪ್ರ ಪ್ರಥಮವಾಗಿ ಹೇಗೆ ಆವಿರ್ಭಾವವಾಯಿತು ? ಹೇಗೆ ಜನರು ಒಮ್ಮೆಗೆ ಅನೇಕ ಬಗೆಯ ನಾಮಪದಗಳು, ಕ್ರಿಯಾಪದಗಳು, ಅನೇಕ ಅರ್ಥಗಳಿಂದ ಕೂಡಿರುವವುಗಳು ಮುಂತಾದುವುಗಳನ್ನು ಪ್ರಯೋಗ ಮಾಡಲು ಸಮರ್ಥರಾದರು ? ಇಂತಹ ಅನೇಕ ಶಂಕೆಗಳು ಉತ್ತರಿಸಲಾಗದೇ ಉಳಿದು ಬಿಡುತ್ತವೆ.

ವಿಶ್ವಜನೀನಾ

ಈ ಪ್ರಪಂಚದಲ್ಲಿ ಬಹುವಿಧದ ಭಾಷೆಗಳು ಎಣಿಸಲಾಗದಷ್ಟಿವೆ. ಆಧುನಿಕ ಭಾಷಾ ಶಾಸ್ತ್ರಜ್ಞರು ಎಲ್ಲ ಭಾಷೆಗಳ ಸಮುದಾಯವನ್ನು ನಾಲ್ಕೈದು ಭಾಗಗಳಾಗಿ (ವಿಂಗಡಿಸಿ) ವಿಭಾಗ ಮಾಡಿದ್ದಾರೆ. ಅವುಗಳ ಉತ್ಪತ್ತಿಯಲ್ಲಿ ಅನೇಕ ಬಗೆಯ ವಾದಗಳನ್ನು ಮಂಡಿಸಿದ್ದಾರೆ. ಭಾಷಾಶಾಸ್ತ್ರಜ್ಞರು ಮಹತ್ತರವಾದ ಬುದ್ಧಿಮತ್ತೆಯಿಂದ ಭಾಷೆಯ ವರ್ಗೀಕರಣಕ್ರಮ, ವರ್ಣವ್ಯತ್ಯಯನಿಯಮ, ಶಬ್ದಾರ್ಥಗಳ ಪರಿವರ್ತನವಿಧಿ, ಮುಂತಾದ ವಿಷಯಗಳನ್ನು ತಿಳಿಸಿಕೊಟ್ಟು, ಅಸಾಧಾರಣ ಶಬ್ದಾರ್ಥಕುಶಲತೆಯನ್ನು ಪ್ರಕಟಪಡಿಸಿದ್ದಾರೆನ್ನುವುದು ಸತ್ಯ. ಆದರೂ ಈ ಭಾಷೆಗಳ ಪ್ರಥಮ ಉತ್ಪತ್ತಿಯು ಹೇಗಾಗಿರಬಹುದೆನ್ನುವುದು ಊಹಿಸಲಾಗದ ವಿಷಯವೇ ಆಗಿಬಿಡುತ್ತದೆ.

ಕೆಲವು ಭಾಷಾಶಾಸ್ತ್ರಜ್ಞರೂ, ವಿದ್ವಾಂಸರೂ, ಶಬ್ದಾರ್ಥಪರಿವೃತ್ತಿ ನಿಯಮಗಳನ್ನು ರಚಿಸಿ, ಸಂಸ್ಕೃತ ಭಾಷೆಗೂ ಯಾವುದಾದರೂ ಮೂಲಭಾಷೆಯು ಇದ್ದಿರಬಹುದೆಂದು ಊಹಿಸುತ್ತಾರೆ. ಆ ಭಾಷೆಯನ್ನು 'ಇಂಡೋ ಯುರೋಪಿಯನ್' ಎಂಬ ಹೆಸರಿನಿಂದ ಕರೆದು ತಮ್ಮ ಶಾಸ್ತ್ರವನ್ನು ರಚಿಸಿದ್ದಾರೆ.

ಹೀಗೆ ಅವರು ಮನಸ್ಸಿನಲ್ಲಿ ಊಹಿಸಿಕೊಂಡ ಮತ್ತೊಂದು ಭಾಷೆ ಇದ್ದಿದ್ದರೆ, ಆ ಭಾಷೆಯ ಪರಿವೃತ್ತಿನಿಯಮ ಮುಂತಾದುವುಗಳನ್ನು ತಿಳಿಸಿಕೊಡಬೇಕಾಗಿತ್ತು. ಮೂಲ ಭಾಷೆಯ ಅಸ್ತಿತ್ವವಿದ್ದರೆ ಮಾತ್ರ ಆ ಭಾಷೆಯ ಶಬ್ದಾರ್ಥಗಳು ಪರಿವೃತ್ತಿಯನ್ನು ಪಡೆಯುತ್ತವೆ.

ಉದಾಹರಣೆಗಳನ್ನು ಹೇಳಿ ಅನಂತರ ವಸ್ತುವಿನ ಲಕ್ಷಣವನ್ನು ಹೇಳುವುದು ಲೋಕದಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಲಕ್ಷಣವನ್ನು ಹೇಳಿ ಅದಕ್ಕೆ ಉದಾಹರಣೆಯನ್ನು ಯಾರೂ ಹುಡುಕುವುದಿಲ್ಲ. ಮಾರ್ಗದಲ್ಲಿ ಕಂಡು ಬಂದ ಆನೆಯ ಹೆಜ್ಜೆ ಗುರುತನ್ನು ನೋಡಿ ಈ ಮಾರ್ಗದಲ್ಲಿ ಆನೆ ಹೋಗಿರಬಹುದೆಂದು ಊಹಿಸಲು ಸಾಧ್ಯ. ಮೇಲೆ ತಿಳಿಸಿದ ಭಾಷಾಶಾಸ್ತ್ರಜ್ಞರ ಅಭಿಪ್ರಾಯವು ಮೊದಲೇ ರೇಖಾಚಿತ್ರದಿಂದ ಆನೆಯ ಹೆಜ್ಜೆಯನ್ನು ಬರೆದು ಇಲ್ಲಿ ಆನೆ ಹೋಗಿರಬಹುದು ಎಂದು ಹೇಳಿದಂತೆ ಆಗಿದೆ. ಹೀಗೆ ಪೂರ್ವಜರು ಕಲ್ಪಿಸಿಕೊಂಡ ಸಂಸ್ಕೃತ ಭಾಷೆಯ ಪೂರ್ವ ಭಾಷೆಯೊಂದಿದ್ದಿದ್ದರೆ, ಅದು ಸಂಪೂರ್ಣವಾಗಿ ನಾಶವಾಗಿದ್ದು ಹೇಗೆ ? ಕರ್ಪೂರವು ಭಸ್ಮಲೇಶವೂ ಇಲ್ಲದೆ ದಹಿಸಿ ಹೋಗುವಂತೆ, ಆ ಊಹಿಸಿಕೊಂಡಿದ್ದ ಕಾಲ್ಪನಿಕಮೂಲಭಾಷೆಯು ನಶಿಸಿ ಹೋಗಿದ್ದು ಹೇಗೆ ? ಪಾಳಿ ಭಾಷೆಯಂತೆ ಗ್ರಂಥಗಳಲ್ಲಿಯಾದರೂ ಉಳಿಯದೆ ಕಣ್ಮರೆಯಾದದ್ದು ಹೇಗೆ ? ಒಂದು ವೇಳೆ ಆ ಕಾಲದಲ್ಲಿ ಲಿಪಿಯ ಅಭಾವ ಇದ್ದಿತು. ಆದ್ದರಿಂದ ಹೀಗಾಗಿರಬಹುದೆಂದು ಹೇಳುವುದಾದರೆ, ವೇದಗಳು ಹೇಗೆ ಲಭ್ಯವಾದವು ? ಬರೆದಿಟ್ಟ ಗ್ರಂಥಗಳಲ್ಲಿಯಾಗಲೀ, ಮಾತನಾಡುತ್ತಿದ್ದ ವ್ಯವಹಾರದಲ್ಲಿಯಾಗಲೀ ಕಾಣಸಿಗದಿರುವ ಕಾಲ್ಪನಿಕ ಮೂಲ ಭಾಷೆಯು ಇರಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಭಾಷಾತಜ್ಞರು ತೋರಿಸಿಕೊಡುವ ಅನುಮಾನದ ಕಾರಣಗಳು ಯಾವ ರೀತಿಯಲ್ಲಿಯೂ ಸಾಧುಗಳಲ್ಲ. ಭಾಷಾಶಾಸ್ತ್ರಜ್ಞರು, ಪಾಶ್ಚಾತ್ಯರು, ಪಂಡಿತರು, ಇವರುಗಳನ್ನು ಅನುಸರಿಸುವವರು ಮುಂತಾದ ಎಲ್ಲರೂ 'ಡಾರ್ವಿನ್ನನ ವಿಕಾಸವಾದ'ವನ್ನು ಅಂಗೀಕರಿಸುತ್ತಾರೆ. ವಿಕಾಸವಾದವನ್ನು ಪಕ್ಕದಲ್ಲಿಟ್ಟುಕೊಂಡು ಭಾಷಾಶಾಸ್ತ್ರದಲ್ಲಿಯೂ ವಿಚಾರವನ್ನು ವಿಸ್ತರಿಸಿದ್ದಾರೆ. ಈ ಬಗ್ಗೆ ಗ್ರಂಥಗಳನ್ನು ರಚಿಸಿದ್ದಾರೆ. ವಿಕಾಸವಾದದ ಬಗ್ಗೆ ನಮಗೆ

ಅಸೂಯೆಯೇನೂ ಇಲ್ಲ. ಗುಣಗಳಲ್ಲಿ ದೋಷವನ್ನು ಹುಡುಕುವುದು ಯಾರಿಗೂ ಶೋಭೆಯಲ್ಲ. ಆದರೆ ಸಂಸ್ಕೃತಭಾಷೆಯನ್ನು ಕುರಿತು ಅವರಲ್ಲಿ ಮೂಡಿರುವ, ಬೆಳೆದು ಬಂದಿರುವ, ಅಭಿಪ್ರಾಯಗಳನ್ನು ಅಂಗೀಕರಿಸುವುದು ನಮಗೆ ಶಕ್ಯವಲ್ಲ. ಆ ಅಭಿಪ್ರಾಯಗಳು ಪ್ರಮಾಣಭೂತಗಳಾದುವಲ್ಲವೆಂದು ನಮ್ಮ ಮತ.

"ಯಾವುದು ಸಂಸ್ಕಾರಗೊಂಡಿದೆಯೋ ಅದು ಸಂಸ್ಕೃತ" ಎಂಬ ಆದಿಕವಿ ವಾಲ್ಮೀಕಿಗಳ ನುಡಿಯ ಆಧಾರವಿದೆ. ಸದ್ಯದಲ್ಲಿ ಸಂಸ್ಕೃತವನ್ನು ಕುರಿತು ವಿಚಾರಮಾಡೋಣ. (ರಾಮಾಯಣದ ಕಿಷ್ಕಿಂಧಾಕಾಂಡದಲ್ಲಿ ಹನುಮಂತನ ಮಾತನ್ನು ಕೇಳಿದ ಶ್ರೀರಾಮನ (ಪ್ರತಿಕ್ರಿಯೆ) ನುಡಿ – 3–32)

ಸಂಸ್ಕಾರಕ್ರಮಸಂಪನ್ನಾಮದ್ರುತಾಮವಿಲಂಬಿತಾಮ್ ।
ಉಚ್ಚಾರಯತಿ ಕಲ್ಯಾಣೀಂ ವಾಚಂ ಹೃದಯಹಾರಿಣೀಮ್ ॥

– (ಕಿಷ್ಕಿಂಧಾ – 3–32)

'ಹೃದಯಾಪಹಾರ, ಪರಿಶುದ್ಧ ಕ್ರಮ ಸಂಪನ್ನ, ಮಂಗಳಕರ ವಾಣಿಯನ್ನು ತಡೆಯಿಲ್ಲದೆ, ಅತಿವೇಗವಲ್ಲದ ಗತಿಯೊಳು ನುಡಿವನಿವನು.' ಮತ್ತು ಸುಂದರಕಾಂಡದಲ್ಲಿಯೂ –

ಹನುಮತೋ ವಾಚಮಾಲಕ್ಷ್ಯ ಶ್ರೀರಾಮಚಂದ್ರಸ್ಯ ಸೂಕ್ತಿರಿಯಮ್ ।
ಯದಿ ವಾಚಂ ಪ್ರದಾಸ್ಯಾಮಿ ದ್ವಿಜಾತಿರಿವ ಸಂಸ್ಕೃತಮ್ ·
ರಾವಣಂ ಮನ್ಯಮಾನಾ ಸಾ ಸೀತಾ ಭೀತಾ ಭವಿಷ್ಯತಿ ॥

– (ಸುಂದರ –30.17)

ಅಶೋಕವನದಲ್ಲಿ ಸೀತೆಯನ್ನು ಕಂಡಾಗ ಆಕೆಯನ್ನು ಹೇಗೆ ಮಾತನಾಡಿಸಬೇಕೆಂದು ಚಿಂತಿಸುತ್ತಿದ್ದ ಹನುಮಂತನ ನುಡಿಗಳು – (ಸುಂದರಕಾಂಡ, 30 – 17)

"ಬ್ರಾಹ್ಮಣನಂತೆ ಸಂಸ್ಕೃತದೊಳು ಈಕೆಯೊಡನುಡಿದರೆ ನಾನು ರಾವಣನೆಂದೇ ನನ್ನನ್ನು ತಿಳಿದು ಸೀತೆ ಹೆದರಿಹೋಗುವಳು.

ಸೀತೆಯೊಡನೆ ಯಾವ ಭಾಷೆಯಲ್ಲಿ ಮಾತನಾಡಬೇಕೆಂದು ಹನುಮಂತನು ಈ ರೀತಿ ಚಿಂತಿಸುತ್ತಾನೆ. ಇಂತಹ ಉದಾಹರಣೆಗಳಿಂದ ಶುದ್ಧವಾಗಿ ಸಂಸ್ಕರಿಸಿರುವ ಭಾಷೆಯು ಸಂಸ್ಕೃತ ಎನ್ನುವುದು ಖಚಿತವಾಗುತ್ತದೆ. ಹೀಗೆನಿಸಿದಾಗ ಮತ್ತೊಂದು ಪ್ರಶ್ನೆಯು ಮನಸ್ಸಿನಲ್ಲಿ ಮೂಡುತ್ತದೆ. ಯಾವ ಮೂಲಭಾಷೆಯನ್ನು ಸಂಸ್ಕರಿಸಿದಾಗ ಅದು ಸಂಸ್ಕೃತವನ್ನಿಸಿಕೊಂಡಿರಬಹುದು ? ಅದನ್ನು ಸಂಸ್ಕರಿಸಿದವರು ಯಾರಾಗಿರಬಹುದು ? ಎಂದೆಲ್ಲ ವಿಚಾರ ಮಾಡಬೇಕಾಗುತ್ತದೆ. ವೇದಗಳ ಭಾಷೆಯು ಈ ಸಂಸ್ಕೃತಭಾಷೆಗೆ ಮೂಲವಿರಬಹುದೆಂದು ಹೇಳೋಣ.

ಪೂಜ್ಯರಾದ ಮಹಾಭಾಷ್ಯಕಾರ ಪತಂಜಲಿಗಳು ತಮ್ಮ ಗ್ರಂಥದ ಆರಂಭದಲ್ಲಿ ಹೀಗೆ ಹೇಳಿದ್ದಾರೆ. ಲೌಕಿಕ ಮತ್ತು ವೈದಿಕ ಶಬ್ದಗಳ ವಿಷಯವನ್ನು ತಿಳಿಸಿಕೊಡಲು ಈ ಗ್ರಂಥವು ರಚಿಸಲ್ಪಟ್ಟಿದೆ.

ಹಸು, ಕುದುರೆ, ಪುರುಷ, ಆನೆ, ಪಕ್ಷಿ, ಪ್ರಾಣಿ, ಬ್ರಾಹ್ಮಣ ಮುಂತಾದವು ಲೌಕಿಕ ಶಬ್ದಗಳು.

"ಶನ್ನೋ ದೇವೀರಭೀಷ್ಟಯೇ, ಇಷೇ ತ್ವೋರ್ಜೇ ತ್ವಾ, ಅಗ್ನಿಮೀಳೇ ಪುರೋಹಿತಮ್, ಅಗ್ನ ಆಯಾಹಿ ವೀತಯೇ" ಮುಂತಾದುವು ವೈದಿಕ ಶಬ್ದಗಳು.

ಈ ರೀತಿಯಲ್ಲಿ ಭಾಷ್ಯಕಾರ ಪತಂಜಲಿಗಳು ಶಬ್ದರಾಶಿಯನ್ನು ವೈದಿಕ ಮತ್ತು ಲೌಕಿಕವೆಂದು ಎರಡು ರೀತಿಯಲ್ಲಿ ತೋರಿಸಿಕೊಟ್ಟಿದ್ದಾರೆ. ಇದೇ ಅಧಾರದಿಂದ ಮಹಾನ್ ವೈಯಾಕರಣನಾದ ಕೈಯಟನು ಶಬ್ದಗಳ ವ್ಯುತ್ಪತ್ತಿಯನ್ನು ಹೇಳುವಾಗ ಹೀಗೆ ಹೇಳಿದ್ದಾನೆ. "ಜನಗಳ ಆಡು ಮಾತುಗಳಲ್ಲಿರುವ ಭಾಷೆಯು ಜನಪದ ಭಾಷೆಯೆನ್ನಿಸಿಕೊಂಡಿದೆ. ವೇದಗಳಲ್ಲಿ ಮಾತ್ರ ಬಳಕೆಯಲ್ಲಿರುವ ಭಾಷೆಯು ವೈದಿಕ ಭಾಷೆಯೆನ್ನಿಸಿಕೊಂಡಿದೆ."

ಆದರೆ ಜನಪದ ಶಬ್ದಗಳೆನ್ನಿಸಿಕೊಂಡ ಹಸು, ಗಜ, ಪುರುಷ, ಪಕ್ಷಿ, ಪ್ರಾಣಿ ಮುಂತಾದ ಶಬ್ದಗಳು ವೇದಗಳಲ್ಲಿಯೂ ಕಂಡು ಬರುತ್ತವೆ. ನಃ, ತ್ವಾ, ಅಗ್ನಿಮ್, ಆಯಾಹಿ ಮುಂತಾದ ವೈದಿಕ ಶಬ್ದ ಪ್ರಯೋಗಗಳು ಜನಪದ ಭಾಷೆಯಲ್ಲಿಯೂ ಕಂಡು ಬರುತ್ತವೆ. ಈ ರೀತಿಯ ಶಬ್ದಗಳ ಸಾಂಕರ್ಯಕ್ಕೆ ಕೈಯಟನು ಕಾರಣವನ್ನು ಹೀಗೆ (ಮುಂದೆ ಹೇಳುವಂತೆ) ತಿಳಿಸಿಕೊಟ್ಟಿದ್ದಾನೆ.

"ಬ್ರಾಹ್ಮಣರು ಬಂದರು, ವಸಿಷ್ಠರೂ ಬಂದರು". ಎಂಬ ವಾಕ್ಯದಲ್ಲಿ ವಸಿಷ್ಠರೂ ಬ್ರಾಹ್ಮಣರ ಗುಂಪಿನಲ್ಲಿದ್ದ ಒಬ್ಬರೇ ಆದರೂ ಅವರು ಮಹಾಬ್ರಾಹ್ಮಣರು ಎಂಬ ವಿಶೇಷಣವನ್ನು ಒತ್ತಿ ಹೇಳಿದಂತೆ ಆಗಿದೆ. ಅವರ ಪ್ರಾಧಾನ್ಯವನ್ನು ತಿಳಿಸಿಕೊಟ್ಟಂತಾಗಿದೆ. ಇದೇ ರೀತಿ ಜನಪದ ಭಾಷೆಯಲ್ಲಿ ವೈದಿಕ ಶಬ್ದಗಳ ಪ್ರಯೋಗವಿದೆ. ವೈದಿಕ ಭಾಷೆಯಲ್ಲಿ ಅಪಭ್ರಂಶಗಳು ಉಂಟಾಗಬಾರದೆಂದು ಇಲ್ಲಿ ಆಶಯ. ಅಥವಾ ಜನಗಳ ಮಾತಿನಲ್ಲಿ ಮಾತ್ರ ಉಪಯೋಗಕ್ಕೆ ಬರುವ ನುಡಿಗಳು ಜನಪದ ಭಾಷೆಯೆನ್ನಿಸಿಕೊಳ್ಳುತ್ತವೆ ಎಂಬ ಅಭಿಪ್ರಾಯವೂ ಇರಬಹುದು.

"ಪ್ರದೀಪೋದ್ಯೋತ"ದಲ್ಲಿನ ಹೇಳಿಕೆಯಂತೆ ಭಾಷೆಯೆಂಬುದು ಪ್ರಯೋಜ್ಯ ಪ್ರಯೋಜಕ ವೃದ್ಧ ವ್ಯವಹಾರ. ಮನೆಯ ಅಂಗಳದಲ್ಲಿ ಇದ್ದ ವೃದ್ಧನು ತನ್ನ ಮಗನಿಗೆ 'ಹಸುವನ್ನು ಕರೆದು ತಾ' ಎಂದು ಹೇಳುತ್ತಾನೆ. ಆಗ ಮಗನು ಹಸುವನ್ನು ಕರೆದು ತರುತ್ತಾನೆ. ಇದನ್ನು ಕಂಡು ಕೇಳಿದ ಅಲ್ಲಿದ್ದ ಮಗುವು ಹಸು ಎಂಬ ನಾಮ ಪದವನ್ನು ಕರೆದು ತರುವಿಕೆ ಎಂಬ ಕ್ರಿಯಾಪದವನ್ನೂ ಕೇಳಿ, ಆ ಪದಗಳ ಅರ್ಥವನ್ನು ತಿಳಿಯುತ್ತದೆ. ಹೀಗೆಯೇ ಲೋಕದಲ್ಲಿ ಭಾಷೆಯ ಅಭ್ಯಾಸವಾಗುತ್ತದೆ. ಇದನ್ನು 'ಪ್ರಯೋಜ್ಯ ಪ್ರಯೋಜಕ ವೃದ್ಧವ್ಯವಹಾರ' ಎನ್ನುತ್ತಾರೆ. ಹೀಗೆ ಉಪಯೋಗಿಸುವ ಶಬ್ದಗಳು ಲೌಕಿಕ ಶಬ್ದಗಳೆನ್ನಿಸಿಕೊಳ್ಳುತ್ತವೆ.

'ಕರ್ಣೇಭಿರ್ದೇವಾಸೋ ಗೃಭ್ಣಾಮಿ' ಮುಂತಾದ ವೇದಗಳಲ್ಲಿ ಮಾತ್ರ ಕಂಡು ಬರುವ ಶಬ್ದಗಳನ್ನುಳಿದ ಬೇರೆಲ್ಲಾ ಭಾಷಾಶಬ್ದಗಳೂ ಜನಪದದಲ್ಲಿ ವ್ಯವಹಾರದಿಂದಲೇ ಬಳಕೆಗೆ ಬಂದಿವೆ. ಹಸು, ಕುದುರೆ, ಗಜ ಮುಂತಾದುವುಗಳನ್ನು ಕೇವಲ ಉದಾಹರಣೆಗಾಗಿ ಇಲ್ಲಿ ಹೆಸರಿಸಿದೆ.

ವೇದಗಳಲ್ಲಿ ಉದಾತ್ತ, ಅನುದಾತ್ತಾದಿ ಸ್ವರಗಳಿಗೆ ಪ್ರಾಮುಖ್ಯವಿದೆ. ಶಂ, ನಃ ಮುಂತಾದುವು ಸ್ವರಸಹಿತವಾದ ವೈದಿಕಶಬ್ದಗಳಿಗೆ ಉದಾಹರಣೆಯಾಗಿವೆ. ಹೀಗಿರುವುದರಿಂದ, ವೇದಗಳಲ್ಲಿ ಮಾತ್ರ ಬಳಕೆಯಾಗಿರುವ ವಿಶಿಷ್ಟರೂಪದ ಸ್ವರಸಹಿತ ಶಬ್ದಗಳನ್ನು ವೈದಿಕಶಬ್ದಗಳೆಂದು ಹೇಳಬಹುದು.

ವೇದಗಳಲ್ಲಿ ಹೇಳಿದ್ದರೂ ಉದಾತ್ತಾದಿ ಸ್ವರಗಳನ್ನು ಗಣನೆಗೆ ತಾರದೆ, ಜನಪದ ನುಡಿಯಲ್ಲಿಯೂ ಬಳಕೆಯಿದ್ದವುಗಳನ್ನೂ, ವೇದಗಳಲ್ಲಿ ಕಾಣದೆ ಕೇವಲ ಶಿಷ್ಟರ ವ್ಯವಹಾರದಲ್ಲಿ ಗೋಚರವಾಗುವವುಗಳನ್ನೂ

ಜನಪದ ಶಬ್ದಗಳೆಂದು ಪರಿಗಣಿಸಬಹುದು. ಇದಲ್ಲದೆ ಗಾವೀ, ಗೋಣೀ ಮುಂತಾದ ಅಪಭ್ರಂಶಗಳು ಅಲ್ಲಲ್ಲಿ ಕಂಡು ಬರುತ್ತವೆ. ಇವುಗಳಿಗೂ ವ್ಯಾಕರಣಶಾಸ್ತ್ರದಂತೆ ನಿಯಮಗಳನ್ನು ಮಾಡಬೇಕಾಗುತ್ತದೆ ಎಂಬುದು ಇನ್ನೊಂದು ಶಂಕೆ. 'ಪದಮಂಜರೀ' ಎಂಬ ಗ್ರಂಥದ ಕರ್ತೃವಾದ ಹರದತ್ತನು ಇದಕ್ಕೆ ಹೀಗೆ ಉತ್ತರ ಕೊಟ್ಟಿದ್ದಾನೆ. "ಆಯಾ ಪ್ರದೇಶಗಳಲ್ಲಿ ಭಿನ್ನ ಭಿನ್ನ ರೀತಿಯಲ್ಲಿ ಅಪಶಬ್ದಗಳ ಬಳಕೆಯಾಗುತ್ತಿದೆ. ಎಲ್ಲಾ ಸ್ಥಳಗಳಲ್ಲಿ ತಿಳಿದಿರುವ ಒಂದೇ ರೀತಿಯಲ್ಲಿ ಈ ಶಬ್ದಗಳ ಬಳಕೆ ಇಲ್ಲ." **'ಭಾಷ್ ವ್ಯಕ್ತಾಯಾಂ ವಾಚಿ'** ಎಂಬ ಧಾತುವಿದೆ. **"ಗುರೋಶ್ಚಹಲಃ"** ಸೂತ್ರದಿಂದ **'ಅ'** ಪ್ರತ್ಯಯವೂ ಕೂಡಿಕೊಂಡು ಭಾಷಾ ಎಂಬ ಶಬ್ದವು ಪ್ರಯೋಜಕ ಪ್ರಯೋಜ್ಯ ವೃದ್ಧ ವ್ಯವಹಾರಗಳಲ್ಲಿ ಪ್ರಚಲಿತವಾಗಿರುವ ಶುದ್ಧವಾದ ಶಬ್ದಗಳ ಪ್ರಯೋಗ. ವೇದಗಳ ಭಾಷೆಯು ವೈದಿಕ ಭಾಷೆಯೆನ್ನಿಸಿಕೊಳ್ಳುತ್ತದೆ. ಅದು ಜನಪದ ಭಾಷೆಯಲ್ಲ. ಆಚಾರ್ಯ ಪಾಣಿನಿಯುವರು ವೇದಗಳಲ್ಲಿ ಮಾತ್ರ ಕಂಡು ಬರುವ ಶಬ್ದಗಳನ್ನು ಛಂದಸಿ, ನಿಗಮೇ ಮುಂತಾದ ಪದಗಳಿಂದ ವಿಭಾಗ ಮಾಡಿದ್ದಾರೆ. ಭಾಷಾಯಾಮ್ ಅಥವಾ ಛಂದಸಿ ಎಂದು ಪ್ರತ್ಯೇಕವಾಗಿ ಸೂಚನೆ ಕೊಟ್ಟಿಲ್ಲದಿದ್ದರೆ ಅಂತಹ ಶಬ್ದಗಳು ವೈದಿಕ ಪ್ರಯೋಗದಲ್ಲಿಯೂ ಲೌಕಿಕ ಪ್ರಯೋಗದಲ್ಲಿಯೂ ಇವೆಯೆಂದು ತಿಳಿಯಬೇಕು. (ಪ್ರಾಕೃತ ಭಾಷೆ, ಕನ್ನಡ ಭಾಷೆ, ಆಂಗ್ಲ ಭಾಷೆ ಮುಂತಾದುವುಗಳಲ್ಲಿ ಇರುವ ಭಾಷೆ ಎಂಬ ಶಬ್ದವು ಗೌಣಾರ್ಥಕವಾಗಿದೆ.)

ವೈದಿಕ ಶಬ್ದಗಳು ಒಂದೇ ಸ್ವರೂಪದಲ್ಲಿಲ್ಲ. ಅವುಗಳನ್ನು ಅರ್ಥಮಾಡಿಕೊಳ್ಳುವುದು ಅತ್ಯಂತ ಕಠಿಣ. ಋಗ್ವೇದದಲ್ಲಿ, ಯಜುರ್ವೇದದಲ್ಲಿ, ಸಾಮವೇದದಲ್ಲಿ, ಮಂತ್ರ ಬ್ರಾಹ್ಮಣಗಳಲ್ಲಿ ಉಪಯೋಗಿಸಿರುವ ಪದಗಳಲ್ಲಿ ಸಂಧಿಕಾರ್ಯವೂ ಬೇರೆಯಾಗಿದೆ. 'ಇದು ಹೀಗೆಯೇ ಸರಿ' ಎಂದು ವ್ಯವಸ್ಥೆಮಾಡಲು ಸಾಧ್ಯವಾಗದ ರೀತಿಯಲ್ಲಿ ಪದಗಳನ್ನು ಉಪಯೋಗಿಸಿದ್ದಾರೆ. ಆಚಾರ್ಯ ಪಾಣಿನಿಯುವರು ಜನಪದ ಶಬ್ದಗಳಿಗೆ ನಿರ್ದಿಷ್ಟವಾದ ನಿಯಮಗಳನ್ನು ಮಾಡಿದ್ದಾರೆ. ಆದರೆ ವೈದಿಕ ಶಬ್ದಗಳಿಗೆ ಆ ರೀತಿಯ ನಿಯಮಗಳನ್ನು ಮಾಡಲು ಅವರಿಗೆ ಸಾಧ್ಯವಾಗಿಲ್ಲ. ಆದ್ದರಿಂದಲೇ 'ಬಹುಲಂ ಛಂದಸಿ', ವಿಭಾಷಾ ಛಂದಸಿ' ಮುಂತಾದ ಸೂತ್ರಗಳನ್ನು ರಚಿಸಿದ್ದಾರೆ. (ಬಹುಲ, ವಿಭಾಷಾ ಮುಂತಾದ ಶಬ್ದಗಳನ್ನು ಸೂತ್ರಗಳಲ್ಲಿ ಪ್ರಯೋಗಿಸಿದ್ದರೆ, ಅಲ್ಲಿ ನಿಯಮ ಹೇಳುವ ಶಬ್ದಗಳಿಗೆ ಎರಡು ಅಥವಾ ಅದಕ್ಕಿಂತಲೂ ಹೆಚ್ಚು ಸಾಧು ರೂಪಗಳಿರುತ್ತವೆ.)

'ಸುಪ್ ತಿಙ್ ಉಪಗ್ರಹ ಲಿಂಗನರಾಣಾಂ ಕಾಲಹಲಚ್‌ಸ್ವರ ಕರ್ತೃಯಜಾಂಶ್ಚ ।
ವ್ಯತ್ಯಯ ಮಿಚ್ಛತಿ ಶಾಸ್ತ್ರಕೃದೇಷಾಂ ಸೋಽಪಿ ಚ ಸಿಧ್ಯತಿ ಬಾಹುಲಕೇನ ॥

ಆಚಾರ್ಯ ಪಾಣಿನಿಯುವರು ಉದಾತ್ತ ಅನುದಾತ್ತಾದಿ ಸ್ವರಗಳನ್ನು ನಿಯಮ ಮಾಡಿರುವ ರೀತಿಯು ವಿದ್ವಾಂಸರಿಗೂ ಆಶ್ಚರ್ಯವನ್ನುಂಟು ಮಾಡುತ್ತದೆ. ಆದರೆ ವೈದಿಕ ಶಬ್ದಗಳು ಅಲ್ಲಿ ಪ್ರಯೋಗವಾಗಿರುವಂತೆಯೇ ವ್ಯವಹಾರ. ಈ ಶಬ್ದಗಳನ್ನು ಸಾಮಾನ್ಯ ಜನರು ಅರ್ಥಮಾಡಿಕೊಳ್ಳುವುದು ಕಷ್ಟ. ಹೀಗಿರುವಾಗ ಅಂತಹ ಶಬ್ದಗಳಿಂದ

ಸಾಮಾನ್ಯವ್ಯವಹಾರವೂ ಸಾಧ್ಯವಿಲ್ಲ. ಆದ್ದರಿಂದ ಜನಪದಭಾಷೆಯನ್ನು ವೈದಿಕ ಭಾಷೆಯಿಂದ ಬೇರೆಯಾಗಿ ವಿಂಗಡಿಸಿದೆ. ಇಂತಹ ಸರಳ ಭಾಷೆಯೇ ಜನರಲ್ಲಿ ಆಡು ನುಡಿಯಾಗಿದೆ. ನಮ್ಮ ಅಭಿಪ್ರಾಯಗಳನ್ನು ಇನ್ನೊಬ್ಬರಿಗೆ ತಿಳಿಯಪಡಿಸಲು ಜನಪದ ಭಾಷೆಯ ಉಪಯೋಗ. ಈ ಶಬ್ದಗಳನ್ನು ಒಂದೇ ರೀತಿಯಲ್ಲಿ ವ್ಯವಸ್ಥಿತ ಮಾಡಬಹುದು. ಇಂತಹ ಸರಳ ಶಬ್ದಗಳನ್ನು ವೈದಿಕ ಭಾಷೆಯಿಂದಲೇ ಆಯ್ದುಕೊಂಡಿದೆ. ಇಂತಹ ಶಬ್ದಗಳು ಲೌಕಿಕದಲ್ಲಿ ಆಡುನುಡಿಯಾದಂತೆ ಅವುಗಳ ಅಪಭ್ರಂಶ ಪ್ರಯೋಗವೂ ಸಹಜವಾಗಿಯೇ ಇರುತ್ತದೆ. ಪದಗಳ ಅಪಭ್ರಂಶಪ್ರಯೋಗಕ್ಕೆ ಹಲವಾರು ಕಾರಣಗಳಿರುತ್ತವೆ. 1. ಶಬ್ದಗಳ ಶುದ್ಧಪ್ರಯೋಗಕ್ಕೆ ಗಮನ ಕೊಡದಿರುವುದು. 2. ಆಲಸ್ಯ 3. ಕೆಲವರಲ್ಲಿ ಕರಣದೋಷವು ಇರಬಹುದು. ಈ ರೀತಿಯ ಅಪಭ್ರಂಶ ಪ್ರಯೋಗಗಳನ್ನು ಋಷಿವರೇಣ್ಯರು ಸಹಿಸಲಿಲ್ಲ; ಶಬ್ದಗಳ ಪ್ರಕೃತಿ ಪ್ರತ್ಯಯಗಳನ್ನು ವಿಭಾಗಮಾಡಿ ತೋರಿಸಿ, ಅವುಗಳ ವ್ಯುತ್ಪತ್ತಿಯನ್ನು ಬೋಧಿಸಿದರು. ಶಬ್ದಸ್ವರೂಪದ ಸಂರಕ್ಷಣೆಗಾಗಿ ಶಬ್ದಾನುಶಾಸನವನ್ನೇ ರಚಿಸಿದರು. ಶುದ್ಧವಾಗಿ ಶಬ್ದಪ್ರಯೋಗ ಮಾಡುವುದರಲ್ಲಿ ಅನೇಕ ಪ್ರಯೋಜನಗಳಿವೆ. **'ರಕ್ಷೋಹಾಗಮಲಘ್ವಸಂದೇಹಾಃ ಪ್ರಯೋಜನಮ್'** ಎಂದು ಮಹಾಭಾಷ್ಯದಲ್ಲಿ ಹೇಳಿದೆ. ಇದರ ಹೆಚ್ಚು ವಿವರಣೆಯು ಸದ್ಯದಲ್ಲಿ ಬೇಕಿಲ್ಲ.

ವ್ಯಾಕರಣ ಶಾಸ್ತ್ರವು ಭಾಷೆಯ ಶುದ್ಧತೆಯನ್ನು ಕಾಪಾಡುವುದಕ್ಕಾಗಿ ರಚಿತವಾಗಿ, ಭಾಷೆಯನ್ನು ಸಂಸ್ಕರಿಸಿದೆ. ವೈದಿಕ ಶಬ್ದಗಳಿಂದ ವ್ಯವಹಾರಕ್ಕೆ ಸುಲಭವಾಗಿ ಶಬ್ದಗಳನ್ನು ಬೇರೆ ಮಾಡಿ ಇವುಗಳ ಪ್ರಕೃತಿ, ಪ್ರತ್ಯಯ, ವ್ಯುತ್ಪತ್ತಿ ಮೊದಲಾದವುಗಳನ್ನು ತಿಳಿಸಿಕೊಡುವುದು ಸಂಸ್ಕಾರ. ಹೀಗೆ ಸಂಸ್ಕಾರಗೊಂಡಿದ್ದು ಸಂಸ್ಕೃತ. ಸಂಸ್ಕೃತಗೊಂಡ ಭಾಷೆಯೇ ಸಂಸ್ಕೃತ ಭಾಷೆ. ವ್ಯಾಕರಣ ಶಾಸ್ತ್ರಕಾರರೇ ಭಾಷೆಯನ್ನು ಸಂಸ್ಕಾರ ಮಾಡಿದವರು. ಮೂಲಭಾಷೆಯೇ ವೈದಿಕ ಭಾಷೆ ಎನ್ನುವುದು ಸ್ಪಷ್ಟ.

ಇದಕ್ಕೆ ಒಂದು ಋಕ್ ಮಂತ್ರದ ಉದಾಹರಣೆಯಿದೆ.

'ಸಕ್ತುಮಿವ ತಿತಉನಾ ಪುನಂತೋ ಯತ್ರ ಧೀರಾ ಮನಸಾವಾಚಮಕ್ರತ ।
ಅತ್ರಾ ಸಖಾಯಃ ಸಖ್ಯಾನಿ ಜಾನತೇಭದ್ರೈಷಾಂ ಲಕ್ಷ್ಮೀರ್ನಿಹಿತಾಧಿವಾಚಿ ॥
(ಋಕ್ – ಮಂತ್ರ – 10-71-2)

'ಪ್ರದೀಪೋದ್ಯೋತ' ಎಂಬ ಗ್ರಂಥದ ಕರ್ತೃವಾದ ನಾಗೇಶಭಟ್ಟ ಆಚಾರ್ಯರು ಇದಕ್ಕೆ ಹೀಗೆ ವ್ಯಾಖ್ಯಾನ ಮಾಡಿದ್ದಾರೆ.

'ಜ್ಞಾನಿಗಳಾದ ಆಚಾರ್ಯರು ಧ್ಯಾನದಿಂದ ಕೂಡಿದವರಾಗಿ, ಅನೇಕ ಶಬ್ದಗಳಿಗೆ ಅಭೇದವನ್ನು ತಿಳಿಸಿಕೊಟ್ಟು, ಬ್ರಹ್ಮ ತತ್ತ್ವವನ್ನು ಬೋಧಿಸಿದರು. ಹಿಟ್ಟನ್ನು ಜರಡಿ ಹಿಡಿದು ಕಲ್ಮಶವನ್ನು ಬೇರ್ಪಡಿಸುವಂತೆ ಅಶುದ್ಧ ಶಬ್ದಗಳಿಂದ ಶುದ್ಧ ಶಬ್ದಗಳನ್ನು ಬೇರೆಮಾಡಿಕೊಟ್ಟಿದ್ದಾರೆ.

ಬ್ರಹ್ಮೈಕತ್ವ (ಜೀವಾತ್ಮ ಪರಮಾತ್ಮರಿಗೆ ಅಭೇದ ಜ್ಞಾನ)ವನ್ನು ನಿರೂಪಿಸಿ ಮೋಕ್ಷ ಮಾರ್ಗವನ್ನು ಪಡೆದಿದ್ದಾರೆ. ಇಂತಹ ಜ್ಞಾನಿಗಳ ನುಡಿಯಲ್ಲಿಯೇ ಸ್ವಪ್ರಕಾಶವಾದ, ಶುದ್ಧಬ್ರಹ್ಮ ಸ್ವರೂಪವಾದ ಮಂಗಳವು ಸ್ಥಿರವಾಗಿರುತ್ತದೆ ಎನ್ನುವುದೇ ಈ ಋಕ್ ಮಂತ್ರದ ಸಾರ.

ವ್ಯಾಕರಣ, ವ್ಯಾಕೃತ ಎಂಬ ಶಬ್ದಗಳು ಸಂಹಿತಾ ಬ್ರಾಹ್ಮಣ ಮುಂತಾದ ಅನೇಕ ಗ್ರಂಥಗಳಲ್ಲಿ ಕಾಣಿಸಿಕೊಳ್ಳುತ್ತವೆ. ತೈತ್ತರೀಯ ಸಂಹಿತೆಯಲ್ಲಿ (6.4.7)

'ವಾಗ್ವೈ ಪರಾಚ್ಯ ವ್ಯಾಕೃತಾವದತ್, ತೇ ದೇವಾ ಇಂದ್ರಮ್ ಅಬ್ರುವನ್, ಇಮಾಂ ನೋ ವಾಚಂ ವ್ಯಾಕುರ್ವಿತಿ.'

ಸಾಯಣ ಭಾಷ್ಯದಲ್ಲಿ – **'ತಾಮುಖಂಡಾಂ ವಾಚಂ ಮಧ್ಯೇ ವಿಚ್ಛಿದ್ಯ ಪ್ರಕೃತಿ ಪ್ರತ್ಯಯವಿಭಾಗಂ ಕೃತವಾನ್'**. ಬೇರೊಂದು ಋಕ್ ಮಂತ್ರ –

'ಚತ್ವಾರಿಶೃಂಗಾಃ ತ್ರಯೋಽಸ್ಯ ಪಾದಾಃ
ಚತ್ವಾರಿ ವಾಕ್ಪರಿಮಿತಾ ಪದಾನಿ ।

ಗೋಪಥ ಬ್ರಾಹ್ಮಣದಲ್ಲಿ,

ಓಂಕಾರಂ ಪೃಚ್ಛಾಮಃ, ಕೋಧಾತುಃ ? ಕಿಂ ಪ್ರಾತಿಪದಿಕಮ್ ? ಕಿಂ ನಾಮ ಆಖ್ಯಾತಮ್ ? ಮುಂತಾಗಿ ವ್ಯಾಕರಣದ ಉಲ್ಲೇಖಗಳಿವೆ.

ಶಬ್ದಾನುಶಾಸನದಂತೆ ವೈದಿಕಶಬ್ದಗಳಿಗೂ ಸಂಸ್ಕೃತ ಎಂದು ವ್ಯವಹಾರವಿದೆ. ಈಗ ಉಪಲಭ್ಯವಿರುವ ವೇದಗಳಲ್ಲಿ ಕೆಲವು ಶಬ್ದರೂಪಗಳ ಪ್ರಯೋಗವು ಕಾಣುವುದಿಲ್ಲ. **'ಪ್ರಥಮಾಯಾಶ್ಚ ದ್ವಿವಚನೇ ಭಾಷಾಯಾಮ್'** ಎಂಬ ಸೂತ್ರದಂತೆ ಕೆಲವು ಶಬ್ದಗಳ ವ್ಯುತ್ಪತ್ತಿಯನ್ನು ಲೌಕಿಕ ಶಬ್ದಗಳಿಗೆ ಮಾತ್ರ ಹೇಳಿದೆ. **'ಅನಂತಾ ವೈ ವೇದಾಃ'** ಎಂಬ ನುಡಿಯಂತೆ ನಮಗೆ ಸಿಕ್ಕಿಲ್ಲದಿರುವ ವೇದಗಳಲ್ಲಿರುವ ಶಬ್ದ ರೂಪಗಳನ್ನು ಊಹಿಸುವುದೂ ಸಾಧ್ಯವಿಲ್ಲ. **'ಛಾಂದಸಾನಾಮೇವ'** ಎಂಬ ಸೂತ್ರದಂತೆ ವ್ಯುತ್ಪತ್ತಿ ಹೇಳಿರುವ ಶಬ್ದಗಳನ್ನು ವೇದಗಳಲ್ಲಿ ಕಾಣಬಹುದು.

ಜನಪದ ಭಾಷೆಯಲ್ಲಿ ಸ್ವರಸಹಿತವಾದ ಶಬ್ದೋಚ್ಚಾರಣೆಯು ಕಂಡು ಬರುವುದಿಲ್ಲ. ಉದಾತ್ತ ಅನುದಾತ್ತ ಸ್ವರಿತಸ್ವರಗಳನ್ನು ಈ ಲೌಕಿಕ ಉಪಯೋಗದಲ್ಲಿ ಸಂಪೂರ್ಣವಾಗಿ ಬಿಟ್ಟಿದ್ದಾರೆ. ಅದುದರಿಂದ ಇಲ್ಲಿ ಅಪಶಬ್ದಗಳು ಕಾಣಿಸಿಕೊಂಡಿವೆ. ಸ್ವರಗಳನ್ನು ವಿಧಿಸುವಾಗ ಛಂದಸ್ಸಿನಲ್ಲಿ ಮಾತ್ರ ಎಂದೇನೂ ವಿಧಿ ಮಾಡಿಲ್ಲ. ಏಕೆಂದರೆ ಛಂದಸ್ಸಿನಲ್ಲಿಯೂ ಮೂರು ರೀತಿಯ ಸ್ವರಗಳನ್ನು ಬಿಟ್ಟು ಏಕಶ್ರುತಿಯನ್ನು ಅನುಸರಿಸಿರುವುದು ಕಂಡು ಬರುತ್ತದೆ. ಇಲ್ಲಿ ಛಂದಸ್ಸು ಎಂದರೆ ವೇದಗಳೆಂದೇ ಅರ್ಥ. ಸ್ವರವಿಧಾಯಕ ಸೂತ್ರಗಳನ್ನು ರಚಿಸುವಾಗ ಆಚಾರ್ಯ ಪಾಣಿನಿಯವರು 'ವಿಭಾಷಾ ಛಂದಸಿ' ಎಂದು ಹೇಳುವುದರ ಮೂಲಕ ವಿಕಲ್ಪರೂಪಗಳೂ ಇವೆಯೆಂದು ತೋರಿಸಿಕೊಟ್ಟಿದ್ದಾರೆ. **'ಉಚ್ಚೈಸ್ತರಾಂ ವಾ ವಷಟ್ಕಾರಃ'** ಎಂದು ಮುಂದಿನ ಸೂತ್ರವಿದೆ. ಒಂದು ಸೂತ್ರದಲ್ಲಿ ವಿಭಾಷಾ ಎಂದು ಹೇಳುವುದರಿಂದಲೇ ವಿಕಲ್ಪ ರೂಪಗಳಿವೆಯೆಂದು ತಿಳಿಯುತ್ತವೆ. ಮತ್ತೆ ಮತ್ತೆ ಅಥವಾ ಎಂದು **'ವಾ'** ಶಬ್ದದ ಉಪಯೋಗವು ಉಚಿತವೇ ಎಂಬುದಕ್ಕೆ ಭಾಷ್ಯಕಾರರಾದ ಪತಂಜಲಿಗಳು ಹೀಗೆ ಹೇಳುತ್ತಾರೆ. **'ವಿಭಾಷಾ ಛಂದಸಿ'** ಸೂತ್ರವನ್ನು **'ವಿಭಾಷಾ ಅಚ್ಛಂದಸಿ'** ಎಂದು ವಿಭಾಗ ಮಾಡಿಕೊಳ್ಳಬೇಕು. ಆಗ ನಮಗೆ ಲೌಕಿಕ (ಜನಪದ) ಭಾಷೆಯಲ್ಲಿ ಸ್ವರಗಳ ವಿಧಾನವು ವಿಕಲ್ಪ ಎಂದು ತಿಳಿದು ಬರುತ್ತದೆ. ಎಲ್ಲವನ್ನೂ ಉದಾತ್ತ ಸ್ವರದಲ್ಲಿ ಹೇಳುವುದು. ಏಕಶ್ರುತಿ'. ಹೀಗೆಂದು ವೈಯಾಕರಣರಾದ ಕೈಯಟರು ಹೇಳಿದ್ದಾರೆ. **'ಏಕಶ್ರುತಿಃ ಸ್ವರಸರ್ವನಾಮ'** ಇದು ದಾಂಡಿನಾಯನರ ಮತ ಎಂದು

ಹೇಳಿದ್ದಾರೆ. ಇಲ್ಲಿ ಸರ್ವನಾಮಗಳೆಂದರೆ, ನಾಮಪದದ ಬದಲಾಗಿ ಅವುಗಳ ಸ್ಥಾನದಲ್ಲಿ ಪ್ರಯೋಗಿಸುವ ಶಬ್ದಗಳು 'ಅವನು, ಇವನು' ಮುಂತಾದುವು. ಈ ಸರ್ವನಾಮಗಳು ಸರ್ವಾರ್ಥ ಬೋಧಕಗಳು. ಹೇಗೆ ಸರ್ವನಾಮಗಳನ್ನು ಸರ್ವಪದಾರ್ಥಗಳ ತಿಳಿಯುವಿಕೆಯಲ್ಲಿ ಪ್ರಯೋಗ ಮಾಡಿದ್ದಾರೆಯೋ ಹಾಗೆ ಸರ್ವಸ್ವರಗಳ ಸ್ಥಾನದಲ್ಲಿ ಏಕಶ್ರುತಿಯನ್ನು ಪ್ರಯೋಗ ಮಾಡಬಹುದು ಎನ್ನುವುದೇ ಇಲ್ಲಿನ ಸಾರಾಂಶ. ಇದರಿಂದ ಉದಾತ್ತ ಅನುದಾತ್ತಾದಿ ಸ್ವರಗಳ ಪ್ರಯೋಗವೂ, ಏಕಶ್ರುತಿಯ ಪ್ರಯೋಗವೂ ಉಪಯೋಗಿಸುವವರ ಇಚ್ಛೆಯನ್ನು ಅವಲಂಬಿಸಿರುತ್ತವೆ.

'ಉದಾತ್ತಾದಿ ಸ್ವರಗಳ ಪ್ರಯೋಗವಿಲ್ಲದೆಯೇ ಜನಪದ ಭಾಷೆಯಲ್ಲಿ ವಾಕ್ಯಗಳು ಎರಡು ಅರ್ಥವನ್ನು ಕೊಡುವವುಗಳಾಗಿರುತ್ತವೆ' ಎಂದು ಪಸ್ಪಶಾಹ್ನಿಕ ಭಾಷ್ಯದಲ್ಲಿ ಹೇಳಿದೆ. ಉದಾಹರಣೆಗೆ – **'ಶ್ವೇತೋಧಾವತಿ', 'ಅಲಂಬುಸಾನಾಂ ಯಾತಾ'** ಮುಂತಾದ ವಾಕ್ಯಗಳು. **'ಶ್ವೇತೋ ಧಾವತಿ'** ಎಂಬಲ್ಲಿ ಯಾರು ಓಡುತ್ತಾರೆ ? ಎಂಬ ಪ್ರಶ್ನೆಗೆ **ಶ್ವ + ಇತ = ಶ್ವೇತ** ಎಂಬುವವನು ಎಂಬ ಅರ್ಥ ದೊರೆಯುತ್ತದೆ. ಎಂತಹವನು ಓಡುತ್ತಾನೆ ? ಎಂಬ ಪ್ರಶ್ನೆಗೆ ಶ್ವೇತಃ (ಬೆಳ್ಳಗಿರುವವನು) ಎಂಬ ಗುಣವಾಚಕವೂ ಉತ್ತರವಾಗುತ್ತದೆ.

ಅದರಂತೆಯೇ **'ಅಲಂಬುಸಾನಾಂ ಯಾತಾ'** ಎಂಬಲ್ಲಿ ಅಲಂಬುಸ ಎನ್ನುವುದು ಒಂದು ಸ್ಥಳ ವಿಶೇಷ. ಅಲಂಬುಸ ಎಂಬ ಸ್ಥಳಕ್ಕೆ ಹೋಗುವವನು ಎಂದು ಅರ್ಥ. ಬುಸಾ ಎಂದರೆ, ಪಲಾಲ ಅಥವಾ ಭತ್ತದ ಹೊಟ್ಟು ಎಂಬ ಅರ್ಥ. ಇದನ್ನು ಪಡೆಯಲು ಸಮರ್ಥನಾದವನು ಎಂಬ ಅರ್ಥವೂ ದೊರೆಯುತ್ತದೆ. ಹೀಗೆಯೇ ಪದ ಭೇದದಿಂದ, ಸ್ವರಭೇದದಿಂದ ಶಬ್ದಗಳ ಅರ್ಥಗಳು ಹೇಗೆ ಬೇರೆಯಾಗುತ್ತವೆ. ಬೇರೆ ಅರ್ಥಗಳನ್ನು ಹೊಂದಿರುವ ಶಬ್ದಗಳು ಒಂದು ವಾಕ್ಯವಾಗುತ್ತದೆ. ಆದ್ದರಿಂದ ಲೌಕಿಕವಾದ ಜನಭಾಷೆಯಲ್ಲಿ ಏಕಶ್ರುತಿಯನ್ನು ಆಶ್ರಯಿಸಬೇಕಾಗುತ್ತದೆ. ಸ್ವರಗಳ ವಿರುದ್ಧ ಪ್ರಯೋಗದಿಂದ ಸಮಾಸಗಳು ಬೇರೆಯಾಗುತ್ತವೆ. ತತ್ಪುರುಷ, ಬಹುವ್ರೀಹಿ ಸಮಾಸಗಳಿಂದ ಕೂಡಿದ ಪದಗಳ ಅರ್ಥವೂ ಬೇರೆಯಾಗುತ್ತದೆ. ಇಂತಹ ದ್ವಂದ್ವಾರ್ಥಗಳನ್ನು ಕೊಡುವ ಶಬ್ದಗಳ ಉಪಯೋಗವನ್ನು ಮಹಾಕವಿಗಳ ಕಾವ್ಯಗಳಲ್ಲಿ ಕಾಣುತ್ತೇವೆ. ಉದಾಹರಣೆಗೆ

ಅಹಂ ಚ ತ್ವಂ ಚ ರಾಜೇಂದ್ರ ಲೋಕನಾಥೌ ಉಭೌ ಅಪಿ ।
ಬಹುವ್ರೀಹಿರಹಂರಾಜನ್ ಷಷ್ಠೀ ತತ್ಪುರುಷೋ ಭವಾನ್ ॥

ಇಲ್ಲಿ ಒಬ್ಬ ಭಿಕ್ಷುಕನು ರಾಜನಿಗೆ ಹೇಳುತ್ತಾನೆ 'ಎಲೈ ರಾಜನೇ ನಾನೂ ನೀನೂ ಇಬ್ಬರೂ ಲೋಕನಾಥರೇ, ನಾನು ಬಹುವ್ರೀಹಿ ಸಮಾಸದವನು ನೀನು ಷಷ್ಠೀ ತತ್ಪುರುಷ ಸಮಾಸದವನು.'

ಲೋಕನಾಥ ಎಬ ಶಬ್ದವನ್ನು ಬಿಡಿಸಿದಾಗ ಬಹುವ್ರೀಹಿ ಸಮಾಸವಾದರೆ ಲೋಕವನ್ನೇ ಒಡೆಯನನ್ನಾಗಿ ಉಳ್ಳವನು ಯಾರೋ ಅವನು ಲೋಕನಾಥ. ಒಬ್ಬ ಭಿಕ್ಷುಕನಿಗೆ ಇಡೀ ಜನತೆಯು ಒಡೆಯನಂತೆ ಇರುತ್ತದೆ. 'ಲೋಕನಾಥ' ಶಬ್ದವನ್ನು ಷಷ್ಠೀ ತತ್ಪುರುಷ ಸಮಾಸವನ್ನಾಗಿ ಮಾಡಿದರೆ ಆಗ ಲೋಕಸ್ಯ ನಾಥಃ – ಲೋಕಕ್ಕೆ ಒಡೆಯ ಎಂಬ ಅರ್ಥವು ದೊರೆಯುತ್ತದೆ. ಈ ಅರ್ಥವು ರಾಜನಿಗೆ ಹೊಂದುತ್ತದೆ.

ಒಟ್ಟು ಅರ್ಥವು ವೇದದಲ್ಲಿಯೂ ಏಕಶ್ರುತಿಯು ಐಚ್ಛಿಕ ಎಂಬುದನ್ನು ವೃತ್ತಿಕಾರರು ಪ್ರತಿಪಾದಿಸಿದ್ದಾರೆ. ಇಂದಿಗೂ ಕೆಲವರು ಏಕಶ್ರುತಿಯಲ್ಲಿ ವೇದಾಧ್ಯಯನವನ್ನು ಮಾಡುತ್ತಾರೆ.

ಶ್ರದ್ಧೆಯುಳ್ಳವನು ಸ್ವರಸಹಿತವಾಗಿ ವೇದಗಳನ್ನು ಅಧ್ಯಯನ ಮಾಡಬೇಕೆಂಬ ಅಭಿಪ್ರಾಯವೇ ಇದೆ. ಲಘುಶಬ್ದೇಂದುಶೇಖರ, ಪ್ರದೀಪೋದ್ಯೋತ ಗ್ರಂಥಗಳಲ್ಲಿ ಸ್ವರಗಳ ಬಗ್ಗೆ ವಿಸ್ತಾರವಾಗಿ ತಿಳಿಯಬಹುದು. ಸ್ವರರಹಿತವಾದ ಪ್ರಯೋಗವು ಲೌಕಿಕಶಬ್ದಗಳಲ್ಲಿ ಸರಿಯಾದದ್ದೇ ಆಗಿದೆ. ಇದರಿಂದ ಅಪಶಬ್ದಗಳುಂಟಾದವು (ಸ್ವರರಹಿತ ಪ್ರಯೋಗದಿಂದ) ಎಂದೇನೂ ಇಲ್ಲ. ಸ್ವರಗಳ ಬಗ್ಗೆ ಮತ್ತಿಷ್ಟು ತಿಳಿಯಬೇಕಾಗಿದೆ. ಪ್ರಧಾನವಾಗಿ ಮೂರು ಸ್ವರಗಳೆಂದು ತಿಳಿದೆವು. ಅದರ ಒಳಭೇದಗಳು ಅನೇಕ. ಉದಾತ್ತ, ಉದಾತರ, ಅನುದಾತರ, ಸ್ವರಿತೇಯ. ಯಾವುದರ ಪೂರ್ವಾಂಶವು ಉದಾತ್ತವಾಗಿ ಮುಂದಿನ ಅಂಶವು ಅನುದಾತ್ತವಾಗಿದೆಯೋ ಅದು ಸ್ವರಿತ.

ಮತ್ತೆ ಸ್ವರಿತದ ಜಾತಿಯಲ್ಲಿ ಅಭಿನಿಹಿತ, ಕ್ಷೈಪ್ರ, ಪ್ರಶ್ಲಿಷ್ಟ ಮುಂತಾದ ಎಂಟು ಭೇದಗಳು. ಇವುಗಳ ಉಚ್ಚಾರಣವಿಧಿಯು ಗುರೂಪದೇಶವಿಲ್ಲದೆ ತಿಳಿಯಲು ಸಾಧ್ಯವೇ ಇಲ್ಲ. ಸ್ವರಗಳ ಪ್ರಕ್ರಿಯೆಯು ಉತ್ಸರ್ಗ ಅಪವಾದಗಳಿಂದ ಕೂಡಿ ಅತ್ಯಂತ ಜಟಿಲವಾಗಿದೆ. ವ್ಯಾಕರಣ ಶಾಸ್ತ್ರವನ್ನು ಅಧ್ಯಯನಮಾಡದೆ, ಪ್ರಾತಿಶಾಖ್ಯಗಳನ್ನು ಅರ್ಥಮಾಡಿಕೊಳ್ಳದೆ ಇರುವವನಿಗೆ ಈ ಸ್ವರಗಳ ಸಂಚಾರಕ್ರಮವನ್ನು ತಿಳಿಯುವುದು ಅಸಾಧ್ಯ. ಪ್ರತ್ಯಯಗಳು ಬೇರೆಯಾದಾಗಲೂ ಸಮಾಸಗಳು ಬೇರೆಯಾದಾಗಲೂ ಸ್ವರಗಳೂ ವ್ಯತ್ಯಾಸವಾಗುತ್ತವೆ. ಬೇರೆ ಬೇರೆ ಸ್ವರಗಳಿಂದ ಆರಂಭವಾಗುವ ಪದಗಳನ್ನು ಉಪಯೋಗಿಸುವಾಗ ಅದರ ಹಿಂದಿರುವ ಪೂರ್ವಪದಕ್ಕೆ ಬೇರೆ ಸ್ವರಗಳು ಆದೇಶವಾಗಿ ಬರುತ್ತದೆ. ಆದರೆ ಆಡುಮಾತಾದ ಜನಪದಭಾಷೆಯಲ್ಲಿ ನಿಯಮದಂತೆ ಸ್ವರಗಳನ್ನು ಅನುಸರಿಸುವುದು ಎಲ್ಲಿಯೂ ಕಂಡು ಬಂದಿಲ್ಲ. ಒಬ್ಬೊಬ್ಬ ಮನುಷ್ಯನ ಉಚ್ಚಾರಣೆಯೂ ಬೇರೆ ಬೇರೆಯಾಗಿರುತ್ತದೆ. ಒಂದೊಂದು ವಾಕ್ಯದ ಉಚ್ಚಾರಣೆಯೂ ಅದರ ಹಿಂದಿನ ವಾಕ್ಯಗಳ ಅನುಸರಣೆಯಂತೆ ಬೇರೆ ಬೇರೆಯಾಗಿರುತ್ತದೆ. ಹೀಗಾಗಿ ಇರುವಾಗ ಜನಪದಭಾಷೆಯಲ್ಲಿ ಉದಾತ್ತ ಅನುದಾತ್ತಾದಿ ಸ್ವರಗಳನ್ನು ಅನುಸರಿಸುವುದು ಹೇಗೆ ಸಾಧ್ಯ.

ಹಿಂದಿನ ಪದಗಳನ್ನು ಅನುಸರಿಕೊಂಡೇ ಮುಂದಿನ ಪದಗಳ ಸ್ವರಗಳನ್ನು ವಿಧಿಮಾಡುವಂತಹ ನಿಯಮಗಳು ವೇದಗಳಲ್ಲಿ ಮಾತ್ರ ಸಿದ್ಧ. ಆದ್ದರಿಂದಲೇ ಇಂತಹ ಸಾಂಪ್ರದಾಯಿಕ ಕ್ರಮದಿಂದ ವೇದಾಧ್ಯಯನ ಮಾಡಿದ ಗುರುಗಳು ಅದೇ ರೀತಿಯ ಸ್ವರ ವಿನ್ಯಾಸಗಳಿಂದ ಶಿಷ್ಯನಿಗೆ ಬೋಧಿಸುತ್ತಿದ್ದರು.

ಈ ಎಲ್ಲ ಕಾರಣಗಳಿಂದ ಜನಪದಭಾಷೆಯಲ್ಲಿ ಸ್ವರಗಳನ್ನು ಅನುಸರಿಸುವ ವಿಧಾನವು ಸಂಪೂರ್ಣವಾಗಿ ಬಿಟ್ಟು ಹೋಗಿದೆ. ಏಕಶ್ರುತಿಯ ಅನುಸರಣೆ ಮಾತ್ರ ಉಳಿದುಕೊಂಡಿದೆ. ಅಪಭ್ರಂಶಪದ ಪ್ರಯೋಗಕ್ಕೆ ಸ್ವರಗಳ ಅನುಸರಣೆಯು ಕಾರಣವಲ್ಲ ಎಂದು ಹಿಂದೆಯೇ ಹೇಳಿದೆ. ಸಂಸ್ಕೃತ ಮೂಲದಿಂದ ಬಂದ ಗ್ರೀಕ್ ಹೈಜರ್ಮನ್ ಮೊದಲಾದ ಭಾಷೆಗಳಲ್ಲಿ ಈ ಸ್ವರಗಳ ವಿಧಾನವು ಕೆಲವು ಕಾಲ ಮುಂದುವರೆದಿತ್ತು ಎನ್ನುವುದು ಭಾಷಾಶಾಸ್ತ್ರಜ್ಞರ ಅಭಿಪ್ರಾಯ.

ವೈದಿಕಾ ಲೌಕಿಕಾಶ್ಚೇತಿ ಶಬ್ದಭೇದೋ ಗುಣಾಶ್ರಯಃ ।
ಸಂಸ್ಕಾರಾದ್ವೈದಿಕಾಃ ಶಬ್ದಾಃ ಭಾಷಾಯಾಂ ಲೌಕಿಕಾಃ ಸ್ಮೃತಾಃ ॥

ಗುಣಗಳ ಆಧಾರದಿಂದ ಶಬ್ದಗಳಲ್ಲಿ ಲೌಕಿಕ ಶಬ್ದಗಳು ಮತ್ತು ವೈದಿಕ ಶಬ್ದಗಳೆಂಬ ಎರಡು ಭೇದಗಳಿವೆ. ಸ್ವರಯೋಜನೆ ಮುಂತಾದುವುಗಳಿಂದ ಸಂಸ್ಕರಿಸಿದ ಶಬ್ದಗಳು ವೈದಿಕಗಳೆನ್ನಿಸಿಕೊಂಡವು.

ವೇದಾಂಬುಧೇಃ ಸಮುದ್ಧಾರಂ ಸಂಸ್ಕಾರಂ ಪರಿಚಕ್ಷತೇ ।

ಸಂಸ್ಕಾರಃ ಶಬ್ದಶಾಸ್ತ್ರೇಣ, ನೃಣಾಂ ಸಃ ಕ್ಲೇಶಹಾನಯೇ ॥

ವೇದವೆಂಬ ಸಾಗರದಿಂದ ಮೇಲೆತ್ತಿಕೊಂಡ ನಿಯಮವು ಸಂಸ್ಕಾರವೆನ್ನಿಸಿಕೊಳ್ಳುತ್ತದೆ. ಇಂತಹ ಸಂಸ್ಕಾರವು ಶಬ್ದ ಶಾಸ್ತ್ರಕ್ಕೆ ಸರಿಯಾಗುತ್ತದೆ. ಸಾಮಾನ್ಯ ಜನರಿಗೆ ಇದನ್ನು ಅನುಸರಿಸುವುದು ಕಷ್ಟ. ಅವರಿಗೆ ಪ್ರಯೋಗ ಸೌಲಭ್ಯ ಒದಗಲಿ ಎಂದು ವ್ಯಾಕರಣದಿಂದ ಶಬ್ದಸಂಸ್ಕಾರ.

ತ್ರೈಸ್ವರ್ಯೇಣ ಪರಿತ್ಯಕ್ತಂ ಭಾಷಾಯಾಂ ತದಸಂಭವಾತ್ ।
ಏಕಶ್ರುತ್ಯೇನ ವೈಧೇನ ವ್ಯವಹಾರೋ ನ ದುಷ್ಯತಿ ॥

ಲೌಕಿಕ ಭಾಷೆಯಲ್ಲಿ ಉದಾತ್ತ ಅನುದಾತ್ತಾದಿ ಸ್ವರಗಳನ್ನು ಅನುಸರಿಸುವುದು ಕಷ್ಟವೆಂದು ಕೈಬಿಡಲಾಗಿದೆ. ಏಕಶ್ರುತಿಯನ್ನು ಅನುಸರಿಸಿ ವ್ಯವಹಾರ ಮಾಡುವುದರಲ್ಲಿ ದೋಷವೇನೂ ಇಲ್ಲ. ಹೀಗಿರುವುದರಿಂದ ಕರ್ಣೇಭಿಃ, ದೇವಾಸಃ, ಗೃಭ್ಣಾಮಿ ಮುಂತಾದ ಪದಗಳನ್ನು ವೈದಿಕ ಶಬ್ದಗಳೆಂದೂ, ಗಾಂ ಆನಯ, ಸೋಽಯಂ ದೇವದತ್ತಃ ಮುಂತಾದ ಶಬ್ದಗಳನ್ನು ಲೌಕಿಕ ಅಥವಾ ಜನಪದ ಭಾಷೆಯೆಂದೂ ವಿಭಾಗ ಮಾಡಬಹುದು. ಎಲ್ಲ ಕಾಲಗಳಲ್ಲಿಯೂ ಎಲ್ಲರಿಂದಲೂ ಒಂದೇ ರೀತಿಯಲ್ಲಿ ಉಚ್ಚಾರಮಾಡುವ ಶಾಸ್ತ್ರವಿಷಯಗಳಲ್ಲಿ ಉಪಯೋಗವಾಗುವ ಭಾಷೆಯು ಸಂಸ್ಕೃತ ಭಾಷೆ. ಆಯಾ ದೇಶ ಕಾಲಗಳ ವ್ಯವಹಾರದಂತೆ ಸ್ವಲ್ಪ ಮಟ್ಟಿಗೆ ಬೇರೆ ರೀತಿಯಲ್ಲಿ ಉಚ್ಚಾರ ಮಾಡುವ ಅಪಭ್ರಂಶಗಳು. ಶುದ್ಧಸಂಸ್ಕೃತಕ್ಕಿಂತ ಬೇರೆಯೇ ಆಗಿವೆ.

ಈ ಸಂಸ್ಕೃತ ಭಾಷೆಯು ಅನಾದಿಯೂ ನಿತ್ಯವಾದದ್ದೂ, ದೇವವಾಣಿಯೂ ಆಗಿದೆ. ಎಲ್ಲ ದೇಶಭಾಷೆಗಳಿಗೂ ಮೂಲಭಾಷೆಯಾಗಿದೆ. ಇದನ್ನೂಎಲ್ಲ ದಾರ್ಶನಿಕರೂ ಆಸ್ತಿಕರೂ ನಾಸ್ತಿಕರೂ ಒಪ್ಪಿದ್ದಾರೆ. ಡಾರ್ವಿನ್ನನ ವಿಕಾಸವಾದವು ಜಗತ್ತು ಅನಾದಿಯೆಂದೇ ಹೇಳಿದೆ. ನಾವೂ ಅನಾದಿಯೆಂಬುದನ್ನು ತಳ್ಳಿಹಾಕುವುದಿಲ್ಲ. ಎಷ್ಟೋ ಕೋಟಿ ವರ್ಷಗಳ ಹಿಂದೆ ಈ ಜಗತ್ತು ಉತ್ಪತ್ತಿಯಾಯಿತು ಎಂದು ಹೇಳುವುದಾದರೆ ಅದಕ್ಕಿಂತಲೂ ಮುಂಚೆ ಏನಿತ್ತು ? ಕಾಲವು ಅನಾದಿಯೂ ನಿತ್ಯವೂ ಎನ್ನುವುದು ಸತ್ಯ. ಜಗತ್ತಿನ ಸೃಷ್ಟಿಗಿಂತಲೂ ಮೊದಲು ಕಾಲವೂ ಇರಲಿಲ್ಲವೆಂಬುದನ್ನು ಯಾರೂ ಒಪ್ಪುವುದು ಸಾಧ್ಯವಿಲ್ಲ.

ಶೂನ್ಯದಿಂದ ಪದಾರ್ಥ ಉತ್ಪತ್ತಿಯಾಗುವುದೂ ಸಾಧ್ಯವಿಲ್ಲ. ಡಾರ್ವಿನ್ನನ ವಿಕಾಸವಾದದ ಕೆಲವು ಅಂಶಗಳನ್ನು ವೈದಿಕರೂ ಒಪ್ಪಿಕೊಂಡಿದ್ದಾರೆ. ತೈತ್ತರೀಯ ಉಪನಿಷತ್ತಿನಲ್ಲಿ ಈ ರೀತಿ ಇದೆ. ಆತ್ಮನಿಂದ ಆಕಾಶದ ಉತ್ಪತ್ತಿ, ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ಜಲ, ಜಲದಿಂದ ಭೂಮಿ, ಭೂಮಿಯಲ್ಲಿ ವನಸ್ಪತಿ ಔಷಧಿಗಳ ಉತ್ಪತ್ತಿ ಇವುಗಳು ಕೊಡುವ ಆಹಾರದಿಂದ ಹೀಗೆ ಸೃಷ್ಟಿಕ್ರಮ.

ಅನ್ನದಿಂದ ಕಪಿ, ಕಪಿಯಿಂದ ಪುರುಷ ಎಂಬ ವಿಕಾಸವಾದವನ್ನು ವೈದಿಕ ಮತಾನುಯಾಯಿಗಳು ಅಂಗೀಕರಿಸಿಲ್ಲ. ಆದ್ದರಿಂದ ವಿಕಾಸವಾದದ ಕೆಲವು ಅಂಶಗಳನ್ನು ವೈದಿಕರು ಸ್ವೀಕರಿಸಿದ್ದಾರೆ ಎಂದು ಹೇಳಿದೆ.

ಇದು ಹೇಗೂ ಇರಲಿ. ವೇದಗಳು ಅಪೌರುಷೇಯವೆಂದು ಎಲ್ಲ ಆಸ್ತಿಕ ದಾರ್ಶನಿಕರೂ ಸಮ್ಮತಿಸಿದ್ದಾರೆ. ವೇದಗಳು ಅಪೌರುಷೇಯಗಳೆಂದು ಸಿದ್ಧವಾದಂತೆಯೇ ಸಂಸ್ಕೃತ ಭಾಷೆಯೂ ಅಪೌರುಷೇಯವಾದ ದೇವವಾಣಿ. ಬೇರೆಲ್ಲಾ ಭಾಷೆಗಳ ಮೂಲ ಭಾಷೆ

ಎನ್ನುವುದು ಸಿದ್ಧವಾಗುತ್ತದೆ. 'ವೇದಗಳು ಅಚಲವಾದವುಗಳು, ನಿತ್ಯವಾದವುಗಳು, ಪ್ರಪಂಚವು ಈಶ್ವರ ಸೃಷ್ಟಿಯಾದುದರಿಂದ ಇದು ಪರಂಪರೆಯಾಗಿ ನಿತ್ಯ' ಎಂದು ಯಾವ ರೀತಿಯಲ್ಲಿ ಹೇಳಿದರೂ ನಮ್ಮ ಅಭಿಪ್ರಾಯಗಳಿಗೆ ವಿರುದ್ಧವೇನೂ ಇಲ್ಲ. ನ್ಯಾಯಶಾಸ್ತ್ರವನ್ನು ಅನುಸರಿಸುವ ನೈಯಾಯಿಕರೂ ಕೂಡ 'ಇಂತಹ ಪದದಿಂದ ಇದೇ ಅರ್ಥವು ತಿಳಿಯಬೇಕೆಂಬುದು ಈಶ್ವರನ ಇಚ್ಛೆ' ಎಂದು ಒಪ್ಪಿಕೊಂಡಿದ್ದಾರೆ. ಇವರಂತೆ ಈಶ್ವರನೆಂದರೆ ಸಾಮಾನ್ಯ ಮಾನವನೇನೂ ಅಲ್ಲ. ಈಶ್ವರಸಂಕೇತದಂತೆ ಪದಾರ್ಥಜ್ಞಾನ ಎಂದು ಹೇಳಿದ್ದರಿಂದಲೇ ಈ ಭಾಷೆಯು ದೇವವಾಣಿ ಎಂದು ಸಮರ್ಥಿಸಿದಂತೆ ಆಯಿತು. ನೈಯಾಯಿಕರು ಅಪಭ್ರಂಶ ಶಬ್ದಗಳನ್ನು ಈಶ್ವರಸಂಕೇತವೆಂದು ಒಪ್ಪಿಕೊಂಡಿಲ್ಲ. ಜಗತ್ತಿನ ಎಲ್ಲ ಭಾಷೆಗಳಿಗಿಂತಲೂ ಮೊದಲು ವೇದಗಳು ಇದ್ದವೆಂದು ಸರ್ವಾನುಮತವಿದೆ. ಇಂತಹ ವೇದಗಳು ನಮ್ಮಂತಹ ಸಾಮಾನ್ಯ ಮನುಷ್ಯರಿಂದ ರೂಢಿಗೆ ಬಂದವು ಎಂಬುದನ್ನು ಕಲ್ಪಿಸಿಕೊಳ್ಳುವುದೂ ಸಾಧ್ಯವಿಲ್ಲ. ಈ ವಿಷಯವನ್ನು ಮತ್ತಷ್ಟು ಪರಿಶೀಲಿಸಿ ವಿದ್ವಜ್ಜನರು ತಿಳಿಯಬಹುದು.

1. ವೇದಗಳಲ್ಲಿ ಜಗತೀ ಮುಂತಾದ ಛಂದಸ್ಸುಗಳಿವೆಯೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಯಾವ ಛಂದಸ್ಸಿನಲ್ಲಿ ಎಷ್ಟು ವರ್ಣಗಳಿರಬೇಕು ಎಂಬುದು ನಿಯಮ ಬದ್ಧವಾಗಿಯೇ ಇರುತ್ತದೆ. ಇಂತಹ ಛಂದಸ್ಸುಗಳನ್ನು ಮೊಟ್ಟ ಮೊದಲ ಬಾರಿಗೆ ಯಾರು ತಿಳಿದರು ? ಯಾವ ಗ್ರಂಥವನ್ನು ಅನುಸರಿಸಿ ಈ ಛಂದಸ್ಸುಗಳ ನಿಯಮುಗಳನ್ನು ತಿಳಿದರು. ವೇದಗಳಿಗಿಂತಲೂ ಪುರಾತನವಾದ ಯಾವ ಗ್ರಂಥಗಳೂ ನಮಗೆ ದೊರೆತಿಲ್ಲ.

2. ಜನಪದ ಭಾಷೆಯಲ್ಲಿ ಪ್ರಯೋಗದಲ್ಲಿರುವ ಶಬ್ದಗಳನ್ನೇ ಲೌಕಿಕ ಗ್ರಂಥಗಳಲ್ಲಿ ಉಪಯೋಗಿಸಿರುವುದು ಕಂಡು ಬರುತ್ತದೆ. ವೈದಿಕಶಬ್ದಗಳು ಜನಪದ ಭಾಷೆಯಲ್ಲಿಯೂ ಕಂಡು ಬರುತ್ತದೆ. ಸಂಸ್ಕೃತ ಭಾಷೆಯಲ್ಲಿ ಆಡುನುಡಿಯಲ್ಲಿ ಕಂಡು ಬರದಿರುವ ಶಬ್ದಗಳು ವೇದಗಳಲ್ಲಿ ಕಂಡು ಬರುತ್ತವೆ. ಇದು ಹೇಗೆ ಸಾಧ್ಯ ? ಕೇವಲ ಇಷ್ಟೇ ಅಲ್ಲ. ಕೌತ್ಸಾದಿ ಮಹರ್ಷಿಗಳಿಗೂ ಅರ್ಥಗೋಚರವಾಗದಿರುವ ಎಷ್ಟೋ ಶಬ್ದಗಳು ವೇದಗಳಲ್ಲಿ ಕಂಡು ಬರುತ್ತವೆ. ಇಂತಹ ಕಠಿಣ ಶಬ್ದಗಳ ಕೆಲವು ಅರ್ಥಗಳನ್ನು ಯಾಸ್ಕರು ವಿವರಿಸುತ್ತಾರೆ.

ಸೃಣ್ಯೇವ ಜರ್ಭರೀ ತುರ್ಫರೀತೂ ನೈತೋಶೇವ ತುರ್ಫರೀಪರ್ಫರೀಕಾ ।
ಉದನ್ಯಜೇವ ಜೇಮನಾ ಮದೇರೂ ತಾಮೇ ಜರಾಪ್ವಜರಂ ತಂ ಮದಾಯೂ ॥

ಇದು ಕಾಶ್ಯಪಋಷಿದೃಷ್ಟವಾದ, ತ್ರಿಷ್ಟುಪ್ ಛಂದಸ್ಸಿನ, ಅಶ್ವದೇವತಾಕವಾದ ಋಕ್ಕು. ಇಲ್ಲಿ ಜರ್ಭರೀ ಮುಂತಾದುವುಗಳ ಅರ್ಥವು ಕೌತ್ಸ ಮುಂತಾದ ಮಹರ್ಷಿಗಳಿಗೂ ಊಹಿಸಲಾಗಲಿಲ್ಲ ಎಂದು ಯಾಸ್ಕರ ನಿರುಕ್ತ ಗ್ರಂಥದಿಂದಲೂ ಮಹಾಭಾಷ್ಯದಿಂದಲೂ ತಿಳಿದು ಬರುತ್ತದೆ. ವೇದಗಳನ್ನು ತಿಳಿದ ವಿದ್ವಾಂಸರಲ್ಲಿಯೂ ಕೆಲವೆಡೆಗಳಲ್ಲಿ ಶಬ್ದಾರ್ಥ ನಿರ್ಣಯದಲ್ಲಿ ಭೇದವಿರುವುದು ಕಂಡಿದೆ. ಶುನಾಸೀರ ಶಬ್ದಕ್ಕೆ ಅರ್ಥ ಹೇಳುವಾಗ 'ಶುನ ಎಂದರೆ ವಾಯು, 'ಸೀರಾ' ಎಂದರೆ ಸೂರ್ಯ, ಬೃಹದ್ದೇವತಾಕಾರ ಎಂದರೆ ಶೌನಕ, ಶುನಾಸೀರಾ ಎಂದರೆ ಇಂದ್ರ. ಇದು ಯಾಸ್ಕರು ಹೇಳುವ ಅರ್ಥ. ಶುನಾ ಎಂದರೆ ಸೂರ್ಯ, ಸೀರಾ ಎಂದರೆ ಇಂದ್ರ ಎಂಬ ಅರ್ಥ ಹೇಳುವವರು

'ಶಾಕಪೂಣಿ'ಗಳು ಇಂತಹ ಶಬ್ದಗಳು ಸಾಮಾನ್ಯಜನರ ಭಾಷೆಯಲ್ಲಿ ಇದ್ದವೆಂದು ಹೇಳಲು ಸಾಧ್ಯವೇ ಇಲ್ಲ.

3. ವೇದಗಳಲ್ಲಿರುವ ಉದಾತ್ತ ಅನುದಾತ್ತಾದಿ ಸ್ವರಸಹಿತ ಪ್ರಯೋಗವು ಜನಗಳ ಆಡುನುಡಿಯಲ್ಲಿ ಇತ್ತು ಎನ್ನುವುದಕ್ಕೆ ಉದಾಹರಣೆಯೇ ಇಲ್ಲ. ಸ್ವರಸಹಿತವಾದ ಶಬ್ದಗಳನ್ನು ಸಾಮಾನ್ಯ ಜನರು ಉಪಯೋಗಿಸುತ್ತಿದ್ದರೆಂದು ಊಹಿಸಲೂ ಸಾಧ್ಯವಿಲ್ಲ. ವೇದಗಳನ್ನು ಬಿಟ್ಟು ಸ್ವರಸಹಿತ ಪ್ರಯೋಗವಿರುವ ಬೇರೆ ಗ್ರಂಥಗಳೂ ಕಂಡು ಬಂದಿಲ್ಲ. ಇವೆಲ್ಲವುಗಳಿಂದ ವೇದಗಳು ಮಾನವ ನಿರ್ಮಿತ-ವಾದುವಲ್ಲವೆಂದು ತಿಳಿಯಬಹುದು. ಈ ಬಗ್ಗೆ ಕುಮಾರಿಲಭಟ್ಟರು ರಚಿಸಿದ ಕೆಲವು ಶ್ಲೋಕಗಳನ್ನು ಉದಾಹರಿಸಬಹುದು.

ಆದಿಮಾತ್ರಮಪಿ ಶ್ರುತ್ವಾ ವೇದಾನಾಂ ಪೌರುಷೇಯತಾ ।
ನ ಶಕ್ಯಾ ಅಧ್ಯವಸಾತುಂ ಹಿ ಮನಾಗಪಿ ಸಚೇತನೈಃ ॥
ದೃಷ್ಟಾರ್ಥವ್ಯವಹಾರೇಷು ವಾಕ್ಯೈಃ ಲೋಕಾನುಸಾರಿಭಿಃ ।
ಪದೈಶ್ಚ ತದ್ವಿಧೈರೇವ ನರಾಃ ಕಾವ್ಯಾನಿ ಕುರ್ವತೇ ॥

ಲೋಕದಲ್ಲಿ ವ್ಯವಹಾರದಲ್ಲಿರುವ, ಸರಿಯಾಗಿ ಅರ್ಥ ತಿಳಿದಿರುವ ಸಾಮಾನ್ಯ ಭಾಷೆಯ ಶಬ್ದಗಳನ್ನು ಉಪಯೋಗಿಸಿಕೊಂಡು ಮನುಷ್ಯರು ಕಾವ್ಯಗಳನ್ನು ರಚಿಸುತ್ತಾರೆ.

ಪ್ರಪಾಠಕ ಚತುಃಷಷ್ಟಿನಿಯತಸ್ವರಕೈಃ ಪದೈಃ ।
ಲೋಕೇಷು ಅಪಿ ಅಶ್ರುತಪ್ರಾಯೈಃ ಋಗ್ವೇದಂ ಕಃ ಕರಿಷ್ಯತಿ ॥

ಸ್ವರಗಳ ನಿಯಮಗಳಿಂದ ಕೂಡಿದ ಪದಗಳು, ಲೋಕದಲ್ಲಿ ಸಂಪೂರ್ಣ **ಅಪರಿಚಿತ**ವಾದವುಗಳು ಇರುವ 64 ಅಧ್ಯಾಯ (ಪ್ರಪಾಠಕ)ಗಳಿಂದ ಕೂಡಿರುವ **ಋಗ್ವೇ**ದವನ್ನು ಯಾರು ರಚಿಸುತ್ತಾರೆ.

ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯದೇವಂಋತ್ವಿಜಮ್ ।
ಹೋತಾರಂ ರತ್ನಧಾತಮಮ್ ಇತ್ಯೇತತ್ ನೃವಚಃ ಕಥಮ್ ॥

ಅಗ್ನಿಮೀಳೇ ಪುರೋಹಿತಂ ಮುಂತಾದ ಮೇಲೆ ಹೇಳಿರುವ ಪದಗಳು ಸಾಮಾನ್ಯ ಜನರ ಆಡುನುಡಿಯಾಗುವುದು ಹೇಗೆ ಸಾಧ್ಯ ?

ಕಿಮಾಲೋಚ್ಯ ಕ್ವ ವಾ ದೃಷ್ಟ್ವಾ ವಾಕ್ಪ್ರತಿಛಂದಮೀದೃಶಮ್ ।
ರಚಯೇತ್ ಪುರುಷೋ ವಾಕ್ಯಂ ಕಿಂ ಚ ಉದ್ದಿಶ್ಯ ಪ್ರಯೋಜನಮ್ ॥

ಯಾವ ರೀತಿ ಆಲೋಚಿಸಿ, ಯಾವುದನ್ನು ಕಂಡು ಪುರುಷನು ಈ ರೀತಿ ಛಂದೋ ಬದ್ಧ ವಾಕ್ಯಗಳನ್ನು ರಚಿಸಿರಬಹುದು ? ಇದರ ಉದ್ದೇಶ್ಯವು ಏನಿರಬಹುದು ?

ಅಗ್ನೇಃ ಪುರೋಹಿತತ್ವಂ ಚ ಕ್ವ ದೃಷ್ಟಂ ಯೇನ ಕೀರ್ತ್ಯತೇ ।
ಈಳೇ ಶಬ್ದ ಪ್ರಯೋಗಶ್ಚ ಕ್ವ ದೃಷ್ಟಃ ಶ್ರೋತ್ರ ಗೋಚರಃ ॥

ಅಗ್ನಿಯು ಪುರೋಹಿತ ಎಂದು **ಹೇಳಿದ**ವರು ಅಗ್ನಿಯ ಪೌರೋಹಿತ್ಯವನ್ನು ಎಲ್ಲಿ ನೋಡಿದರು. ಈಳೇ ಎಂಬ ಶಬ್ದವನ್ನು ಅವರು ಎಲ್ಲಿ ಕೇಳಿ ತಿಳಿದಿರಬಹುದು ?

ದೇವತ್ವಂ ಚ ಅಸ್ಯ ಯಜ್ಞಸ್ಯ ವಿಹಿತಂ ಕ್ವೋಪಲಕ್ಷಿತಮ್ ।
ವಿಧಿನೈವ ಹಿ ದೇವತ್ವಂ ಪ್ರತಿ ಕರ್ಮಾವಧಾರ್ಯತೇ ॥

ದೇವತೆಗಳು ಋತ್ವಿಜರಾಗಿ ಯಜ್ಞಮಾಡಿದ್ದನ್ನು ನೋಡಿದವರ್ಯಾರು ? ದೇವತೆಗಳಿಗೂ ಕರ್ಮಾಚರಣೆಯನ್ನು ವಿಧಿಸಿದ್ದು ಎಲ್ಲ ಕಂಡುಬರುತ್ತದೆ. ಆದರೆ ಸಾಮವೇದದಲ್ಲಿ ಈ ಋಕ್ಕುಗಳು ಅಗ್ನಾ ಈ, ಆಶ, ಊಳ ಮುಂತಾಗಿ ನಾನಾ ವಿಧವಾಗಿ ನಿಯಮಬದ್ಧವಾಗಿವೆ. ಗುರೂಪದೇಶವಿಲ್ಲದೆ ಇವುಗಳ ಸ್ವರೂಪವನ್ನು ತಿಳಿಯುವುದು ಅಸಾಧ್ಯ. ಈ ರೀತಿ ಕಷ್ಟ ಸಾಧ್ಯವಾದ ವಿಧಾನವನ್ನು ಯಾವ ಮನುಷ್ಯನು ಹಿಂದೆಂದೂ ಕಾಣದಿದ್ದನ್ನು ಕಲ್ಪಿಸಿಯಾನು ? ಏತಕ್ಕಾಗಿ ಮಾಡುತ್ತಾನೆ. ಈ ಎಲ್ಲಾ ಕಾರಣಗಳಿಂದ ವೇದಗಳು ಅಪೌರುಷೇಯವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ವೇದಗಳಲ್ಲಿಯಾದರೂ ಇಷ್ಟೊಂದು ವಿಚಿತ್ರವು ಏಕಿದೆ ? ಇದೆಲ್ಲವೂ ಪ್ರಶ್ನೆಯಾಗಿಯೇ ಉಳಿದುಬಿಡುತ್ತದೆ. ಜಗತ್ತು ಕೂಡ ಹೀಗೆಯೇ ಚಿಂತನೆಗೆ ನಿಲುಕಲಾರದಷ್ಟು ವಿಚಿತ್ರ. ಬಗೆ ಬಗೆಯ ರೂಪ ಗುಣ ಆಕಾರಗಳಿಂದ ಭಿನ್ನವಾದ ಸ್ತ್ರೀಯರು, ಪುರುಷರು, ಪಶು ಪಕ್ಷಿ ಮೃಗ ಕೀಟಾದಿ ಪ್ರಾಣಿಗಳು, ಅನೇಕ ಜಲವಾಸಿ ಪ್ರಾಣಿಗಳು, ರವಿ ಚಂದ್ರ ಮುಂತಾದ ಗ್ರಹ ನಕ್ಷತ್ರಗಳು ಇವುಗಳ ಪರಿಮಿತಿಯನ್ನು ತಿಳಿಯಲು ಮಾನವನಿಗೆ ಸಾಧ್ಯವಿಲ್ಲ. ಹೀಗೆಯೇ ಚಿತ್ರವಿಚಿತ್ರವಾದ ಪದಾರ್ಥಗಳ ಸೃಷ್ಟಿ ಇರುವಂತೆ ಪದಗಳೂ ಸೃಷ್ಟಿಯಾಗಿವೆ. ಪದಾರ್ಥಗಳ ಸಂಸ್ಕೃತಿ, ಸ್ವಭಾವ ಈ ಎಲ್ಲಾ ವಿಚಿತ್ರಗಳನ್ನು ಹೇಗೆ ಭಗವಂತನ ಲೀಲೆಯೆಂದು ಒಪ್ಪಿಕೊಳ್ಳುತ್ತೇವೆಯೋ, ಅಂತೆಯೇ ಪದಗಳನ್ನೂ ವಾಕ್ಯಗಳನ್ನೂ ಒಪ್ಪಲೇಬೇಕಾಗುತ್ತದೆ.

ಕಶ್ಯಪ ವಿಶ್ವಾಮಿತ್ರಾದಿ ಋಷಿಗಳು ಮಂತ್ರಗಳನ್ನು ಕಂಡುಕೊಂಡುವರು. ಇವರು ಕಾಳಿದಾಸಾದಿಗಳು ಕಾವ್ಯಗಳನ್ನು ರಚಿಸಿದಂತೆ ಮಂತ್ರಗಳನ್ನು ರಚಿಸಿಕೊಟ್ಟಿಲ್ಲ. ಆದ್ದರಿಂದ ವೇದಗಳು ಮನುಷ್ಯ ನಿರ್ಮಿತವಲ್ಲ.

ಶೌನಕನೆಂಬ ಮಹರ್ಷಿಯು "ಬೃಹದ್ದೇವತಾ" ಎಂಬ ಹೆಸರಿನ ಗ್ರಂಥವನ್ನು ರಚಿಸಿದ್ದಾನೆ. ಗ್ರಂಥಾರಂಭದಲ್ಲಿ ಎಲ್ಲಾ ಮಂತ್ರ ದ್ರಷ್ಟಾರನ್ನೂ ನಮಸ್ಕರಿಸಿದ್ದಾನೆ. ವೇದಗಳಲ್ಲಿ ಹೇಳಿರುವ ಅನೇಕ ದೇವತೆಗಳನ್ನು ಸ್ತುತಿ ಮಾಡಿದ್ದಾನೆ. ದೇವತೆಗಳಲ್ಲಿ ಪೃಥ್ವೀಸ್ಥಾನ, ಅಂತರಿಕ್ಷಸ್ಥಾನ ಮತ್ತು ದ್ಯುಸ್ಥಾನ ಎಂಬ ಮೂರು ವಿಭಾಗಗಳಿವೆ. ಬೃಹಸ್ಪತಿ, ಬ್ರಹ್ಮಣಸ್ಪತಿ, ವಿಶ್ವೇದೇವತೆಗಳು ಅಶ್ವಿನೀ ದೇವತೆಗಳು ಹೀಗೆ ಅನೇಕ ಸಂಖ್ಯೆಯ ದೇವತೆಗಳು ಆಯಾ ದೇವತೆಗಳ ಆಯುಧಗಳು, ಅವರವರ ವಾಹನಗಳು, ಗುಣಗಳು, ಸ್ವಭಾವಗಳು ಹೀಗೆ ವೇದಗಳಲ್ಲಿ ಅನೇಕ ರೀತಿಯಲ್ಲಿ ಸ್ತುತಿ ಮಾಡಿದ್ದಾರೆ. ಈ ರೀತಿಯ ದೇವತೆಗಳನ್ನು ಹೀಗೆ ಪ್ರತ್ಯಕ್ಷವಾಗಿ ಕಂಡವರಂತೆ ಸ್ತುತಿ ಮಾಡಲು ಮೊದಲು ನೋಡಿದ್ದವರು ಯಾರು ? ಎಲ್ಲಿ ನೋಡಿದ್ದರು ?

ವೇದಗಳಲ್ಲಿ ಇನ್ನೂ ಗಹನವಾದ ದಾರ್ಶನಿಕ ಸಿದ್ಧಾಂತಗಳು ಇವೆ. **'ಪುರುಷ ಏವೇದಂ ಸರ್ವಮ್, ಸರ್ವಂ ಖಲ್ವಿದಂ ಬ್ರಹ್ಮ, ಐತದಾತ್ಮ್ಯಮಿದಂ ಸರ್ವಂ'** ಮುಂತಾದ ವಾಕ್ಯಗಳಿಂದ ಇಡಿ ಪ್ರಪಂಚವು ಬ್ರಹ್ಮಾತ್ಮಕವಾದದ್ದೆಂದು ಶ್ರುತಿಗಳು ಸಾರುತ್ತಿದೆ. ಈ ರೀತಿಯ ಅರ್ಥಕೊಡುವ ವಾಕ್ಯಗಳನ್ನು ಭಾರತೀಯ ಅಥವಾ ವಿದೇಶೀಯರಾದ

ಯಾವ ತತ್ತ್ವಚಿಂತಕರು ತಾನೇ ಹೇಳಿಯಾರು ? **"ಅಹಂ ರುದ್ರೇಭಿಃ ವಸುಭಿಶ್ಚರಾಮಿ, ಅಹಂ ಆದಿತ್ಯೈಃ, ಅಹಂ ಮನುರಭವಮ್, ಸೂರ್ಯಶ್ಚ, ವೇದಾಹಮೇತಂ ಪುರುಷಂ ಮಹಾಂತಂ"** ಮುಂತಾದ ವಾಕ್ಯಗಳ ಅರ್ಥವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುವುದೂ ಅಸಾಧ್ಯ. ಯಾವ ದಾರ್ಶನಿಕ ಮನುಷ್ಯನು ಇಂತಹ ವಾಕ್ಯಗಳನ್ನು ಹೇಳಿರಬಹುದು ? **'ತತ್ತ್ವಮಸಿ, ಅಹಂ ಬ್ರಹ್ಮಾಸ್ಮಿ'** ಅಂತಹ ವಾಕ್ಯಗಳ ಅರ್ಥದ ಆಳವನ್ನು ತಿಳಿದು ಜೀವ ಬ್ರಹ್ಮರ ಏಕತೆಯನ್ನು ಊಹಿಸಲು ಯಾವ ದಾರ್ಶನಿಕನು ಅರ್ಹನಾದಾನು ? ಇವುಗಳೆಲ್ಲದರ ಅರ್ಥದ ಆಳವು ಪರಮೇಶ್ವರನಿಂದ ಮಾತ್ರ ತಿಳಿಸಿಕೊಡಲು ಸಾಧ್ಯ. ಆತನೇ ಸರ್ವಜ್ಞ, ಸರ್ವ ಶಕ್ತ. **'ಧರ್ಮಬ್ರಹ್ಮಣೀ ವೇದೈಕವೇದ್ಯೇ'** ಎನ್ನುವುದೇ ಇಲ್ಲಿ ಸಿದ್ಧಾಂತ. ಅಸೂಯಾರಹಿತನಾದ ಸತ್ಯಾನ್ವೇಷಕನಾದ ಪುರುಷನಿಂದ ಮಾತ್ರ ತಿಳಿಯಲು ಸಾಧ್ಯವಾಗುವ ವೇದಗಳನ್ನು ಯಾವ ಮನುಷ್ಯನೂ ನಿರ್ಮಿಸಿಲ್ಲವೆಂದು ಖಚಿತವಾಗಿ ಹೇಳಬಹುದು.

ಪೂರ್ವ ಮೀಮಾಂಸಾಶಾಸ್ತ್ರದ ಮೊದಲನೆಯ ಅಧ್ಯಾಯದ ಒಂದು ಮತ್ತು ಎರಡನೆಯ ಪಾದಗಳಲ್ಲಿ ಜೈಮಿನಿ ಮಹರ್ಷಿಗಳು ಈ ಎಲ್ಲಾ ವಿಷಯಗಳನ್ನು ವಿಸ್ತಾರವಾಗಿ ಹೇಳಿದ್ದಾರೆ. ಸಾಯಣಾಚಾರ್ಯರು ಋಗ್ವೇದ ಭಾಷ್ಯಭೂಮಿಕೆಯಲ್ಲಿ ಇದೇ ವಿಷಯವನ್ನು ವಿವರಿಸಿದ್ದಾರೆ. ಈ ವೇದರಾಶಿಯ ನಿತ್ಯತ್ವವು ಸಿದ್ಧವಾದಂತೆ ಈ ಭಾಷೆಯು ಮಾನವ ನಿರ್ಮಿತವಲ್ಲವೆಂಬುದೂ ಸಿದ್ಧವಾಗುತ್ತದೆ. ಶಬ್ದಗಳು ಸತ್ಯವೆಂಬುದನ್ನು ಯಾಸ್ಕರು ತಮ್ಮ ನಿರುಕ್ತದಿಂದ ಸಿದ್ಧಪಡಿಸಿದ್ದಾರೆ. 'ಶಬ್ದಾರ್ಥಗಳ ಸಂಬಂಧವು ಔತ್ಪತ್ತಿಕ (ನಿತ್ಯ ಎಂದು ಅರ್ಥ)' ಎಂದು ಜೈಮಿನಿಗಳು ಹೇಳುತ್ತಾರೆ. ವೈಯಾಕರಣರು ತಮ್ಮ ಸ್ಫೋಟವಾದದಿಂದ ಶಬ್ದಗಳ ನಿತ್ಯತ್ವವನ್ನು ಪ್ರತಿಪಾದಿಸುತ್ತಾರೆ. **"ಸಿದ್ಧೇ ಶಬ್ದಾರ್ಥ ಸಂಬಂಧೇ"** ಎಂಬ ವಾರ್ತಿಕವು ಮಹಾಭಾಷ್ಯದಲ್ಲಿ ಹೇಳಿರುವ ಶಬ್ದನಿತ್ಯತ್ವವನ್ನು ತೋರಿಸಿಕೊಡುತ್ತದೆ. ಮಹಾನ್ ವೈಯಾಕರಣನಾದ ಕೈಯಟನು ತನ್ನ ಭಾಷ್ಯ ವ್ಯಾಖ್ಯಾನದ ಸಮಯದಲ್ಲಿ **'ಚಂದ್ರತಾರಕಮ್ ಪ್ರತಿಮಂಡಿತೋ ವೇದಿತವ್ಯೋ ಬ್ರಹ್ಮರಾಶಿಃ'** ಎಂದು ಹೇಳಿದ್ದಾನೆ. ಪ್ರತ್ಯಾಹಾರಾಹ್ನಿಕದಲ್ಲಿ **'ಬ್ರಹ್ಮತತ್ತ್ವಮೇವ ಶಬ್ದಸ್ವರೂಪತಯಾ ಭಾತಿ"** ಎಂದು ಉಲ್ಲೇಖ ಮಾಡಿದ್ದಾನೆ. ವೈಯಾಕರಣನಾದ ಭರ್ತೃಹರಿಯು ರಚಿಸಿದ ಒಂದು ಶ್ಲೋಕವು ಹೀಗಿದೆ –

ಅನಾದಿ ನಿಧನಂ ಬ್ರಹ್ಮ ಶಬ್ದತತ್ತ್ವಂ ಯದಕ್ಷರಮ್ ।
ವಿವರ್ತತೇ ಅರ್ಥಭಾವೇನ ಪ್ರಕ್ರಿಯಾ ಜಗತೋಯತಃ ॥

ವೈಯಾಕರಣ ಸ್ಫೋಟವಾದವನ್ನು ಯೋಗದಾರ್ಶನಿಕರೂ ಸಮ್ಮತಿಸುತ್ತಾರೆ. ಆದ್ದರಿಂದ ಶಬ್ದ ನಿತ್ಯತ್ವವನ್ನು ಅವರೂ ಒಪ್ಪಿಕೊಂಡಂತೆಯೇ ಆಯಿತು. ಆ ಶಬ್ದಗಳು ಅನಿತ್ಯ ಕೃತಕ ಎಂದು ಹೇಳುವ ನೈಯಾಯಿಕರು ಇಂತಹ ಪದದಿಂದ ಇದೇ ಅರ್ಥವು ತಿಳಿಯಬೇಕು. ಎನ್ನುವುದು ಈಶ್ವರ ಸಂಕೇತ ಎಂದು ನಿರ್ಣಯಿಸಿದ್ದಾರೆ. ವೇದಗಳು ತಿಳಿಸಿಕೊಡುವಂತೆ 'ಆ ಮಹತ್ತಾದ ಚಿತ್ ಸ್ವರೂಪ ಯಾವುದಿದೆಯೋ ಅದರ ನಿಶ್ವಾಸವು ಈ ವೇದಗಳು' **'ತಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತತ್ ಯತ್ ಋಗ್ವೇದೋ ಯಜುರ್ವೇದಃ ಸಾಮವೇದೋ ಅಥರ್ವಣವೇದ'** ಈ ರೀತಿಯಾದ ಅನೇಕ ಹೇಳಿಕೆಗಳು ಪೂರ್ವಕಾಲದಿಂದಲೂ ಪ್ರಚಲಿತವಾಗಿದ್ದವು. ಅಥವಾ ಬುದ್ಧಿಜೀವಿಗಳು ಇದನ್ನು

ಮೂಢನಂಬಿಕೆಯೆನ್ನಬಹುದು. ಯಾವುದೋ ಒಂದು ಮೂಲ ಭಾಷೆಯನ್ನು ಅವಲಂಬಿಸಿಕೊಂಡು ಸಂಸ್ಕೃತ ಭಾಷೆಯು ವಿಕಸಿತವಾಗಿದೆ ,ಎನ್ನುವ ಇವರು ಸಂಸ್ಕೃತ ಭಾಷೆಯನ್ನು ಅನಾದಿಯೆಂದೂ ದೈವನಿರ್ಮಿತವೆಂದೂ ಒಪ್ಪುವುದಿಲ್ಲ. ಇವರನ್ನು ಒಪ್ಪಿಸುವುದೂ ಸಾಧ್ಯವಿಲ್ಲ.

ಈ ರೀತಿಯಲ್ಲಿ ಯೋಚಿಸುವ ಆಧುನಿಕರು ಎರಡು ಬಗೆ. ವೇದಗಳು ನಮ್ಮ ಸಂಸ್ಕೃತಿಯ ಆಧಾರಗಳು ಎಂದು ನಂಬುವ ಆಸ್ತಿಕರು, ವೇದಗಳಲ್ಲಿ ನಂಬಿಕೆ ಇಲ್ಲದಿರುವ ನಾಸ್ತಿಕರು.

ಪುಸ್ತಕವಲ್ಲಿ ವೇದಗಳನ್ನು ನಂಬುವ ಆಸ್ತಿಕರಂತೆ ಆಲೋಚಿಸಿದರೆ ವೇದಗಳ ಭಾಷೆ ಯಾವುದು ? ಪರಮಾತ್ಮನು ಯಾವ ಭಾಷೆಯಲ್ಲಿ ವ್ಯವಹರಿಸಿದ್ದನು ? ಆತನು ಮೂಕನಾಗಿದ್ದನೆಂದು ನಂಬಲು ಸಾಧ್ಯವಿಲ್ಲ. ಹಾಗೆ ನಂಬಿದರೆ ಆ ಪರಮಾತ್ಮನು ಸರ್ವಶಕ್ತ ಸರ್ವಜ್ಞ ಎಂದು ಹೇಳಲು ಸಾಧ್ಯವಿಲ್ಲ. **'ನಾಮರೂಪೇ ವ್ಯಾಕರವಾಣಿ, ಸಃ ಭೂರಿತಿ ವ್ಯಾಹರತ್, ಸಃ ಭೂಮಿಮಸೃಜತ'** ಮುಂತಾದ ಶ್ರುತಿ ವಾಕ್ಯಗಳು ನಮಗೆ ತಿಳಿದಿವೆ. ಇದರಿಂದ ಮೊದಲು ಮಾತು ಆಮೇಲೆ ಸೃಷ್ಟಿ ಕಾರ್ಯವಾಯಿತೆಂದು ತಿಳಿಯಬಹುದು. ಸಾಮಾನ್ಯವಾಗಿ ಜನರು ಶಬ್ದಪೂರ್ವಕವಾಗಿ ಮನಸ್ಸಿನಲ್ಲಿ ಸಂಕಲ್ಪಮಾಡಿಕೊಂಡು ಅನಂತರ ಆ ಕಾರ್ಯವನ್ನು ಮಾಡುತ್ತಾರೆಂದು ಕಂಡು ಬರುತ್ತಿದೆ. ಆದ್ದರಿಂದಲೇ ವಿದ್ವಜ್ಜನರು ಶಬ್ದಾರ್ಥಗಳಿಗೆ ನಿತ್ಯಸಂಬಂಧವೆಂದು ಹೇಳುತ್ತಾರೆ. ಹೀಗಿರುವಾಗ ಅದ್ಭುತವಾದ ಒಂದು ಮಹಾಯಂತ್ರದಂತಿರುವ ಈ ಜಗತ್ತನ್ನು ಮೂಕನಾದ ಈಶ್ವರನು ಹೀಗೆ ಸೃಷ್ಟಿಸುತ್ತಾನೆ ? ಸ್ವತಃ ಭಾಷೆಯನ್ನು ಬಲ್ಲ ಪರಮಾತ್ಮನು ಸೃಷ್ಟಿಸಿರುವ ಈ ಮಾನವರಲ್ಲಿ ಕಂಠ ತಾಲು ಮೊದಲಾದುವುಗಳಿಗೆ ತಾಗುವ ಗಾಳಿಯ ಹೊಡೆತದಿಂದ ಶಬ್ದಗಳ ಉಚ್ಚಾರಣೆಯು ಸಿದ್ಧಿಸಿದೆ ಎಂದು ಒಪ್ಪಬೇಕು. ಇಂತಹ ಮಾತುಗಳು ಎಲ್ಲ ಇಂದ್ರಿಯಗಳಿಗೂ ಗೋಚರವಾದುವುಗಳಾಗಲಿ, ಶಬ್ದಗ್ರಾಹಕಗಳಾಗಲಿ ಎಂಬುದು ಪರಮಾತ್ಮನ ಇಚ್ಛೆಯೆಂದು ಒಪ್ಪಬೇಕು. ಆಗ ಈಶ್ವರನು ಶಬ್ದಗಳನ್ನೂ ಅರ್ಥಗಳನ್ನು ಚೆನ್ನಾಗಿ ತಿಳಿದಿದ್ದಾನೆ. ಆತನು ಯಾವುದೋ ಒಂದು ಭಾಷೆಯಲ್ಲಿ ವ್ಯವಹರಿಸುತ್ತಾನೆ. ಆ ಭಾಷೆಯನ್ನು ತಾನು ಸೃಷ್ಟಿಸಿದ ಪ್ರಾಣಿಗಳಿಗೆ ಮೊದಲು ಉಪದೇಶ ಮಾಡುತ್ತಾನೆ ಎಂದು ತಾರ್ಕಿಕರೇ ಮೊದಲಾದ ಎಲ್ಲಾ ದಾರ್ಶನಕರೂ ಒಪ್ಪಬೇಕಾಗುತ್ತದೆ. ಬೇರೆ ಮಾರ್ಗವಿಲ್ಲ. ಹೀಗೆ ಈಶ್ವರನಿಂದ ವ್ಯವಹರಿಸಲ್ಪಟ್ಟ ಭಾಷೆಯು ವೈದಿಕಭಾಷೆ. ಆ ನಂತರದ ಕಾಲದಲ್ಲಿ ಇದನ್ನು ಸಂಸ್ಕೃತವೆಂದು ತಿಳಿಯಲಾಯಿತು. ಅನೇಕ ಪ್ರಾದೇಶಿಕ ಭಾಷೆಗಳಿಗೆ ಇದು ಮೂಲ ಭಾಷೆಯಾಗಿದೆ. ಆದುದರಿಂದಲೇ ಇದನ್ನು ದೇವಭಾಷೆಯೆನ್ನಲು ಸಾಧ್ಯ.

ದೈವೀ ವಾಗ್ ವ್ಯವಕೀರ್ಣೇಯಮಶಕ್ತೈರಭಿದಾತೃಭಿಃ ।
ಅನಿತ್ಯದರ್ಶಿನಾಂ ತು ಅಸ್ಮಿನ್ ವಾದೇ ಬುದ್ಧಿವಿಪರ್ಯಯಃ ॥

(ಇದು ಭಗವಾನ್ ಭರ್ತೃಹರಿಯು ರಚಿಸಿರುವ ಶ್ಲೋಕ. ಮೇಲೆ ಹೇಳಿರುವ ಅಭಿಪ್ರಾಯವೇ ಈ ಶ್ಲೋಕದ ಸಾರಾಂಶ)

'ಸಂಸ್ಕೃತವು ದೇವವಾಣಿಯೆಂದು ಮಹರ್ಷಿಗಳು ಹೇಳುತ್ತಾರೆ' ಎಂದು ಮಹಾಕವಿ ದಂಡಿಯು ಹೇಳಿದ್ದಾನೆ.

'ದೇವೀ ವಾಚಮಜನಯಂತ ದೇವಾಃ' ಇದು ಶ್ರುತಿವಾಕ್ಯ. (ದೇವತೆಗಳು ದೇವವಾಣಿಯನ್ನು ಸೃಷ್ಟಿಸಿದರು)

ಪರಮಾತ್ಮನು ಆಯಾ ಶರೀರಗಳಿಗೆ ತಕ್ಕಂತೆ ಕಣ್ಣು, ಕಿವಿ, ಕೈ, ಕಾಲು, ಹಲ್ಲುಗಳು (ಕೋರೆಹಲ್ಲು) ರೆಕ್ಕೆಗಳು ಮುಂತಾದುವುಗಳನ್ನು ಸೃಷ್ಟಿಸಿದ್ದಾನೆ. ಇಂತಹ ಈ ಶರೀರವೆಂಬ

ದೊಡ್ಡ ಯಂತ್ರಗಳು ಜೀವಿಸುವುದಕ್ಕಾಗಿ ಭತ್ತ, ಗೋಧಿ, ಹುಲ್ಲು, ಹಣ್ಣು ಮುಂತಾದುವುಗಳನ್ನು ಸೃಷ್ಟಿಸಿ ಉಪಕಾರ ಮಾಡಿದ್ದಾನೆ. ಅಂತಹ ಸರ್ವಜ್ಞ ಪ್ರಾಣಿಗಳ ವ್ಯವಹಾರಕ್ಕಾಗಿ ಒಂದು ಭಾಷೆಯನ್ನೂ ಸೃಷ್ಟಿಸಿದ ಎಂದು ಒಪ್ಪಿದರೆ ತಪ್ಪೇನು ?

ಆದರೆ ಹೀಗೆ ಸೃಷ್ಟಿ ಮಾಡಿಕೊಟ್ಟ ಭಾಷೆಯು ಸಂಸ್ಕೃತವೇ ಎನ್ನುವುದಕ್ಕೆ ಪ್ರಮಾಣವೇನು ? ಎನ್ನುವುದು ಮತ್ತೆ ಪ್ರಶ್ನೆಯಾಗುತ್ತದೆ. ಇದಕ್ಕೆ ಸಮಾಧಾನ ಪರಮಾತ್ಮನಿಂದ ಲೋಕ ವ್ಯವಹಾರಕ್ಕಾಗಿ ಒಂದು ಭಾಷೆಯು ಸೃಷ್ಟಿಯಾಯಿತು ಎಂದರೆ ಅದು ಅತ್ಯಂತ ಪ್ರಾಚೀನವಾದುದೇ ಆಗಿರುತ್ತದೆ. ಅಲ್ಲದೆ ಆ ಭಾಷೆಯು ಸರ್ವ ಶಬ್ದಾರ್ಥಗಳಿಂದ ಕೂಡಿರುತ್ತದೆ. ಆ ಭಾಷೆಯಿಂದ ಮತ್ತೆ ಹೊಸ ಭಾಷೆಯನ್ನು ಸೃಷ್ಟಿ ಮಾಡಿಕೊಳ್ಳುವ ಸಾಮಗ್ರಿಯೂ ಅದರಲ್ಲಿಯೇ ಇರುತ್ತದೆ. ಮಾನವರ ಉಪಕಾರಕ್ಕಾಗಿ ಬಂದ ಭಾಷೆಯಾದುದರಿಂದ ಈ ಎಲ್ಲ ಗುಣಗಳೂ ಅದರಲ್ಲಿರುತ್ತದೆ. ಆದುದರಿಂದ ಇದು ಸಂಸ್ಕೃತ ಭಾಷೆಯಲ್ಲದೆ ಬೇರೆಯಲ್ಲ.

ಏಸುಕ್ರಿಸ್ತನು ಹೀಬ್ರೂ ಭಾಷೆಯಲ್ಲಿಯೂ ಮಹಮ್ಮದ ಪೈಗಂಬರನು ಅರಬ್ಬೀ ಭಾಷೆಯಲ್ಲಿಯೂ ಭಗವಂತನೊಡನೆ ಮಾತನಾಡಿದರೆಂದು ಆಯಾ ಮತದವರು ಹೇಳುತ್ತಾರೆ. ಆದುದರಿಂದ ಆ ಭಾಷೆಗಳನ್ನು ದೇವಭಾಷೆಯೆಂದು ತಿಳಿಯಬೇಕೆಂಬುದು ಅವರ ಅಭಿಪ್ರಾಯ.

ಸರ್ವಜ್ಞನಾದ ಭಗವಂತನಿಗೆ ಆ ಭಾಷೆಗಳೂ ತಿಳಿದಿದ್ದುವೆಂದುಕೊಂಡರೆ ಆಶ್ಚರ್ಯವೇನಿಲ್ಲ. ಈ ಪ್ರವಾದಿಗಳು ಅತ್ಯಂತ ಪೂರ್ವಜರಲ್ಲ. ಆದುದರಿಂದ ಆ ಭಾಷೆಗಳೂ ಸಂಸ್ಕೃತದಷ್ಟು ಪುರಾತನವಾದವುಗಳಲ್ಲ. ಈ ಭಾಷೆಗಳಲ್ಲಿ ಶಬ್ದಾರ್ಥಗಳ ಸಮೃದ್ಧಿಯೂ ಇಲ್ಲ. ಲೋಕೋಪಕಾರಿಯಾದ ಪರಮಾತ್ಮನು ಈ ರೀತಿಯ ಬಾಷೆಯನ್ನೇಕೆ ಸೃಷ್ಟಿಸುತ್ತಾನೆ ? ಈ ಪ್ರವಾದಿಗಳು ಪರಮಾತ್ಮನಿಂದಲೇ ಉಪದೇಶ ಪಡೆದವರು ಎನ್ನುವುದಾದರೆ ಅವರವರಲ್ಲಿ ಮತಭೇದಗಳು ಎಕೆ ಬಂದವು ? ಈ ಇಬ್ಬರೂ ಚರಿತ್ರೆಯಲ್ಲಿ ಪ್ರಸಿದ್ಧರಾಗಿ ತಮ್ಮ ತಮ್ಮ ಮತಗಳನ್ನೇ ಪ್ರಚಾರ ಮಾಡಿದವರು ಎಂಬುದಂತೂ ಎಲ್ಲರಿಗೂ ತಿಳಿದ ವಿಷಯ. ಅತ್ಯಂತ ವಿಶಾಲವಾದ ವೇದರಾಶಿಯಲ್ಲಿ ಈ ಇಬ್ಬರ ಬಗ್ಗೆ ಎಲ್ಲಿಯೂ ಒಂದು ವಾಕ್ಯವೂ ಕಂಡು ಬಂದಿಲ್ಲ. ಇವರಿಬ್ಬರೂ ಮಂತ್ರಗಳನ್ನೂ ಕಂಡು ಕೊಂಡವರು ಎಂದು ಹೇಳುವುದಾದರೆ, ಇಬ್ಬರಲ್ಲಿರುವ ಚಿಂತನೆಗಳೂ ಭಿನ್ನ ರೀತಿಯವು ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಇಂದಿನ ದಿನಗಳ ತತ್ತ್ವ ಚಿಂತಕರು, ಐತಿಹಾಸಿಕ ಸಂಶೋಧಕರು ಮುಂತಾದವರುಗಳಲ್ಲಿ ಅಭಿಪ್ರಾಯ ಭೇದಗಳು ಕಂಡು ಬರುತ್ತದೆ. ಆದರೂ ನವೀನ ಮತ್ತು ಪ್ರಾಚೀನ ಭಾರತೀಯ ವಿದ್ವಾಂಸರು ಈ ಎಲ್ಲ ಮತಭೇದಗ್ಳನ್ನು ನಿವಾರಿಸಿ ವೇದವಾಕ್ಯಗಳ ಶುದ್ಧ ಅರ್ಥಗಳನ್ನು ತಿಳಿಸಿಕೊಟ್ಟಿದ್ದಾರೆ. ಅದನ್ನು ಇಲ್ಲಿ ಹೆಚ್ಚಾಗಿ ಹೇಳುವ ಅಗತ್ಯವಿಲ್ಲ.

ಮುಂದೆ ನಾಸ್ತಿಕಮತದವರ ಅಭಿಪ್ರಾಯಗಳನ್ನು ವಿಚಾರಮಾಡೋಣ ಇವರು ಹೇಳುವಂತೆ ಬಹುಪೂರ್ವದಲ್ಲಿ ಮಾನವ ಜಾತಿಯು ಅನಾಗರಿಕವಾಗಿಯೂ ಅಸಂಸ್ಕೃತವಾದದ್ದೂ ಆಗಿತ್ತು. ಕ್ರಮವಾಗಿ ಮಾನವನಲ್ಲಿ ಬುದ್ಧಿಯು ವಿಕಾಸಗೊಂಡಿತು. ಹೀಗೆ ಮಾನವನ ಬುದ್ಧಿಯು ವಿಕಾಸವಾದಂತೆ ಅನ್ನ, ವಸ್ತ್ರ, ಆಶ್ರಯಕ್ಕಾಗಿ ವಸತಿಗಳ ನಿರ್ಮಾಣ ಮುಂತಾದುವು ಬೆಳೆದು ಬಂದವು. ಹೀಗೆ ಪ್ರಗತಿಯನ್ನು ಹೊಂದುತ್ತಾ ಜನರು ತಮ್ಮ ವ್ಯವಹಾರಗಳನ್ನು ಸುಗಮವಾಗಿ ಮಾಡಿಕೊಳ್ಳಲು ಶಬ್ದಗಳನ್ನೂ ಅವುಗಳ ಅರ್ಥಸಹಿತ ಉಚ್ಚಾರಣೆಯನ್ನೂ ಕಂಡುಕೊಂಡರು. ಹೀಗೆಯೇ ಕಾಲಗತಿಯು ಮುಂದೆ

ಬಂದಂತೆ ಶಬ್ದಗಳಿಗೆ ಲಿಪಿಯನ್ನೂ ಕಂಡುಕೊಂಡರು. ಅದರಂತೆ ಬರೆಯಲುಬೇಕಾಗುವ ಸಾಮಗ್ರಿಗಳನ್ನು ತಯಾರಿಸಿಕೊಂಡರು. ಹೀಗೆಯೇ ಕ್ರಮವಾಗಿ ಭಾಷೆಗಳು ಬಳಕೆಗೆ ಬಂದವು ಎನ್ನುವುದು ಈ ವಿಚಾರವಾದಿಗಳ ಅಭಿಪ್ರಾಯವಾಗಿದೆ. ಅವರ ಮತದಂತೆಯೇ ಚಿಂತನೆ ಮಾಡಿ ಮುಂದಿನ ನಮ್ಮ ವಿಚಾರಗಳನ್ನು ತಿಳಿಸಲಾಗಿದೆ.

ಜನರು ಸುಖಾಪೇಕ್ಷಿಗಳಾಗಿರುತ್ತಾರೆಂಬುದು ಸತ್ಯ. ಯಾವುದೇ ಕಾರ್ಯವನ್ನು ಆರಂಭ ಮಾಡಿದರೂ ಅದು ಸುಖವನ್ನು ತಂದುಕೊಡಬೇಕೆಂಬುದು ಮನುಷ್ಯರಲ್ಲಿ ಸಹಜವಾದ ಅಪೇಕ್ಷೆ. ಇದರಂತೆಯೇ ವ್ಯವಹಾರ ಸೌಕರ್ಯಕ್ಕಾಗಿ ಇರುವ ಶಬ್ದಗಳೂ ಕೂಡ. ಕಂಠ, ತಾಲು ಮುಂತಾದ ಸ್ಥಾನಗಳಿಗೆ ಹೆಚ್ಚು ತೊಂದರೆ ಕೊಡದೆ ಸುಲಭವಾಗಿ ಉಚ್ಚರಿಸಲು ಸಾಧ್ಯವಾಗಬೇಕೆಂಬ ಇಚ್ಛೆ ಇದ್ದೇ ಇರುತ್ತದೆ. ಉಗುರಿನಲ್ಲಿ ತೆಗೆಯಬಹುದಾದ ವಸ್ತುವಿಗೆ ಯಾರೂ ಕೊಡಲಿಯಿಂದ ಹೊಡೆಯುವುದಿಲ್ಲ. ಕಾಲ್ನಡಿಗೆಯಲ್ಲಿ ತಲುಪಬಹುದಾದ ಸ್ಥಾನಕ್ಕೆ ಕುದುರೆಯನ್ನೇರಿ ಹೋಗುವುದಿಲ್ಲ ಅಥವಾ ಭೂಮಿಯ ಮೇಲೆ ಉರುಳಿಕೊಂಡೂ ಹೋಗುವುದಿಲ್ಲ.

ಇಂತಹ ಅನೇಕ ಲೋಕೋಕ್ತಿಗಳಉದಾಹರಣೆಗಳಿವೆ. ಹೀಗಿದ್ದಾಗ ಮನುಷ್ಯನು ನಾಲಿಗೆಗೆ ಕಷ್ಟ ಕೊಡುವಂತಹ ಶಬ್ದಗಳನ್ನೇಕೆ ನಿರ್ಮಾಣ ಮಾಡುತ್ತಾನೆ. ವೈದಿಕ ಭಾಷೆಯಲ್ಲಾಗಲೀ ಲೌಕಿಕ (ಜನಪದ) ಭಾಷೆಯಲ್ಲಾಗಲೀ ಇರುವ ಎಲ್ಲ ಸಂಸ್ಕೃತ ಶಬ್ದಗಳೂ ಸುಖವಾಗಿ ಉಚ್ಚರಿಸಲು ಸಾಧ್ಯವಾಗುವಂತಹವಲ್ಲ. ಖ,ಫ,ಛ,ಝ ಇಂತಹ ವರ್ಣಗಳನ್ನು ಸುಲಭವಾಗಿ ಉಚ್ಚರಿಸಲು ಸಾಧ್ಯವಿಲ್ಲ, ಇವುಗಳಂತೆಯೇ ಜಿಹ್ವಾಮೂಲೀಯ ಉಪಧ್ಮಾನೀಯಗಳೂ (ಕ, ಖ, ಗಳ ಹಿಂದಿನ ವಿಸರ್ಗಕ್ಕೆ ಉಪಧ್ಮಾನೀಯವೆಂದೂ ಪ ಫ ಗಳ ಹಿಂದಿನ ವಿಸರ್ಗಕ್ಕೆ ಜಿಹ್ವಾಮೂಲೀಯವೆಂದೂ ಹೆಸರು ಇವೆ) ಮತ್ತು ಕೆಲವು ಪದಗಳು ವಿಶೇಷ ರೀತಿಯಲ್ಲಿ ಸಂಯುಕ್ತ ಪದಗಳಾಗಿವೆ. ಉದಾ – **ಜರ್ಭರೀ, ತುರ್ಫರೀ, ಸ್ವಚ್ಛಂದೋಚ್ಛಲದಚ್ಛಕಚ್ಛ, ಕ್ಷಪಾಃಕ್ಷಪಯತಿ, ಹೂರ್ಚ್ಛನಂ, ಕಾತ್ಸ್ನರ್ಮ್** ಮುಂತಾದ ಅಸಂಖ್ಯಾತ ಪದಗಳ ಉಚ್ಚಾರಣೆಯು ವಿದ್ವಾಂಸರಿಗೂ ಕಷ್ಟ ಮತ್ತು ಸಾಮಾನ್ಯರ ಪಾಡೇನು ? ಇಂತಹ ಕಠಿಣ ಪದಗಳ ಉಚ್ಚಾರಣೆ ಮಾಡಲಾಗದವರಿಂದ ಪ್ರಾಕೃತ ಭಾಷೆಗಳು ಹುಟ್ಟಿಕೊಂಡವು. ಸಂಸ್ಕೃತ ಮೂಲದಿಂದಲೂ ಬಂದ ಈ ಅಪಭ್ರಂಶಶಬ್ದಗಳು ದೇಶ ಭೇದದಂತೆ ಜನಾಂಗ ಭೇದದಂತೆ ಅನೇಕ ರೂಪಗಳನ್ನು ಪಡೆದವು.

ವೈದಿಕಭಾಷೆಯಲ್ಲಿ ಉದಾತ್ತ, ಅನುದಾತ್ತ, ಸ್ವರಿತಗಳೆಂಬ ಮೂರು ರೀತಿಯ ಸ್ವರಗಳ ನಿಯಮವು ಇದ್ದೇ ಇದೆ. ಇದಕ್ಕೆ "**ಸ್ವಾಹೇಂದ್ರಶತ್ರುರ್ವರ್ಧಸ್ವ**" ಎಂಬ ವಾಕ್ಯವು ಒಳ್ಳೆಯ ಉದಾಹರಣೆ. ಸ್ವರನಿಯಮಗಳನ್ನು ತಪ್ಪಾಗಿ ಹೇಳಿದರೆ ಅದರಿಂದ ಸಮಾಸಭೇದವು ಬರುತ್ತದೆ. ಇದರಿಂದ ಅರ್ಥಭೇದವೂ ಉಂಟಾಗುತ್ತದೆ. 'ಇಂದ್ರನ ಶತ್ರುವು ಕೊಲ್ಲಲ್ಪಡಲಿ' ಎಂಬ ಅರ್ಥವನ್ನು ಕೊಟ್ಟಿತು. ಈ ರೀತಿಯಾಗಿ ಕೊಟ್ಟ ಹವಿಸ್ಸಿನಿಂದ ಇಂದ್ರನ ಶತ್ರುವಾದ ವೃತ್ರಾಸುರನು ಹುಟ್ಟಿ ಬಂದನು ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಹೀಗೆ ಅತ್ಯಂತ ಸೂಕ್ಷ್ಮವಾದ ಸ್ವರಗಳ ಉಚ್ಚಾರಣಾ ಭೇದವನ್ನೂ ನಮ್ಮ ಮೂಲ ಪುರುಷರು

ಏಕೆ ಕಲ್ಪಸಿಕೊಟ್ಟರು ? (ಇದರಿಂದ ಉಂಟಾಗುವ ವಿಪರೀತಾರ್ಥಗಳನ್ನೂ) ಮುಂದೆ ಲಿಂಗವಾಚಕಗಳ ವಿಷಯದಲ್ಲಿಯೂ ಸಂಸ್ಕೃತ ಭಾಷೆಯು ಶಬ್ದಕ್ಕೆ ಅನುಸಾರವಾಗಿದೆಯೇ ಹೊರತು ಅರ್ಥಕ್ಕೆ ಅನುಸಾರವಾಗಿಲ್ಲ. ಶಾಖಾ, ಶಿಲಾ ಮುಂತಾದ ಶಬ್ದಗಳು ಸ್ತ್ರೀಲಿಂಗಗಳು, ಘಟ, ಪಟ ಇವುಗಳು ಪುಲ್ಲಿಂಗಗಳು, ಮಿತ್ರ ಕಲತ್ರಾದಿಗಳು ನಪುಂಸಕ ಲಿಂಗಗಳು, ತದ್ ಶಬ್ದಗಳು ತ್ರಿಲಿಂಗಗಳು, ಜ್ವಾಲಾ ಮುಂತಾದುವುಗಳು ದ್ವಿಲಿಂಗಗಳು. ಈ ರೀತಿಯಾದ ಶಬ್ದ ಪ್ರಯೋಗಗಳನ್ನು ಲೋಕಕ್ಕೆ ಬೋಧಿಸಿದವರು ಯಾರು ? ಮತ್ತು ಏಕೆ ? ಲೋಕದಲ್ಲಿ ಜನಗಳ ನುಡಿಯಲ್ಲಿದ್ದಂತೆ ಲಿಂಗಗಳನ್ನು ಆಶ್ರಯಿಸಿದ್ದೇವೆಂದು ವ್ಯಾಕರಣ ಶಾಸ್ತ್ರದಲ್ಲಿ ಸ್ಪಷ್ಟವಾಗಿ ಹೇಳಿದೆ. ಆಚಾರ್ಯ ಪಾಣಿನಿಯವರು ಲಿಂಗವಾಚಕಗಳ ಬಗ್ಗೆ **'ತದಶಿಷ್ಯಂ; ಸಂಜ್ಞಾ ಪ್ರಮಾಣತ್ವಾತ್'** ಎಂದು ಸೂತ್ರ ರಚಿಸಿದ್ದಾರೆ. ಜನರು ಹೇಗೆ ಶಬ್ದಪ್ರಯೋಗ ಮಾಡುತ್ತಿದ್ದರೋ ಅದೇ ರೀತಿಯಲ್ಲಿ ವೈಯಾಕರಣರು ಆ ಶಬ್ದಗಳಿಗೆ ರೂಪಸಿದ್ಧಿಯನ್ನು ತೋರಿಸಿಕೊಟ್ಟಿದ್ದಾರೆ. **ಶಾಖಾ ಪುಷ್ಪಿತಾ, ಶಿಲಾಯಾಮುಪವಿಷ್ಟಃ, ಘಟಃ ಆನೀಯಃ, ಪಟೋ ನಿಷ್ಪಾದಿತಃ, ಸುಗ್ರೀವೋ ರಾಮಸ್ಯ ಮಿತ್ರಮ್, ಸೀತಾ ರಾಮಸ್ಯ ಕಲತ್ರಮ್** ಮುಂತಾದ ಲೌಕಿಕ ಪ್ರಯೋಗಗಳನ್ನು ಗಮನಿಸಿ ವ್ಯಾಕರಣಶಾಸ್ತ್ರದ ರಚನೆಯಾಗಿರುತ್ತದೆ, ಹೀಗೆ ಸಮರ್ಥಿಸುತ್ತಾರೆ. 'ಯಾರಾದರೂ ಕುಂಬಾರನ ಮನೆಗೆ ಬಂದು ಒಂದು ಘಟವನ್ನು ಮಾಡಿಕೊಡು ಉಪಯೋಗಿಸುತ್ತೇನೆ ಎಂದು ಹೇಳಬಹುದು. ಆದರೆ ವ್ಯಾಕರಣಶಾಸ್ತ್ರಜ್ಞರ ಮನೆಗೆ ಬಂದು ಒಂದು ಶಬ್ದವನ್ನು ಉತ್ಪತ್ತಿಮಾಡಿಕೊಡು ಪ್ರಯೋಗಿಸುತ್ತೇನೆ ಎಂದು ಕೇಳುವುದಿಲ್ಲ. ಅಮರಕೋಶ ಮುಂತಾದವುಗಳ ಸಹಾಯವಿಲ್ಲದೆ ಸಂಸ್ಕೃತ ಭಾಷೆಯಲ್ಲಿ ಲಿಂಗ ವ್ಯವಸ್ಥೆಯನ್ನು ತಿಳಿಯುವುದು ಖಂಡಿತಾ ಸಾಧ್ಯವಿಲ್ಲ. ಸಮಾನಲಿಂಗಗಳಿದ್ದರೂ ಪದಗಳಲ್ಲಿ ರೂಪಭೇದವಿದೆ. ರಾಮಶಬ್ದ ಸರ್ವಶಬ್ದಗಳು ಅಕಾರಾಂತವೇ ಆದರೂ ಎಲ್ಲ ವಿಭಕ್ತಿರೂಪಗಳೂ ಸಮಾನವಾಗಿಲ್ಲ. ಅಂತೆಯೇ ಸರ್ವಶಬ್ದ ಪೂರ್ವ ಶಬ್ದಗಳೆರಡೂ ಸರ್ವನಾಮ ಶಬ್ದಗಳೇ ಆದರೂ ಇವುಗಳಲ್ಲಿಯೂ ರೂಪಭೇದವಿದೆ. ರಾಜನ್‌ಶಬ್ದದಂತೆ ಆತ್ಮನ್‌ಶಬ್ದವಿಲ್ಲ, ಆತ್ಮನ್ ಇದ್ದಂತೆ ಯುವನ್ ಶಬ್ದವಿಲ್ಲ. ಲಕ್ಷ್ಮೀ ಶಬ್ದದಂತೆ ಶ್ರೀಶಬ್ದವಿಲ್ಲ. ಕರ್ಮನ್‌ಶಬ್ದವಿದ್ದಂತೆ ಅಹನ್ ಶಬ್ದವಿಲ್ಲ. ಇಂತಹ ಅನೇಕ ಉದಾಹರಣೆಗಳು.

ಇದಲ್ಲದೆ ಕೆಲವು ಪದಗಳು ಸಮಾಸ ಪದಗಳಾದಾಗ ರೂಪಭೇದವನ್ನು ಪಡೆದುಕೊಳ್ಳುತ್ತವೆ. 'ನ'ಕಾರಾಂತವಾದರಾಜನ್ ಶಬ್ದವು ಸಮಾಸಪದವಾದಾಗ ಮಹಾರಾಜ ಎಂದು ಅಕಾರಾಂತವಾಗುತ್ತದೆ. ಸಖಿಶಬ್ದವು ಪ್ರಿಯಸಖ ಎಂದು ಸಮಾಸಪದದರೂಪ. ಕರ್ಮಧಾರಯಸಮಾಸದಲ್ಲಿ ಸುಗಂಧ ಎಂದಿದ್ದ ಶಬ್ದವು ಬಹುವ್ರೀಹಿಯಲ್ಲಿ ಸುಗಂಧಿ ಎಂಬ ರೂಪವನ್ನು ಪಡೆಯುತ್ತದೆ. ಇದಲ್ಲದೆ ಸ್ತ್ರೀ ಪ್ರತ್ಯಯಗಳ ಕೃದಂತ ತದ್ಧಿತಾಂತರೂಪಗಳು ಹೀಗೆ ಹಲವಾರು ರೂಪಭೇದಗಳು ಅರಿವಿಗೆ ಅಸಾಧ್ಯವಾಗುವಷ್ಟು ಇಷ್ಟೊಂದು ಕಷ್ಟಶಬ್ದಗಳನ್ನು ಯಾರು ನಿರ್ಮಾಣ ಮಾಡಿಕೊಟ್ಟಿರಬಹುದು ?

ಕ್ರಿಯಾಪದಗಳ ರೂಪಗಳು ಪಂಡಿತರಿಗೂ ಊಹೆಮಾಡಲು ಸಾಧ್ಯವಿಲ್ಲ. ಇಲ್ಲಿ ಕಾಲ ಮತ್ತು ಅರ್ಥವನ್ನು ಬೋಧಿಸುವ ಹತ್ತು ಲಕಾರಗಳು. ಹತ್ತು ಗಣಗಳಾಗಿ ವಿಭಾಗಿಸಿರುವ ಸಹಸ್ರಾರು ಧಾತುಗಳ ರೂಪಗಳಲ್ಲಿ ಸೇಟ್, ಅನಿಟ್, ವೇಟ್ ಎಂದು ಮೂರು ವಿಧ. ಪರಸ್ಮೈಪದಿ, ಆತ್ಮನೇಪದಿ, ಉಭಯಪದಿಗಳೆಂದು ಮತ್ತೆ ಮೂರು ಬಗೆ. ಅದಲ್ಲದೆ ಉಪಸರ್ಗಗಳ ಜೋಡಣೆಯಿಂದ ಅರ್ಥಭೇದಗಳೂ ಪರಸ್ಮೈಪದ, ಆತ್ಮನೇ ಪದ ಇವುಗಳಲ್ಲಿ ವ್ಯತ್ಯಯವೂ ಕಂಡು ಬರುತ್ತದೆ. ಹತ್ತು ಲಕಾರಗಳಲ್ಲಿಯೂ

ಧಾತುಗಳಲ್ಲಿ ಅನೇಕ ರೀತಿಯ ರೂಪ ಭೇದಗಳನ್ನು ಕಾಣುತ್ತೇವೆ. ಲುಙ್‌ಲಕಾರ ಒಂದರಲ್ಲಿಯೇ **ಸಿಚ್, ಚಙ, ಕ್ಸ** ಇತ್ಯಾದಿ ಪ್ರತ್ಯಯ ಭೇದಗಳು. ಇದಲ್ಲದೇ **ಸನ್, ಯಙ, ಣಿಚ್** ಪ್ರತ್ಯಯಗಳ ಜೋಡಣೆಯಿಂದ ಒಂದೇ ರೀತಿ ಇರುವಂತೆ ತೋರುವ ಅನೇಕ ಭೇದಗಳು. ಇಷ್ಟೊಂದು ವ್ಯತ್ಯಾಸಗಳನ್ನು ಭಾಷಾ ನಿರ್ಮಾಣಕಾರನು ಮಾನವನೇ ಆದರೆ ಏಕೆ ಮಾಡಿರುತ್ತಾನೆ. ಇದಿಷ್ಟೇ ಅಲ್ಲದೆ ಈ ಭಾಷೆಯಲ್ಲಿ ದ್ವಿವಚನದ ವ್ಯವಹಾರವೂ ಸೇರಿಕೊಂಡು ಅತ್ಯಂತ ಗಡುಸೆನ್ನಿಸಿಕೊಂಡಿದೆ.

ಒಂದು ವೇಳೆ ವ್ಯವಹಾರಕ್ಕಾಗಿ ಮಾನವನು ಹೊಸದಾಗಿ ಭಾಷೆಯನ್ನು ನಿರ್ಮಾಣ ಮಾಡುವುದಾಗಿದ್ದರೆ, ಒಂದೊಂದು ಅರ್ಥವನ್ನು ಕೊಡುವಂತಹ ಒಂದೊಂದು ಶಬ್ದವನ್ನು ನಿರ್ಮಿಸಿಕೊಂಡಿರುತ್ತಾನೆ ಅಥವಾ ದೇಶ ಕಾಲಗಳ ಭೇದದಿಂದ ಜನಾಂಗಗಳ ಭೇದದಿಂದ ಬೇರೆ ಬೇರೆ ಪರ್ಯಾಯ ಪದಗಳು ಹುಟ್ಟಿಕೊಂಡಿದ್ದರೆ ಎರಡು ಮೂರು ಶಬ್ದಗಳಿರಬಹುದಿತ್ತು. ಆದರೆ ಸಂಸ್ಕೃತ ಭಾಷೆಯಲ್ಲಿ ಒಂದು ವಸ್ತುವನ್ನು ಬೋಧಿಸಲು ಅನೇಕ ಶಬ್ದಗಳು ದೊರೆಯುತ್ತವೆ. ಇದಕ್ಕೆ ಯಾಸ್ಕಾಚಾರ್ಯರು ರಚಿಸಿರುವ ನಿಘಂಟು ಆಧಾರವಾಗಿದೆ. ಈ ನಿಘಂಟಿನಲ್ಲಿ ಈ ರೀತಿ ಹೇಳಿಕೆ ಇದೆ.

1. ಉದಕನಾಮಾನ್ಯುತ್ತರಾಣಿ ಏಕಶತಮ್ (101)
2. ರಾತ್ರಿ ನಾಮಾನ್ಯುತ್ತರಾಣಿ ತ್ರಯೋವಿಂಶತಿಃ (23)
3. ಮೇಘನಾಮಾನ್ಯುತ್ತರಾಣಿ ತ್ರಿಂಶತ್ (30)
4. ವಾಙ್ನಾಮಾನ್ಯುತ್ತರಾಣಿ ಸಪ್ತಪಂಚಾಶತ್ (57)
5. ಉಷೋನಾಮಾನ್ಯುತ್ತರಾಣಿ ಷೋಡಶ (16)
6. ಅಶ್ವ ನಾಮಾನ್ಯುತ್ತರಾಣಿ ಷಡ್ವಿಂಶತಿಃ (26)
7. ಕರ್ಮನಾಮಾನ್ಯುತ್ತರಾಣಿ ಷಡ್ವಿಂಶತಿಃ (26)
8. ಮನುಷ್ಯನಾಮಾನ್ಯುತ್ತರಾಣಿ ಪಂಚವಿಂಶತಿಃ (25)
9. ಅಂಗುಲಿನಾಮಾನ್ಯುತ್ತರಾಣಿ ದ್ವಾವಿಂಶತಿಃ (22)
10. ಅನ್ನ ನಾಮಾನ್ಯುತ್ತರಾಣಿ ಅಷ್ಟಾವಿಂಶತಿಃ (28)
11. ಗೃಹನಾಮಾನ್ಯುತ್ತರಾಣಿ ದ್ವಾವಿಂಶತಿಃ (22)
12. ಕ್ಷಿಪ್ರನಾಮಾನ್ಯುತ್ತರಾಣಿ ಷಡ್ವಿಂಶತಿಃ (26) ಇತ್ಯಾದಿ.

ಯಾಸ್ಕರ ನಿಘಂಟಿನಲ್ಲಿ ಕಾಣಿಸದಿರುವ ಅನೇಕ ಪರ್ಯಾಯ ಶಬ್ದಗಳೂ ಬೇರೆ ಬೇರೆ ಕೋಶಗಳಲ್ಲಿ ಕಾಣಸಿಗುತ್ತವೆ. ಯಾವ ಪ್ರಯೋಜನಕ್ಕಾಗಿ ಮಾನವನಿಂದ ಇಷ್ಟೊಂದು ಪರ್ಯಾಯ ಶಬ್ದಗಳು ನಿರ್ಮಿತವಾದವು ? ಈ ರೀತಿಯ ಪರ್ಯಾಯ ಶಬ್ದಗಳು ಪ್ರಪಂಚದ ಬೇರೆ ಯಾವ ಭಾಷೆಯಲ್ಲಿಯೂ ಕಾಣಸಿಗದು. ಬೇರೆ ಭಾಷೆಯಲ್ಲಿನ ಪರ್ಯಾಯ ಪದಗಳು ಗಣನೆಗೆ ಸಿಕ್ಕುತ್ತವೆ. ಸಂಸ್ಕೃತ ಭಾಷೆಯಲ್ಲಿ ಮಾತ್ರ ಹಾಗಿಲ್ಲ. ಈ ಭಾಷೆಯಲ್ಲಿ ಶಬ್ದಗಳಿಗೆ ಪರಿಮಿತಿಯೇ ಇಲ್ಲ. ಶಬ್ದಗಳು ಅನಂತವಾದವು.

ಮಹಾಭಾಷ್ಯಕಾರರಾದ ಪತಂಜಲಿಗಳು ಪಸ್ಪಶಾಹ್ನಿಕದಲ್ಲಿ ಹೇಳಿರುವಂತೆ - ಬೃಹಸ್ಪತಿಯು ಇಂದ್ರನಿಗೆ ಪ್ರತಿಪದದಲ್ಲಿರುವ ಶಬ್ದಗಳಿಗೂ ಶಬ್ದಪಾರಾಯಣವನ್ನು ಮಾಡುವಂತೆ ಹೇಳಿದನು. ಬೃಹಸ್ಪತಿಯು ಪಾಠ ಹೇಳುವವನು, ಇಂದ್ರನು ಅಧ್ಯಯನ ಮಾಡುವವನು ಹೀಗೆ ಸಹಸ್ರ ದಿವ್ಯ ವರ್ಷಗಳು ಅಧ್ಯಯನ ಮಾಡಿದರೂ ಮುಗಿಯಲಿಲ್ಲ.

ಹೀಗಿರುವಾಗ ಈಗಿನ ಕಾಲದಲ್ಲಿ ಅಧ್ಯಯನದ ಸ್ಥಿತಿ ಏನು ? ಬಹಳ ಕಾಲ ಜೀವಿಸಿರುವ ಮನುಷ್ಯನೆಂದರೂ ನೂರು ವರ್ಷಗಳು ಜೀವಿಸಿರಬಹುದು. ಕಲಿತ ವಿದ್ಯೆಯು ಉಪಯೋಗಕ್ಕೆ ಬರುವುದು. ನಾಲ್ಕು ಕಾಲಗಳಲ್ಲಿ ತನ್ನ ಅಧ್ಯಯನಕಾಲ, ಮುಂಬರುವ ಕಾಲ, ಬೇರೆಯವರಿಗಾಗಿ ಪ್ರವಚನವನ್ನು ಹೇಳುವಕಾಲ ಮತ್ತು ಲೋಕವ್ಯವಹಾರದಲ್ಲಿ ಉಪಯೋಗಕ್ಕೆ ಬರುವ ಕಾಲ. ಹೀಗಿರುವಾಗ ಇಷ್ಟೊಂದು ಅಳತೆಯಿಲ್ಲದ ಈ ಭಾಷೆಯಲ್ಲಿ ಪ್ರತಿಪದವನ್ನೂ ತಿಳಿಯುವುದು ಅಸಾಧ್ಯದ ಮಾತು.

ಸಾಮಾನ್ಯವಾಗಿ ಮಾನವನು ಸುಖವಾಗಿ ಬದುಕಲು ಇಚ್ಛಿಸುತ್ತಾನೆ. ಈ ಭಾಷೆಯು ಮಾನವ ನಿರ್ಮಿತವೇ ಆಗಿದ್ದರೆ, ಸುಖವನ್ನು ಬಯಸುವ ಮನುಷ್ಯನು ಹೀಗೆ ಲೆಕ್ಕವಿಲ್ಲದಷ್ಟು ಪರ್ಯಾಯ ಶಬ್ದಗಳನ್ನು ಬೇರೆ ಬೇರೆ ರೀತಿಯ ಅನಂತ ಶಬ್ದಗಳನ್ನು ಏಕೆ ಸೃಷ್ಟಿಸಿಕೊಳ್ಳುತ್ತಾನೆ. ಈ ಪ್ರಶ್ನೆಗೆ ಮೌನವೇ ಉತ್ತರವಾಗುತ್ತದೆ. ಅಲ್ಲದೆ ಇಂತಹ ಅಪಾರ ಶಬ್ದರಾಶಿಯನ್ನು ಮಾನವನು ನಿರ್ಮಿಸಿಲ್ಲ ಎಂದು ಒಪ್ಪುವ ಮನಸ್ಸಿಲ್ಲದವರೂ ಒಪ್ಪಲೇ ಬೇಕಾಗುತ್ತದೆ. ಮನುಷ್ಯನು ಪರಿಮಿತಿಯುಳ್ಳ ಭವನಗಳನ್ನೂ ಯಂತ್ರಗಳನ್ನೂ ಉತ್ಪಾದಿಸಬಲ್ಲನೇ ಹೊರತು ಪರ್ವತ, ಸಮುದ್ರ, ಚಂದ್ರ, ಸೂರ್ಯ ಮುಂತಾದ ಗ್ರಹ ನಕ್ಷತ್ರಗಳನ್ನು ನಿರ್ಮಿಸಲಾರ. ಅದರಂತೆ ನಿತ್ಯವಾದ ಶಬ್ದಗಳೂ ಮಾನವ ನಿರ್ಮಿತವಲ್ಲ.

ವೈದಿಕ ಶಬ್ದಗಳ ಪ್ರಯೋಗವು ಕಷ್ಟ ಸಾಧ್ಯ ಆದ್ದರಿಂದ ಜನಗಳಲ್ಲಿ ವ್ಯವಹಾರ ಸೌಲಭ್ಯಕ್ಕಾಗಿ ಸಂಸ್ಕರಿಸಿದ್ದು ಈ ಜನಪದ ಭಾಷೆ ಎಂದು ಹಿಂದೆಯೇ ಹೇಳಿದೆ. ಈಗಿನ ಹೇಳಿಕೆಯಂತೆ ಸಂಸ್ಕಾರಗೊಂಡ ಶಬ್ದಗಳನ್ನೂ ತಿಳಿಯುವುದು ಕಷ್ಟಸಾಧ್ಯ ಎಂದು ಹೇಳಿದಂತಾಯಿತು. ಎಂದರೆ ಇದಕ್ಕೆ ಸಮಾಧಾನವು ಹೀಗಿದೆ. ವೈದಿಕ ಶಬ್ದಗಳು ಅಪರಿಮಿತ, ಅವುಗಳಿಗೆ ಲಕ್ಷಣವನ್ನು ಹೇಳುವುದು ಸಾಧ್ಯವಿಲ್ಲ. ಅವುಗಳಲ್ಲಿ ಕೆಲವು ಗೃಹ್ಯಸೂತ್ರಗಳು ಮುಂತಾದುವುಗಳಲ್ಲಿ ಉಪಯೋಗದಲ್ಲಿವೆ. ಅಂತಹ ಶಬ್ದಗಳು ಶಿಷ್ಟ ಜನರ ವ್ಯವಹಾರದಲ್ಲಿಯೂ ಮುಂದುವರೆದಿದೆ. ಆದರೆ ಜನಪದ ಭಾಷೆಯಾಗಿ ಮುಂದುವರೆದಾಗ ಈ ಶಬ್ದಗಳನ್ನು ಸ್ವಲ್ಪ ಭಿನ್ನ ರೀತಿಯಲ್ಲಿ ಉಚ್ಛಾರಮಾಡಿರುವುದರಿಂದ ಶಬ್ದಗಳ ರೂಪವೇ ಬೇರೆಯಾಗಿದೆ. ಈ ರೀತಿಯಾದ ದೋಷಗಳು ಮಾನವನಿಗೆ ಸಹಜವಾದ ದೌರ್ಬಲ್ಯ. ಆದರೆ ಆಚಾರ್ಯ ಪಾಣಿನಿ ಮುಂತಾದವರು ಈ ರೀತಿಯ ಶಬ್ದ ವಿಕಾರಗಳನ್ನು ಸಹಿಸಲಿಲ್ಲ. ಆದ್ದರಿಂದ ಶಬ್ದಗಳ ವ್ಯುತ್ಪತ್ತಿ, ಲಕ್ಷಣ ಮುಂತಾದುವುಗಳನ್ನು ಜನಗಳಿಗೆ ತಿಳಿಸಿಕೊಟ್ಟರು. ಇಂತಹ ವ್ಯವಸ್ಥೆಯನ್ನೇ ಸಂಸ್ಕಾರವೆನ್ನುತ್ತಾರೆ. ಹೀಗೆ ಪದಗಳನ್ನು ಸಂಸ್ಕರಿಸಿದಾಗ ಉದಾತ್ತ ಅನುದಾತ್ತಾದಿ ಸ್ವರಗಳ ನಿಯಮವನ್ನು ಕೈ ಬಿಟ್ಟರು. ಆದ್ದರಿಂದ ಜನಪದ ಭಾಷೆಯಲ್ಲಿ ಉಪಯೋಗಿಸುವ ಪದಗಳನ್ನು ಸುಲಭರೂಪಕ್ಕೆ ತಂದಂತಾಯಿತು. ಇಷ್ಟಾದರೂ ವಿದ್ಯಾಭ್ಯಾಸವೇ ಆಗಿಲ್ಲದವರಿಗೆ ಕೃಷಿ ಕಾರ್ಯಗಳಲ್ಲಿ ತೊಡಗಿಸಿಕೊಂಡವರಿಗೆ ಸಾಧಾರಣ ಜನರಿಗೆ ಶಬ್ದಗಳು ಕಷ್ಟವೆಂದೇ ಎನ್ನಿಸಿದವು. ಆದ್ದರಿಂದ ಆಯಾ ಪ್ರದೇಶಗಳಲ್ಲಿದ್ದ ಜನರು ಹೇಗೆ ಶಬ್ದಗಳನ್ನು ಪ್ರಯೋಗಮಾಡಿದರೋ ಅದೇ ರೀತಿಯಲ್ಲಿ ಗೌಡೀ ಶೂರಸೇನೀ ಮುಂತಾದ ಪ್ರಾದೇಶಿಕ ಭಾಷೆಗಳು ಹುಟ್ಟಿಕೊಂಡವು. ಹೀಗೆ ಹುಟ್ಟಿಕೊಂಡ ಪ್ರಾಕೃತ ಭಾಷೆಗಳೂ ಕೂಡ ದೇಶ ಕಾಲಾದಿಗಳ ಭೇದದಿಂದ ಬಗೆ ಬಗೆಯ ರೂಪವನ್ನು ತಳೆದವು.

ಈ ದೇವವಾಣಿಯು ಇಡೀ ಜಗತ್ತನ್ನು ವ್ಯಾಪಿಸಿತ್ತೆಂದು ಮಹಾಭಾಷ್ಯದ ವಾಕ್ಯಗಳಿಂದ ತಿಳಿದುಬರುತ್ತದೆ. ಪಸ್ಪಶಾಹ್ನಿಕದಲ್ಲಿ '**ಸರ್ವೇದೇಶಾಂತರೇ**' ಎಂಬ ವಾರ್ತಿಕವನ್ನು ವ್ಯಾಖ್ಯಾನಮಾಡಿದ್ದಾರೆ. ಆಗ ಮಹತ್ತಾದ ಶಬ್ದ ಪ್ರಯೋಗದ ವಿಷಯವನ್ನು ಹೇಳಿದ್ದಾರೆ. **"ಸಪ್ತದ್ವೀಪಾ ವಸುಮತೀ, ತ್ರಯೋ ಲೋಕಾಃ, ಚತ್ವಾರೋ ವೇದಾಃ, ಸಾಂಗಾಃ ಸರಹಸ್ಯಾಃ, ಬಹುಧಾಭಿನ್ನಾ ಏಕಶತಮಧ್ವರ್ಯುಶಾಖಾಃ, ಸಹಸ್ರ ವರ್ತ್ಮಾ ಸಾಮವೇದಃ, ಏಕವಿಂಶತಿಧಾ**

ಬಾಹ್ವೃಚ್ಯಾಮ್, ನವಧಾ ಅಥರ್ವಣವೇದಃ, ವಾಕೋವಾಕ್ಯಮಿತಿಹಾಸಃ ಪುರಾಣಮ್, ವೈದ್ಯಕವಮ್'' ಹೀಗೆ ಅನೇಕ ರೀತಿಯಲ್ಲಿ ಶಬ್ದಗಳ ಪ್ರಯೋಗವಿದೆ. ಕಲ್ಪಸೂತ್ರಗಳು ಧನುರ್ವೇದ, ಗಾಂಧರ್ವವೇದ, ಕಾವ್ಯನಾಟಕಾದಿಗಳು ಅನೇಕ ಇವೆ. ಇವೆಲ್ಲವನ್ನು ವಿವರಿಸುವುದು ಸಾಹಸದ ಕೆಲಸವೇ ಸರಿ. ಕೇವಲ ದಿಕ್ಸೂಚಿಯಂತೆ ಕೆಲವು ಉದಾಹರಣೆಗಳನ್ನು ಹೇಳಿದ್ದೇವೆ.

'ತ್ರಯೋ ಲೋಕಾಃ' ಎಂಬ ಸಂಸ್ಕೃತ ನುಡಿಯೇ ಇರುವುದರಿಂದ ಸಂಸ್ಕೃತವು ದೇವವಾಣಿಯೆನ್ನುವ ಅಭಿಪ್ರಾಯವು ಭಾಷ್ಯಕಾರರಿಗೂ ಇತ್ತೆಂಬುದು ಸ್ಪಷ್ಟ. ವಿಭಿನ್ನವಾದ ಜನತೆಯ ಬಾಯಲ್ಲಿ ಬಂದ ನುಡಿಗಳು ಅನೇಕ ರೀತಿಯಲ್ಲಿ ಬದಲಾವಣೆಯನ್ನು ಪಡೆದುಕೊಂಡಿರುವುದು ಸತ್ಯ. ಉಚ್ಚಾರಣೆಯು ಬದಲಾದಂತೆ ಕೆಲವು ಶಬ್ದಗಳ ಅರ್ಥಗಳಲ್ಲಿಯೂ ವ್ಯತ್ಯಾಸವು ಕಂಡು ಬರುತ್ತದೆ. ಈ ರೀತಿಯ ಮಹತ್ತಾದ ಶಬ್ದ ಪ್ರಯೋಗಗಳು ಕೆಲವು ಸ್ಥಳಗಳಲ್ಲಿ ಕೆಲವು ಅರ್ಥಗಳಲ್ಲಿ ಹೆಚ್ಚಾಗಿ ಬಳಕೆಯಿರುವುದು ಕಂಡು ಬಂದಿದೆ. ಉದಾಹರಣೆಗೆ ಇದನ್ನು ಬಾಷ್ಯಕಾರರು ಹೇಳಿದ್ದು - ಕಂಭೋಜ ದೇಶದ ಜನರು ಶವತಿ ಎಂಬ ಶಬ್ದವನ್ನು ಗಚ್ಛತಿ ಎಂಬ ಅರ್ಥದಲ್ಲಿ ಉಪಯೋಗ ಮಾಡುತ್ತಾರೆ. ಇವರು ಗಚ್ಛತಿ ಎಂಬುದಕ್ಕೆ ಗಮ್ ಧಾತುವನ್ನೇ ಹೇಳುತ್ತಾರೆ. ಸುರಾಷ್ಟ್ರ ದೇಶದವರು ಹಮ್ಮತಿ ಎಂದು ಹೇಳಿದರೆ ಅದೇ ಪದವನ್ನು ಮಧ್ಯ ಪ್ರಾಚ್ಯ ದೇಶದವರು ರಂಹತಿ ಎಂದು ಹೇಳುತ್ತಾರೆ. ಹೇಗೆ ಅರ್ಥವ್ಯತ್ಯಾಸಗಳು ಬಂದವೋ ಹಾಗೆಯೇ ಶಬ್ದಸ್ವರೂಪಗಳಲ್ಲಿ ವ್ಯತ್ಯಾಸಗಳು ಕಂಡು ಬಂದು ಅಪಭ್ರಂಶಪ್ರಯೋಗಗಳಿಗೆ ಕಾರಣವಾಯಿತು. ಒಂದೊಂದು ಪದವೂ ಅನೇಕ ರೀತಿಯಲ್ಲಿ ಅಪಭ್ರಂಶರೂಪವನ್ನು ಪಡೆದಿದೆ. ಗೋಶಬ್ದವು, ಗಾವೀ, ಗೋಣೀ, ಗೋತಾ, ಗೋಪೋತಿಲಕಾ ಹೀಗೆ ಅನೇಕರೂಪಗಳಿವೆ ಎಂದು ಮಹಾಭಾಷ್ಯದಲ್ಲಿ ಹೇಳಿದೆ. ಇದೇ ರೀತಿ ಸಂಸ್ಕೃತ ಶಬ್ದಗಳು ಅನೇಕ ರೂಪಗಳನ್ನು ತಳೆದು ಅನೇಕ ಭಾಷೆಗಳ ಹುಟ್ಟುವಿಕೆಗೆ ಕಾರಣವಾಗಿದೆ. ಪೂರ್ವ ಪಶ್ಚಿಮ ದೇಶಗಳ ಭಾಷಾ ಪ್ರಯೋಗವನ್ನು ಸೂಕ್ಷ್ಮವಾಗಿ ಗಮನಿಸಿದರೆ ಎಲ್ಲಾ ಭಾಷೆಗಳ ಮೂಲವೂ ಸಂಸ್ಕೃತವೇ ಎನ್ನುವುದು ಗೋಚರವಾಗುತ್ತದೆ. ಕೇವಲ ಶಬ್ದಸ್ವರೂಪ ಮಾತ್ರವಲ್ಲದೆ, ಶಬ್ದಗಳ ವ್ಯುತ್ಪತ್ತಿ, ಧ್ವನಿ ಅವುಗಳ ಪೂರ್ವಚರಿತ್ರೆ ಆರೀತಿ ಶಬ್ದಗಳು ಹರಡಿರುವ ಸಮೀಪಸ್ಥ ದೇಶಗಳು ಇವುಗಳನ್ನು ಗಮನಿಸಿ ಭಾಷಾಶಾಸ್ತ್ರದಲ್ಲಿ ಭಾಷೆಗಳ ವರ್ಗೀಕರಣವನ್ನು ಮಾಡಿದ್ದಾರೆ. ಇಂತಹ ವಿಚಾರ ಸರಣಿಯು ಶಾಸ್ತ್ರಕ್ಕೆ ಅಲಂಕಾರ ಪ್ರಾಯವಾಗಿದೆ ನಮಗಿಲ್ಲಿ ವಿವಾದವಲ್ಲ.

ವೈದಿಕಭಾಷೆಗೆ ಮತ್ತೊಂದು ಮೂಲಭೂತವಾದ ಭಾಷೆಯೊಂದಿದೆ ಎಂದು ವಾದ ಮಾಡುವ ವಿದ್ವಾಂಸರಿಗೆ ಕೆಲವು ಪ್ರಶ್ನೆಗಳನ್ನು ಕೇಳಬಹುದು. ಬಹಳ ವಿಚಾರಗಳನ್ನು ತಿಳಿದವರಾಗಿ, ಅನೇಕ ಶಾಸ್ತ್ರಗಳನ್ನು ಅಧ್ಯಯನ ಮಾಡಿ, ಇತಿಹಾಸಗಳನ್ನು ಅಭ್ಯಸಿಸಿ, ಊಹಾಪೋಹಗಳಲ್ಲಿ ನಿಪುಣರಾಗಿರುವ ಚತುರ ಮತಿಯಾದವರನ್ನು ಈ ಕೆಳಕಂಡಂತೆ ಪ್ರಶ್ನೆ ಮಾಡಬಹುದು.

1. ವೇದಗಳಲ್ಲಿ ಅನೇಕಾರ್ಥಗಳನ್ನು ಕೊಡುವ ಒಂದೇ ರೀತಿಯ ಶಬ್ದಗಳೂ, ಒಂದು ಅರ್ಥಕೊಡುವ ಅನೇಕ ಪರ್ಯಾಯ ಪದಗಳು ಇವೆಯೆಂದು

ತಿಳಿದಿದ್ದಾಯಿತು. ಎಲ್ಲಕ್ಕೂ ಮೂಲಭಾಷೆಯೆಂದು ಕಲ್ಪಿಸಿಕೊಂಡಿರುವ ನೀವು ಹೇಳುತ್ತಿರುವ ಭಾಷೆಯಲ್ಲಿ ಈ ಶಬ್ದಗಳು ಇದ್ದವೇ ? ಅಥವಾ ಇಲ್ಲವೇ ? ಒಂದು ವೇಳೆ ಇದ್ದವು ಎಂದಾದರೆ ಆ ಭಾಷೆಯು ಸಾಹಿತ್ಯ, ವೈದ್ಯ, ಜ್ಯೋತಿಷ್ಯ ಮುಂತಾದ ಶಾಸ್ತ್ರಗಳಲ್ಲಿ ಉಪಯೋಗವಾಗಿ ಅತ್ಯಂತ ಪ್ರಾಚೀನವೂ ಪ್ರಶಸ್ತವೂ ಆಗಬೇಕಿತ್ತು. ಅಂತಹ ಒಂದು ಭಾಷೆಯು ಸಂಪೂರ್ಣವಾಗಿ ನಾಶ ಹೊಂದಿದ್ದು ಹೇಗೆ ? ಒಂದು ಭಾಷೆಯು ಹೀಗೆ ಸರ್ವನಾಶವಾದದ್ದು ಎಲ್ಲಿಯೂ ಕಂಡು ಬಂದಿಲ್ಲ.

2. ಆ ಮೂಲ ಭಾಷೆಯಲ್ಲಿ ಉದಾತ್ತ ಅನುದಾತ್ತಾದಿ ಸ್ವರಗಳ ಪ್ರಯೋಗವು ಬಳಕೆಗೆ ಬಂದಿತ್ತೇ ? ಈ ರೀತಿಯಲ್ಲಿ ಸ್ವರ ವಿಧಾನಗಳನ್ನು ಅನುಸರಿಸುವುದು ಸಾಮಾನ್ಯ ಜನರಿಗೆ ಹೇಗೆ ಸಾಧ್ಯ ? ಒಂದು ವೇಳೆ ಸ್ವರ ವಿಧಾನವು ಆ ಮೂಲ ಭಾಷೆಯಲ್ಲಿ ಇರಲಿಲ್ಲವೆಂದಾದರೆ ವೇದಗಳಲ್ಲಿ ಹೊಸದಾಗಿ ಈ ಕಠಿಣ ಕ್ರಮವನ್ನು ಏಕೆ ಅನುಸರಿಸಿದರು.
3. ಕೆಲವು ಶಬ್ದಗಳನ್ನು ಮಾತ್ರ ಮಾನವನು ತನ್ನ ವ್ಯವಹಾರಕ್ಕಾಗಿ ಕಲ್ಪಿಸಿಕೊಂಡನು. ಅದೇ ಆ ಮೂಲಭಾಷೆ ಎಂದು ಅಭಿಪ್ರಾಯವಿದ್ದರೆ ಕೆಲವು ಶಬ್ದಗಳಿದ್ದ ಮೂಲ ಭಾಷೆಯಿಂದ ಅನಂತವಾದ ಶಬ್ದಗಳ ಬಳಕೆಯಿರುವ ಈ ಸಂಸ್ಕೃತ ಭಾಷೆಯು ಹುಟ್ಟಿಕೊಂಡಿದ್ದು ಹೇಗೆ ? ಕೇವಲ ವ್ಯವಹಾರಕ್ಕಾಗಿ ಅಲ್ಪ ಶಬ್ದಗಳಿದ್ದ ಭಾಷೆಯು ಸಂಪೂರ್ಣ ಭರತಖಂಡದಲ್ಲಿ ಪಾರಸಿಕದೇಶದಲ್ಲಿ ಗ್ರೀಸ್ ಮುಂತಾದ ಐರೋಪ್ಯ ದೇಶಗಳಲ್ಲಿ ಹರಡಿದ್ದು ಹೇಗೆ ? ಸ್ವಲ್ಪ ಶಬ್ದಗಳಿರುವ ಭಾಷೆಯು ಪ್ರಪಂಚದ ಅನೇಕ ಕಡೆ ಹರಡಲು ಸಾಧ್ಯವಿಲ್ಲ. ಕಾಗೆ ಕುಡಿಯಲು ಸಾಕಾಗುವಷ್ಟು ನೀರಿರುವ ಕಾಲುವೆಯು ಎಷ್ಟು ದೂರ ಹರಿಯಲು ಸಾಧ್ಯ ?
4. ನಮ್ಮ ಮಹರ್ಷಿಗಳು ವೇದಗಳನ್ನು ಮಹತ್ತಾದವುಗಳು, ಶ್ರೇಷ್ಠವಾದವುಗಳು, ಪವಿತ್ರವಾದವುಗಳು, ಪೂಜ್ಯವಾದವುಗಳು ಎಂದು ಅಂಗೀಕರಿಸಿದ್ದಾರೆ. ಇವುಗಳಿಗೂ ಮೂಲವಾದ ಭಾಷೆಯು ಇನ್ನೊಂದಿದ್ದರೆ ಅದಕ್ಕೆ ಹೆಚ್ಚು ಪ್ರಾಶಸ್ತ್ಯವಿರಬೇಕಾಗಿತ್ತು. ಈ ವೇದಗಳನ್ನು ರಕ್ಷಿಸಲು ಒಂದೊಂದು ವರ್ಣಗಳಿಗೂ ಸ್ವರಗಳಿಗೂ ಕೂಡ ಬಹಳ ಪ್ರಯತ್ನದಿಂದ, ಪದಪಾಠ, ಘನಪಾಠ, ಜಟಾಪಾಠ ಮುಂತಾದುವುಗಳನ್ನು ರಚಿಸಿ, ವೇದಗಳ ಹಿರಿಮೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಅದಲ್ಲದೆ ವೇದಾಂಗಗಳನ್ನೂ ಪ್ರಾತಿಶಾಖೆಗಳನ್ನೂ ರಚಿಸಿದ್ದಾರೆ. ವೇದಗಳು ಎಲ್ಲ ಧರ್ಮಗಳಿಗೂ ಮೂಲ' ಎಂದು ಸಾರಿದ್ದಾರೆ.
5. ಮತ್ತೊಂದು ಭಾಷೆಯಿಂದ ಹುಟ್ಟಿ ಬಂದ ಭಾಷೆಗೆ ಶಬ್ದಬ್ರಹ್ಮ ಎಂದು ಹೇಳಲು ಹೇಗೆ ಸಾಧ್ಯ ? ಶಬ್ದ ಬ್ರಹ್ಮದಲ್ಲಿ ನಿಪುಣನಾದವನು ಪರಬ್ರಹ್ಮತ್ವವನ್ನು ಪಡೆಯುತ್ತಾನೆ ಎಂದು ವೇದಗಳನ್ನು ಕುರಿತು ವಿದ್ವಾಂಸರ ನುಡಿಯಿದೆ.
ಅನಾದಿನಿಧನಂ ಬ್ರಹ್ಮ ಶಬ್ದ ತತ್ತ್ವಮ್ ಯದಕ್ಷರಮ್ ।
ವಿವರ್ತತೇರ್ಥಭಾವೇನ ಪ್ರಕ್ರಿಯಾ ಜಗತೋ ಯತಃ ॥ ಎಂದು ವಾಕ್ಯ ಪದೀಯ

ಗ್ರಂಥದ ಕರ್ತೃವಾದ ಭರ್ತೃಹರಿಯು ಹೇಳಿದ್ದಾನೆ.

6. ಭಾರತೀಯರು ಒಪ್ಪಿಕೊಂಡಿರುವ ಪ್ರಣವಸ್ವರೂಪ ಓಂಕಾರ, ಗಾಯತ್ರೀ ಮಂತ್ರ ಇವುಗಳ ಉಪಾಸನೆಯಿಂದ ಉಂಟಾಗುವ ಫಲಗಳು ಮನುಷ್ಯ ಕಲ್ಪಿತವಲ್ಲ. **'ಓಮಿತ್ಯೈಕಾಕ್ಷರಂ ಬ್ರಹ್ಮ, ಓಮಿತಿ ಸಾಮಾನಿ ಗಾಯಂತಿ'** ಮುಂತಾದ ವೇದ ವಾಕ್ಯಗಳನ್ನು ಭ್ರಾಂತಿಯಿಂದ ಹೇಳಿದುವೆಂದು ತಿಳಿಯಲು ಸಾಧ್ಯವಿಲ್ಲ.

7. ವೇದಗಳು ಮನುಷ್ಯ ನಿರ್ಮಿತವಾಗಿದ್ದರೆ ಅವುಳಿಗೆ ಪ್ರಾಮಾಣ್ಯತೆ ಇರುತ್ತಿರಲಿಲ್ಲ. ಆದರೆ ವೇದಗಳ ಪ್ರಮಾಣವನ್ನಿಟ್ಟುಕೊಂಡು ಮುಂದೆ ಅನೇಕ ಶಾಸ್ತ್ರಗ್ರಂಥಗಳು ರಚನೆಯಾಗಿವೆ.
ಜೈಮಿನಿಮಹರ್ಷಿಗಳ ಪೂರ್ವಮೀಮಾಂಸಾಸೂತ್ರಗಳೂ ವ್ಯಾಸ ಮಹರ್ಷಿಗಳ ಶಾರೀರಿಕಸೂತ್ರಗಳೂ ವೇದ ಪ್ರಮಾಣಗಳಿಂದಲೇ ರಚಿತವಾಗಿದೆ. ಶಾರೀರಿಕ ಸೂತ್ರಗಳು ಇಂದಿಗೂ ಅತಿಮಹತ್ವವಾದವುಗಳಾಗಿವೆ.

8. **ಚತ್ವಾರಿ ಶೃಂಗಾಃ ತ್ರಯೋ ಅಸ್ಯ ಪಾದಾಃ**
ದ್ವೇ ಶೀರ್ಷೇ ಸಪ್ತ ಹಸ್ತಾಸೋ ಅಸ್ಯ ।
ತ್ರಿಧಾ ಬದ್ಧೋ ವೃಷಭೋ ರೋರವೀತಿ
ಮಹೋ ದೇವೋ ಮರ್ತ್ಯಾನ್ ಆವಿವೇಶ ॥

ಎಂಬ ಋಗ್ವೇದದ ಒಂದು ಮಂತ್ರವನ್ನು ಮಹಾಭಾಷ್ಯಕಾರರಾದ ಪತಂಜಲಿಗಳು ಹೀಗೆ ವ್ಯಾಖ್ಯಾನ ಮಾಡಿದ್ದಾರೆ.

ನಾಮಪದ, ಆಖ್ಯಾತ ಪ್ರತ್ಯಯಗಳು, ಉಪಸರ್ಗಗಳು ಮತ್ತು ನಿಪಾತಗಳೆಂಬ ನಾಲ್ಕು ಶೃಂಗಗಳು, ಭೂತ, ಭವಿಷ್ಯತ್ ವರ್ತಮಾನ ಎಂಬ ಮೂರು ಕಾಲಗಳು, ನಿತ್ಯರೂಪ ಮತ್ತು ಕಾರ್ಯರೂಪ ಎಂದು ಶಬ್ದಾತ್ಮದ ಎರಡು ರೂಪಗಳು. ಏಳು ವಿಭಕ್ತಿಗಳು, ವಕ್ಷಸ್ಥಳ, ಕಂಠ ಮತ್ತು ಶಿರಸ್ಸುಗಳಲ್ಲಿ ಬದ್ಧನಾಗಿರುವ ಮಹಾದೇವನಾದ ಶಬ್ದಬ್ರಹ್ಮವು ಜೀವ ರೂಪದಿಂದ ಮಾನವನ ಶರೀರವನ್ನು ಪ್ರವೇಶಿಸಿದೆ. ಈ ರೀತಿಯಾಗಿ ವ್ಯಾಕರಣ ಶಾಸ್ತ್ರಕ್ಕೆ ಗೋಚರವಾಗಿರುವ ಅರ್ಥದಂತೆ ಆ ಕಾಲ್ಪನಿಕ ಮೂಲ ಭಾಷೆಯನ್ನು ಯಾರು ಪರಾಮರ್ಶೆ ಮಾಡಿದ್ದಾರೆ. ಭಾಷ್ಯಕಾರರು ಆ ಕಾಲ್ಪನಿಕ ಮೂಲ ಭಾಷೆಯನ್ನು ಚೆನ್ನಾಗಿ ತಿಳಿದಿದ್ದರು ಎಂದು ನೀವು ಹೇಳಬೇಕಾಗುತ್ತದೆ. ಏಕೆಂದರೆ ಆ ನಿಮ್ಮ ಭಾಷೆಯಿಂದಲೇ ಶ್ರುತಿಯ ಅರ್ಥವೂ ತಿಳಿದಿರಬೇಕಾಗಿತ್ತು. ಹೀಗೆಲ್ಲಾ ಊಹಿಸಲೂ ಸಾಧ್ಯವಿಲ್ಲ. ಮತ್ತೊಂದು ಶ್ರುತಿವಾಕ್ಯ ಹೀಗೆದೆ. 'ಅನೇನ ಜೀವೇನ ಆತ್ಮನಾ ಅನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ'. ಈ ವಾಕ್ಯವು ಯಾವ ಮೂಲ ಭಾಷೆಯಲ್ಲಿಯೂ ರೂಢಿಯಲ್ಲಿಲ್ಲ. ಜೀವನಿಗೂ ಆತ್ಮನಿಗೂ ಸಾಮ್ಯವನ್ನು ಆರೋಪಿಸಿದವರು ಯಾರು ? ಮುಂತಾದ ಪ್ರಶ್ನೆಗಳೇ ಮನಸ್ಸಿನಲ್ಲಿ ಮೂಡಿ ಬರುತ್ತವೆ.

ಭರತ ಖಂಡದ ಉತ್ತರ ಭಾಗದಲ್ಲಿ ವ್ಯವಹಾರದಲ್ಲಿರುವ ಹಿಂದೀ, ಗುಜರಾತೀ, ಪಂಜಾಬೀ, ಕಾಶ್ಮೀರೀ, ಬಂಗಾಲೀ ಮುಂತಾದ ಭಾಷೆಗಳು ಸಂಸ್ಕೃತದಿಂದಲೇ ಹುಟ್ಟಿ ಬಂದಿವೆಯೆಂದು ಭಾಷಾ ಶಾಸ್ತ್ರಜ್ಞರು ತಿಳಿಸಿಕೊಡುತ್ತಾರೆ (ಅಥವಾ ಭಾಷಾಶಾಸ್ತ್ರಜ್ಞರ

ಅಭಿಪ್ರಾಯ) ಕನ್ನಡ ಮುಂತಾದ ಭಾಷೆಗಳಿಗೆ ಮೂಲವು ಬೇರೆ ಭಾಷೆಯು ಆಗಿರಬಹುದು ಅವು ಸಂಸ್ಕೃತ ಮೂಲವಲ್ಲ ಎಂಬುದು ಭಾಷಾ ಶಾಸ್ತ್ರಜ್ಞರ ಅಭಿಪ್ರಾಯ. ಆದರೆ ದ್ರಾವಿಡ ಭಾಷೆಗಳೂ ಸಂಸ್ಕೃತ ಮೂಲದಿಂದ ಬಂದವೇ ಆಗಿವೆಯೆಂದು ತೋರಿಸಿಕೊಡಲು ಸಾಧ್ಯ. ಕೇವಲ ಬೆರಳೆಣಿಕೆಯಷ್ಟು ವನ್ಯ ಜನರ ಭಾಷೆಯನ್ನು ಮಾತ್ರ ಅವರೇ ಉತ್ಪಾದಿಸಿಕೊಂಡ ಭಾಷೆಯೆಂದು ಹೇಳಬಹುದು. ಪ್ರಪಂಚವಲ್ಲಿ ತಾವೇ ಉತ್ಪಾದಿಸಿಕೊಂಡ ಭಾಷೆಯು ಅಲ್ಪ ಪ್ರಮಾಣದಲ್ಲಿ ಎಲ್ಲ ದೇಶಗಳಲ್ಲಿಯೂ ಇರುತ್ತದೆ. ಹಾಗೆಂದ ಮಾತ್ರಕ್ಕೆ ಒಂದು ಭಾಷೆಯನ್ನು ನಿರ್ಮಾಣ ಮಾಡಬಹುದು ಎನ್ನುವುದು ಅಸಾಧ್ಯ ಎಂದು ಹಿಂದೆಯೇ ಹೇಳಿದೆ. ದೈನಂದಿನ ವ್ಯವಹಾರದಲ್ಲಿ ಸಂಸ್ಕೃತದ ಬಳಕೆಯು ಕಡಿಮೆಯಾಗುತ್ತಾ ಹೋದಂತೆ ನಟರಂತೆ ಪ್ರಾಕೃತ, ದ್ರಾವಿಡ ಮುಂತಾದ ಭಾಷೆಗಳಲ್ಲಿ ಕಾಣಿಸಿಕೊಂಡವು. ಶುದ್ಧ ಕನ್ನಡವೆಂದು ಎಣಿಸಿರುವ ಕನ್ನಡ ಭಾಷೆಯಲ್ಲಿರುವ ಸಂಸ್ಕೃತ ಮೂಲದ ಶಬ್ದಗಳನ್ನು ಇಲ್ಲಿ ಉದಾಹರಿಸಿದೆ.

ಪಾಣಿನೀಯ ಧಾತು ಪಾಠದಲ್ಲಿರುವಂತೆ	ಕನ್ನಡ ಬಾಷೆಯಲ್ಲಿ ಬಳಕೆಯಿರುವಂತೆ
೧. ಅಟ್ಟ – ಅತಿಕ್ರಮಣಹಿಂಸನಯೋಃ ಅಟ್ಟತೇ	ಅಟ್ಟು
೨. ಧಕ್ಕ – ನಾಶನೇ – ಧಕ್ಕಯತಿ	ಧಕ್ಕೆ ಮಾಡು
೩. ಕುಟ್ಟ – ಛೇದನಭರ್ತ್ಸನಯೋಃ ಕುಟ್ಟಯತಿ	ಕುಟ್ಟು
೪. ಹಿಷ್ಕ – ಹಿಂಸಾಯಾಮ್ – ಹಿಷ್ಕಯತಿ	ಹಿಸುಕು
೫. ವಡಿ – ವಿಭಜನೇ – ವಂಡಯತಿ	ವಡೆಯುತ್ತಾನೆ
೬. ತುಡಿ – ತೋಡನೇ – ತೋಡನಮ್ – ದಾರಣಮ್ ಹಿಂಸನಮ್ ಚ = ತೋಡಯತಿ	ತೋಡು
೭. ಚುಟ – ಛೇದನೇ – ಚೋಟಯತಿ	ಚೂಟು (ಚಿವುಟು)
೮. ಜುಡ – ಪ್ರೇರಣೇ – ಜೋಡಯತಿ	ಜೋಡಿಸು
೯. ರೌಡ – ಅನಾದರೇ – ರೌಡತಿ	ರೌಡಿ
೧೦. ಮುಷ – ಸ್ತೇಯೇ – ಮುಷ್ಣಾತಿ	ಮೋಸ

ಹೀಗೆಯೇ ಇನ್ನೂ ಅನೇಕ ಶಬ್ದಗಳು ಕನ್ನಡವೆಂದು ತಿಳಿಸಿದ್ದರೂ ಸಂಸ್ಕೃತ ಮೂಲದಿಂದ ಬಂದವೇ ಆಗಿವೆ. ಕೆಲವನ್ನು ಮಾತ್ರ ಸೂಚಿಸಿದೆ.

೧. ದೂಢ್ಯಃ – ದುಃಖೇನ ದಮ್ಯತೆ ಉದ್ಧತಃ	ಧಡಿಯ
೨. ಮೂಢಃ, ಮೂರಃ (ವೇದದಲ್ಲಿ)	ಮೂಳ

३. ಜಬಾರೂಃ – ವೇಗಶಾಲಿ ಜೋರು

४. ಜಲ್ಹುಃ – (ವೇದದಲ್ಲಿ) ನಿಃಸಾರಃ ಜಳ್ಳು

५. ರಂಭಃ – ದಂಡ ಇತಿ ಯಾಸ್ಕಃ ರೆಂಬೆ

ಅರಣ್ಯವೆಂದು ಅರ್ಥಕೊಡುವ ಕಾಟ್ ಎಂಬ ಶಬ್ದವು ಕನ್ನಡದಲ್ಲಿ ಕಾಡು ಎಂದು ಬಳಕೆಯಾಗುತ್ತಿದೆ. **'ನಮಃ ಕಾಟ್ಯಾಯ ಚ, ನೀಪ್ಯಾಯ ಚ'** ಎಂದು ರುದ್ರಾಧ್ಯಾಯದಲ್ಲಿ ಹೇಳಿದೆ. ಕಾಟ್ಯಾಯ ಎಂದರೆ ಅರಣ್ಯದಲ್ಲಿ ಹುಟ್ಟಿದವನು ಎಂದು ವೇದ ಭಾಷ್ಯದಲ್ಲಿದೆ. ಆಪ್ಟೆಯವರ ನಿಘಂಟಿನಲ್ಲಿಯೂ ಇದೇ ಅರ್ಥ. ಗಡಣ ಶಬ್ದಕ್ಕೆ ಕನ್ನಡದಲ್ಲಿ ಸಮೂಹ ಎಂಬ ಅರ್ಥದಲ್ಲಿ ಉಪಯೋಗವಿದೆ. **'ಹೇತುಮತಿ ಚ'** ಎಂಬ ವ್ಯಾಕರಣ ಸೂತ್ರಕ್ಕೆ **'ಯತ್ರಶಬ್ದಗ್ರಂಥಗಡಮಾತ್ರಂ ಲಕ್ಷ್ಯತೇ'** ಎಂದು ಭಾಷ್ಯವಿದೆ. ಉದ್ಯೋತದ ವ್ಯಾಖ್ಯಾನದಲ್ಲಿ **'ಗಡ'** ಎಂದರೆ ಮನುಷ್ಯರ ಗುಂಪು ಎಂದು ಹೇಳಿದೆ.

ಅಂಬಾಶಬ್ದವು ಕನ್ನಡ ಭಾಷೆಯಲ್ಲಿ ಅಮ್ಮ ಎಂಬ ರೂಪಾಂತರವನ್ನು ಹೊಂದಿದೆ. ಭರ್ತೃಹರಿಯು ವಾಕ್ಯಪದೀಯದಲ್ಲಿ ಮಾತು ಕಲಿಯುವ ಬಾಲಕನು 'ಅಮ್ಮ ಅಮ್ಮ ಎಂದು ಹೇಗೆ ಮಾತನ್ನು ಕಲಿಯುತ್ತಾನೆಯೋ' ಎಂದು ಹೇಳಿದ್ದಾನೆ.

ಇದೇ ಶಬ್ದದ ಇನ್ನೊಂದು ವಿಕೃತರೂಪವು ಅಬ್ಬಾ, ಅಬ್ಬೇ ಎಂದಾಗಿದೆ. ಪುಲ್ಲಿಂಗದಲ್ಲಿ ಈ ಶಬ್ದವು ಅಪ್ಪ ಎಂದಾಗಿದೆ. ಅಪ್ಪ ಎಂದರೆ ತಂದೆ ಎನ್ನುವ ಅರ್ಥದಲ್ಲಿ ಪ್ರಯೋಗವಿದೆ. 'ಅಪ್ಪ' ಎಂಬ ಶಬ್ದವು 'ಆರ್ಯ' ಶಬ್ದದ ಅಪಭ್ರಂಶವೂ ಇರಬಹುದು. ತಂದೆ ಎಂದು ಅರ್ಥಕೊಡುವ 'ತಾತ' ಎಂಬ ಸಂಸ್ಕೃತಪದವು ಪ್ರಾಕೃತದಲ್ಲಿ 'ತಾಯ' ಎಂದು ಬಳಕೆಯಲ್ಲಿದೆ ಜೈನಕವಿ ರಾಮಚಂದ್ರನು ಸತ್ಯಹರಿಶ್ಚಂದ್ರ ನಾಟಕದಲ್ಲಿ 'ತಾಯಿ'ಶಬ್ದವನ್ನು ಅನೇಕ ಬಾರಿ ಬಳಸಿದ್ದಾನೆ. ತಾಯಶಬ್ದವು ಸ್ತ್ರೀಲಿಂಗದಲ್ಲಿ ತಾಯಿ ಎಂದು ಪ್ರಯೋಗವಾಗಿದೆ. ಕನ್ನಡಭಾಷೆಯಲ್ಲಿ ತಾತ ಎಂದರೆ ತಂದೆಯ ತಂದೆ ಎಂಬ ಅರ್ಥವನ್ನು ಪ್ರಾಚೀನ ಕನ್ನಡದಲ್ಲಿ ಅಮ್ಮ ಎಂದರೆ ತಂದೆ ಎಂಬ ಅರ್ಥವೂ ಇದೆ. ಮಾತಾಶಬ್ದಕ್ಕೆ ಪರ್ಯಾಯವಾಗಿ ಅಕ್ಕ ಎಂಬ ಪದವು ಪಾಣಿನೀಯ ವ್ಯಾಕರಣ ಶಾಸ್ತ್ರದಲ್ಲಿ ಪ್ರಸಿದ್ಧ **'ಡಲಕವತೀನಾಂ ನ'** ಎಂಬ ವಾರ್ತಿಕದಲ್ಲಿ ಹೇ ಅಕ್ಕ ಎಂಬ ಪದದ ರೂಪಸಿದ್ಧಿಯನ್ನು ಪರಾಮರ್ಶಿಸಿದ್ದಾರೆ.

ಮೇಲೆ ಹೇಳಿದ ಎಲ್ಲಾ ಕಾರಣಗಳಿಂದ ಸಂಸ್ಕೃತಭಾಷೆಯು ನಿತ್ಯವಾದ ದೇವ ಭಾಷೆಯೆಂದು ಖಚಿತವಾಗಿ ಹೇಳಬಹುದು. ಬೇರೆ ಎಲ್ಲಾ ಪೂರ್ವಪಶ್ಚಿಮ ದೇಶಗಳ ಭಾಷೆಗಳೂ ಸಂಸ್ಕೃತಮೂಲದಿಂದ ಬಂದವೇ ಆಗಿರುತ್ತವೆ. ತಿಳಿಯಪಡಿಸಬೇಕಾದ ವಿಷಯಗಳು ಇನ್ನೂ ಬಹಳಷ್ಟಿದ್ದರೂ ಲೇಖನವು ಅತಿವಿಸ್ತಾರವಾಗುವುದೆಂಬ ಕಾರಣದಿಂದ ಇಲ್ಲಿಗೆ ನಿಲ್ಲಿಸಿದೆ.

ಕೆಲವು ಶ್ಲೋಕಗಳನ್ನು ಮಾತ್ರ ಇಲ್ಲಿ ಹೇಳಿದ್ದೇವೆ.

ಋಗಾದಿವೇದಾಃ ಸರ್ವೇ ಅಪಿ ಧ್ರುವಮೀಶ್ವರನಿಃಸೃತಾಃ ।
ಶಬ್ದಾರ್ಥಯೋರಪೂರ್ವತ್ವಾತ್ ಅಜ್ಞೇಯತ್ವಾತ್ ಅಸಂಭವಾತ್ ॥

ಶಬ್ದಾರ್ಥಗಳು ಅಪೂರ್ವವಾದವುಗಳು. ಇವುಗಳ ಮೂಲವನ್ನು ತಿಳಿಯುವುದು

ಕಠಿನ ಮತ್ತು ಅಸಂಭವ. ನಿಶ್ಚಯವಾಗಿಯೂ ಋಗ್ವೇದ ಮೊದಲಾದವುಗಳು ಈಶ್ವರನ ಬಾಯಿಂದ ಬಂದವುಗಳೇ.

ಅಶಕ್ಯತ್ವಾತ್ ಮನುಷ್ಯಾಣಾಂ ಪ್ರವೃತ್ತೇರ್ಲಾಘವಾದರಾತ್ ।
ಅಪೌರುಷೇಯತಾ ತೇಷಾಂ ವೇದಾನಾಂ ಸುವ್ಯವಸ್ಥಿತಾ ॥

ಮನುಷ್ಯನು ತನ್ನ ಕೆಲಸವನ್ನು ಹಗುರವಾಗಿಸಿಕೊಳ್ಳಲು ಇಷ್ಟಪಡುತ್ತಾನೆ. ವೇದಗಳ ಈ ರೀತಿಯ ಒಳ್ಳೆಯ ವ್ಯವಸ್ಥೆಯನ್ನು ನೋಡಿದರೆ ಇದು ಮನುಷ್ಯರಿಗೆ ಅಸಾಧ್ಯವೆಂದೂ, ಈ ವೇದಗಳು ಪುರುಷನಿಂದ ಉತ್ಪತ್ತಿಯಾದವುಗಳಲ್ಲ ಎಂದು ತಿಳಿಯಬಹುದು.

ತದುದ್ಭವಾ ಸಂಸ್ಕೃತೇಯಂ ನಿತ್ಯಾಗೀರ್ವಾಣಭಾಷಿತಾ ।
ತದ್ಯೋನಯಃ ಪ್ರಾಕೃತಾದ್ಯಾಃ ವಿಶ್ವಂ ವ್ಯಾಪ್ಯ ಅವತಸ್ಥಿರೇ ॥

ಈ ವೇದಗಳಿಂದ ಬಂದ ಸಂಸ್ಕೃತ ಭಾಷೆಯು ನಿತ್ಯವಾದದ್ದೂ ದೇವವಾಣಿಯೂ ಆಗಿದೆ. ಈ ಸಂಸ್ಕೃತ ಮೂಲದಿಂದ ಬಂದ ಪ್ರಾಕೃತ ಮೊದಲಾದ ಭಾಷೆಗಳು ಪ್ರಪಂಚದ ತುಂಬ ತುಂಬಿಕೊಂಡಿವೆ.

ವರ್ಣಾಕೃತಿವಿಭೇದೋಽತ್ರ ಸಹಜಃ ಪ್ರಾಕೃತೈಃ ಗುಣೈಃ ।
ಏಕಗೋತ್ರಾ ಯಥಾ ಲೋಕೇ ಮನುಜಾಃ ಭಿನ್ನಮೂರ್ತಯಃ ॥

ಒಂದೇ ಗೋತ್ರದಲ್ಲಿ ಹುಟ್ಟಿದ್ದರೂ ಆಗೋತ್ರದ ಎಲ್ಲ ಮನುಷ್ಯರು ಬೇರೆ ಬೇರೆ ರೀತಿಯಲ್ಲಿಯೇ ಇರುತ್ತಾರೆ. ಅಂತೆಯೇ ದೇಶ ಕಾಲ ಪರಿಸ್ಥಿತಿಗಳಿಗೆ ತಕ್ಕಂತೆ ವರ್ಣಗಳ ರೂಪ ಮತ್ತು ಉಚ್ಚಾರಗಳ ಭೇದವು ಕಂಡು ಬರುತ್ತದೆ.

ವಿಚಾರಬೀಜಂ ನಿಕ್ಷಿಪ್ತಂ ದೇವವಾಣ್ಯಾ ಅನಾದಿತಾಮ್ ।
ಸಂರಕ್ಷಿತುಂ ವರ್ಧಯಂತು ಪ್ರಜ್ಞಾಸೇಕೇನ ಕೋವಿದಾಃ ॥

ಈ ದೇವವಾಣಿಯು ಅನಾದಿಯಾದುದೆಂಬ ವಿಚಾರವನ್ನು ನಿಮ್ಮ ಮುಂದೆ ಇಟ್ಟಿದ್ದೇವೆ. ಪಂಡಿತರು ತಮ್ಮ ಬುದ್ಧಿಮತ್ತೆಯಿಂದ ಈ ಭಾಷೆಯನ್ನು ಉಳಿಸಿ ಬೆಳೆಸಲಿ.

ಸಂಸ್ಕೃತದಲ್ಲಿ ನುಡಿಗಟ್ಟುಗಳು

ಮಾನವನು ಸಂಘಜೀವಿ. ಸಂಘಜೀವಿಯಾದ ಮನುಷ್ಯನು ತನ್ನ ಭಾವನೆಗಳನ್ನು ಮತ್ತೊಬ್ಬರೊಡನೆ ಹಂಚಿಕೊಳ್ಳಲು ಬಯಸುವುದು ಸಹಜ. ಅಲ್ಲದೆ ಒಬ್ಬರು ಮತ್ತೊಬ್ಬರೊಡನೆ ವ್ಯವಹಾರಗಳನ್ನು ನಡೆಸುವುದೂ ಸಾಧಾರಣ ವಿಷಯ. ಇದಕ್ಕಾಗಿ ಮಾನವನು ಆಶ್ರಯಿಸುವ ಉತ್ತಮವಾದ ಉಪಾಯವೆಂದರೆ ಭಾಷೆ. ವರ್ಣರೂಪವಾದ ಶಬ್ದಗಳ ಉಚ್ಚಾರಣೆಯು ಭಾಷೆಯಾಗುತ್ತದೆ. ಈ ರೀತಿಯ ಭಾಷೆಗಳು ಪ್ರಪಂಚದಲ್ಲಿ 5000ಕ್ಕೂ ಹೆಚ್ಚಾಗಿ ಕಂಡು ಬರುತ್ತವೆಯೆಂದು ಭಾಷಾಶಾಸ್ತ್ರಜ್ಞರ ಅಭಿಪ್ರಾಯ. ಇಂತಹ ಭಾಷೆಗಳಲ್ಲಿ ಅತ್ಯಂತ ಹಿರಿದಾದ ಸ್ಥಾನವು ಸಂಸ್ಕೃತ ಭಾಷೆಗೆ ಸಲ್ಲುತ್ತದೆ. ಇದು ಎಲ್ಲ ಭಾಷೆಗಳ ತಾಯಿಯಂತೆ ಇದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಲಕ್ಷಕ್ಕೂ ಹೆಚ್ಚು ವರ್ಷಗಳಿಂದಲೂ ಪ್ರಪಂಚದಲ್ಲಿ ಭಾಷೆಗಳಿವೆ. ಜನಗಳು ದೂರ ದೂರ ಪ್ರದೇಶಗಳಲ್ಲಿ ಹಂಚಿ ಹೋಗಿದ್ದಾರೆ. ಕೆಲವು ಸ್ಥಳಗಳಲ್ಲಿ ಅವಿದ್ಯಾವಂತರೂ, ಮೂಢರೂ ನೆಲೆಸಿದ್ದಾರೆ. ಮತ್ತೆ ಕೆಲವರು ಅಜ್ಞಾನಿಗಳು, ಕೆಲವರಿಗೆ ಶಬ್ದಗಳ ಉಚ್ಚಾರಣೆಯು ಕಷ್ಟ ಮತ್ತೆ

ಹಲವರು ಅನಾದರದಿಂದ ಶಬ್ದಗಳನ್ನು ಉಚ್ಚಾರ ಮಾಡುತ್ತಾರೆ. ಈ ಎಲ್ಲ ಕಾರಣಗಳಿಂದ ಭಾಷಾ ಶಬ್ದಗಳ ಬಳಕೆಯಲ್ಲಿ ಅನೇಕ ವಿಕಾರಗಳುಂಟಾಗಿವೆಯೆನ್ನುವುದುದರಲ್ಲಿ ಆಶ್ಚರ್ಯವೇನಿಲ್ಲ.

ಬೇಟೆಯಿಂದ ಜೀವನಸಾಗಿಸುವ ಕಾಡು ಜನರ ಗುಂಪುಗಳಲ್ಲಿ ತಮ್ಮ ತಮ್ಮ ಅನುಕೂಲಕ್ಕಾಗಿ ಉಚ್ಚರಿಸಿದ ಕೆಲವು ಶಬ್ದಗಳು ಸಂಸ್ಕೃತ ಭಾಷೆಯಲ್ಲಿಯೂ ಕಾಣಸಿಗುತ್ತವೆ ಎಂದು ಊಹಿಸಲು ಸಾಧ್ಯ. ಸಂಸ್ಕೃತ ಭಾಷೆಯಿಂದಲೇ ಹುಟ್ಟಿಕೊಂಡ ಕೆಲವು ವಿಕೃತ ಭಾಷೆಗಳು ಈ ವನಜೀವಿ ಮಾನವನನ್ನೂ ಮುಟ್ಟಿವೆ. ಅಲ್ಲಿಯವರೆಗೆ ಅವರಲ್ಲಿ ಆಕಸ್ಮಿಕವಾಗಿ ಉಚ್ಚಾರಮಾಡಿಕೊಂಡ ಪದಗಳು ಹಾಗೆಯೇ ಉಳಿದುಕೊಂಡಿವೆ ಎಂದು ಹೇಳಬಹುದು.

ಮನುಷ್ಯನ ಮೇಧಾಶಕ್ತಿಯು ಹೆಚ್ಚಿದಂತೆ ಆತನ ಚಿಂತನ ಪ್ರಕಾರವೂ ಹೆಚ್ಚುತ್ತದೆ. ಅದೇ ರೀತಿಯಲ್ಲಿ ಶಬ್ದಗಳ ಉಚ್ಚಾರಣಾ ಶೈಲಿಯೂ ವಿಲಕ್ಷಣ ರೀತಿಯಲ್ಲಿ ಬೇರೆಯಾಗುತ್ತದೆ. ಇದನ್ನೇ ಅನುಸರಿಸಿ ಅರ್ಥಬೋಧೆಯುಂಟಾಗುತ್ತದೆ. ತಾನು ತಿಳಿಸಿಕೊಡಬೇಕೆಂದಿರುವ ವಿಷಯವನ್ನು ಬೇರೆಯವರಿಗೆ ತಿಳಿಸಿಕೊಡಲು ಮನುಷ್ಯನಿಗೆ ಭಾಷೆಗಿಂತಲೂ ಬೇರೆಯಾದ ಸಾಧನವಿಲ್ಲ. ಆದ್ದರಿಂದ ಮಾನವನು ತನಗೆ ತಿಳಿದಿರುವ ಶಬ್ದಗಳಿಂದಲೇ ಅರ್ಥಬೋಧೆಯನ್ನು ಮಾಡಿಸಲು ಪ್ರಯತ್ನಿಸುತ್ತಾನೆ. 'ಸರ್ವಸಾಧಾರಣವಾದ ಬಾಣವೂ ದಕ್ಷನಾದ ವೀರ ಯೋಧನು ಪ್ರಯೋಗಿಸಿದಾಗ ಅತಿಶಯವಾದ ಸಾಮರ್ಥ್ಯವುಳ್ಳದ್ದಾಗುತ್ತದೆ.' ಅಂತೆಯೇ ಶಬ್ದ ಪ್ರಯೋಗದ ಗುಟ್ಟನ್ನು ತಿಳಿದಿರುವ ಬುದ್ಧಿವಂತನು ಆಡುವ ಮಾತುಗಳು ವಿಶೇಷವಾದ ರೀತಿಯಲ್ಲಿ ಅರ್ಥಬೋಧೆಯನ್ನು ಉಂಟುಮಾಡುತ್ತವೆ. ಆ ಪದಗಳ ಆಂತರ್ಯದಿಂದ ತಿಳಿಯುವ ಲಕ್ಷಣಾರ್ಥವೂ ಅರಿವಿಗೆ ಬರುತ್ತದೆ. (ಈ ಭೀಮನು ಸಿಂಹದಂತೆ ಎಂದು ಹೇಳುವ ವಾಕ್ಯಕ್ಕಿಂತಲೂ ಈ ಭೀಮನು ಸಿಂಹವೇ ಎಂದು ಹೇಳುವುದರಲ್ಲಿ ಹೆಚ್ಚು ಸ್ವಾರಸ್ಯವಿದೆ. ಸಿಂಹದಂತೆ ಬಲಶಾಲಿ ಎನ್ನುವುದಕ್ಕೂ ಸಿಂಹದಷ್ಟೇ ಬಲಶಾಲಿ ಎನ್ನುವುದಕ್ಕೂ ಅರ್ಥ ಭೇದವಿದೆ.)

ಹೀಗೆ ವಿಶೇಷಾರ್ಥಗಳನ್ನು ತಿಳಿಸಿಕೊಡುವ ಪದಶಕ್ತಿಗಳು ಅಭಿದಾ, ಲಕ್ಷಣಾ ವ್ಯಂಜನಾ ಎಂದು ಮೂರು ವಿಧ ಎಂದು ಶಾಸ್ತ್ರಕಾರರ ಮತ. ಈ ವಿಷಯವು ಸದ್ಯದಲ್ಲಿ ಪ್ರಸಕ್ತವಲ್ಲ.

ಉಪಮಾ ಮುಂತಾದ ಅಲಂಕಾರಗಳೂ ಮಾಧುರ್ಯ ಮುಂತಾದ ಗುಣಗಳೂ ಕಾವ್ಯಗಳ ಶೋಭೆಯನ್ನು ಹೆಚ್ಚಿಸುತ್ತವೆ. ಅದೇ ರೀತಿ ಪ್ರಪಂಚದಲ್ಲಿರುವ ಎಲ್ಲ ಭಾಷೆಗಳಲ್ಲಿಯೂ ಕೆಲವು ವಿಶೇಷ ಶಬ್ದಗಳು ಸಹೃದಯರ ಹೃದಯದಲ್ಲಿ ಚಮತ್ಕಾರವನ್ನು ಮೂಡಿಸುವಂತೆ ಅರ್ಥಗಳಲ್ಲಿ ವೈಶಿಷ್ಟ್ಯವನ್ನು ತೋರಿಸಿಕೊಡುವಂತೆ ಇವೆಯೆಂದು ತಿಳಿದು ಬಂದಿದೆ. ಇಂತಹ ಪದವಿಶೇಷಗಳನ್ನು ಆಂಗ್ಲಭಾಷೆಯಲ್ಲಿ ಈಡಿಯಮ್ಸ್ ಎನ್ನುತ್ತಾರೆ. ಇದು ಪದಗಳ ಜೋಡಣೆಯ ಒಂದು ಶೈಲಿ. ಇವುಗಳಲ್ಲಿ ಕೆಲವು ಪದಗಳ ಒಂದು ಗುಂಪಿನಿಂದ ಒಂದು ವಿಶೇಷ ಅರ್ಥವು ಅರಿವಿಗೆ ಬರುತ್ತದೆ. (ಒಂದೇ ಪದದಲ್ಲಿ ಈ ಅರ್ಥ

ತೋರುವುದು.) ಈ ರೀತಿಯ ವಿಶೇಷ ಪದಸಮೂಹವೇ ಆಂಗ್ಲ ಭಾಷೆಯ ಈಡಿಯಮ್ಸ್.

ಸಂಸ್ಕೃತ ಭಾಷೆಯಲ್ಲಿ ಮತ್ತೊಂದು ವ್ಯವಸ್ಥೆಯಿದೆ. ಇಲ್ಲಿ ಅನೇಕ ಪದಗಳ ಗುಂಪು ಸಮಾಸ ಪದವೆನಿಸಿಕೊಳ್ಳುತ್ತದೆ. ಕೆಲವು ಉಪಸರ್ಗಗಳ ಜೋಡಣೆಯಿಂದ ವಿಭಿನ್ನಾರ್ಥಗಳು ಉಂಟಾಗುತ್ತವೆ. ಕೆಲವು ಆತ್ಮನೇಪದಪ್ರತ್ಯಯಗಳಿಂದಲೂ ತಿಳಿಸಿಕೊಡಬೇಕಾದ ಅರ್ಥವಿಶೇಷಗಳು ತಿಳಿಯುತ್ತವೆ. ಇವು ಒಂದೇ ಪದಗಳಾದರೂ ಇಂತಹ ಪದಗಳನ್ನೂ 'ಈಡಿಯಮ್ಸ್' ಎಂಬ ಗುಂಪಿಗೆ ಸೇರಿಸಬಹುದು. ಆಂಗ್ಲ ಭಾಷೆಯ ವ್ಯಾಕರಣದಲ್ಲಿ ಇಂತಹ 'ಈಡಿಯಮ್ಸ್'ಗಳನ್ನು ಬೇರೆ ಸಂಗ್ರಹ ಮಾಡಿಕೊಟ್ಟಿದ್ದಾರೆ. ಹಿಂದಿ ಭಾಷೆಯಲ್ಲಿ 'ಮುಹಾವರ್' ಎನ್ನುವುದು 'ಈಡಿಯಮ್ಸ್'ಗೆ ಸಮಾನವಾದ ಪದ. ಇಂತಹ 'ಮುಹಾವರ್'ಗಳಿಗೆ ಒಂದು ನಿಘಂಟು ಕೂಡ ಹಿಂದೀ ಭಾಷೆಯಲ್ಲಿದೆ. ಕನ್ನಡ ಭಾಷಾತಜ್ಞರು ಇವುಗಳನ್ನು 'ನುಡಿಗಟ್ಟುಗಳು' ಎಂದು ಹೆಸರಿಸಿದ್ದಾರೆ. ಇಂತಹ ನುಡಿಗಟ್ಟುಗಳು ಅಥವಾ idioms ಗಳು ಆಯಾ ಭಾಷೆಗಳಲ್ಲಿ ಕಾಲಕ್ರಮದಲ್ಲಿ ಬಳಕೆಯಾಗುತ್ತವೆ. ಪಂಡಿತರಾಗಲೀ ಅಪಂಡಿತರಾಗಲೀ ದಿನನಿತ್ಯದ ವ್ಯವಹಾರ ಭಾಷೆಯಲ್ಲಿ ಮಾತ್ರ ಇಂತಹ ನುಡಿಗಟ್ಟುಗಳನ್ನು ಬಳಸುವುದು ಸಹಜ. ಕೇವಲ ಪಂಡಿತರ ಶಾಸ್ತ್ರಗ್ರಂಥಗಳಲ್ಲಿ ಮಾತ್ರ ಇಂತಹ ಪದಗಳು ಬರಲು ಸಾಧ್ಯವಿಲ್ಲ. ಆಚಾರ್ಯ ಪಾಣಿನಿಯವರು ಸಂಸ್ಕೃತದಲ್ಲಿನ ಇಂತಹ ಶಬ್ದರೂಪಗಳಿಗೆ ಬೇರೆಯ ವಿಭಾಗವನ್ನಾಗಲೀ, ನಾಮಕರಣವನ್ನಾಗಲೀ ಮಾಡಿಲ್ಲ. ಶಬ್ದಗಳ ಶುದ್ಧಸ್ವರೂಪವನ್ನು ತಿಳಿಸಿಕೊಡುವುದಕ್ಕಾಗಿ ಆಚಾರ್ಯ ಪಾಣಿನಿಯವರು ಅಷ್ಟಾಧ್ಯಾಯಿಯನ್ನು ರಚನೆ ಮಾಡಿಕೊಟ್ಟಿದ್ದಾರೆ.

ಕಾವ್ಯಗಳಿಗೆ ಶೋಭೆಯನ್ನು ಉಂಟುಮಾಡುವ ಇಂತಹ ಪದಗಳು ಕಾವ್ಯ-ಮೀಮಾಂಸೆಯಲ್ಲಿ ಚರ್ಚೆ ಮಾಡಬೇಕಾದ ವಿಷಯಗಳು. ಮಹಾಕವಿದಂಡಿಯು 'ಕಾವ್ಯಕ್ಕೆ ಶೋಭೆ ಕೊಡುವುದು ಅಲಂಕಾರಗಳು' ಎಂದು ಹೇಳಿದ್ದಾನೆ. ಜಗನ್ನಾಥನೇ ಮುಂತಾದ ಆಲಂಕಾರಿಕರು ತಮ್ಮ ಗ್ರಂಥಗಳಲ್ಲಿ ಇಂತಹ ಪದಗಳನ್ನು 'ಇದೊಂದು ವಚನಭಂಗಿ' ಎಂದು ಹೇಳಿದ್ದಾರೆ. ಕುಂತಕನೆಂಬ ಆಲಂಕಾರಿಕನು ತನ್ನ **'ವಕ್ರೋಕ್ತಿ ಜೀವಿತ'** ಎಂಬ ಗ್ರಂಥದಲ್ಲಿ ಇವುಗಳನ್ನು ವಕ್ರೋಕ್ತಿಗಳ ಗುಂಪಿನಲ್ಲಿ ಸೇರಿಸಿದ್ದಾನೆ. ಹೀಗೆ ಅನೇಕ ಅಲಂಕಾರಿಕರು ಈ ರೀತಿಯ ನುಡಿಗಟ್ಟುಗಳನ್ನು ಗಮನಿಸಿದ್ದರೂ ಅವುಗಳಿಗೆ ವಿಶೇಷವಾದ ನಾಮಕರಣವನ್ನೇನೂ ಮಾಡಿಲ್ಲ.

ತನ್ನಲ್ಲಿರುವ ಪದಗಳಿಂದ, ಚಮತ್ಕಾರದಿಂದ ಕೂಡಿದ ವಿಶೇಷ ಅರ್ಥವನ್ನು ಕೊಡುವ 'ಈಡಿಯಮ್' ಎಂಬ ಶಬ್ದಕ್ಕೆ ಸಂಸ್ಕೃತ ಭಾಷೆಯಲ್ಲಿ 'ವಾಚೋಯುಕ್ತಿ' ಎಂಬ ಪದವು ಸಮಾನಾರ್ಥಕವಾಗಬಹುದೆಂದು ನಮ್ಮ ಅಭಿಪ್ರಾಯ. ಈ ಹೆಸರಿನಿಂದ ಇದು ರೂಢಿಗೆ ಬರಲೆಂದು ಆಶಯ. ವಾಚಃ ಯುಕ್ತಿಃ ಎಂದು ಬಿಡಿಸಿ ಹೇಳಿದಾಗ ಷಷ್ಠೀ ತತ್ಪುರುಷ ಸಮಾಸವಾಗುತ್ತದೆ. ಯುಕ್ತಿ ಶಬ್ದಕ್ಕೆ 'ಯೋಗ' ಎಂದರ್ಥ. ಯೋಗ ಪ್ರಯೋಗ ಇವುಗಳಿಗೆ ಇಲ್ಲಿ ಅರ್ಥ ವ್ಯತ್ಯಾಸವೇನಿಲ್ಲ. **'ವಾಕ್‌ದಿಕ್‌ಪಶ್ಯದ್ಭ್ಯಃ ಯುಕ್ತಿ ದಂಡ ಹರೇಷು'** ಎಂಬುದು ಒಂದು ವಾರ್ತಿಕ. ಈ ವಾರ್ತಿಕದ ನಿಯಮದಂತೆ, ವಾಚೋಯುಕ್ತಿ ಎಂಬಲ್ಲಿ ವಾಕ್ ಶಬ್ದದ ಷಷ್ಠೀವಿಭಕ್ತಿ ಪ್ರತ್ಯಯವು ಲೋಪವಾಗಿಲ್ಲ. ಇದನ್ನು ಅಲುಕ್‌ಸಮಾಸವೆನ್ನುತ್ತಾರೆ.

ಈ ಸೂತ್ರದಲ್ಲಿ ಹೇಳಿರುವಂತೆ **'ಪಶ್ಯತೋಹರಃ'** ಕಣ್ಣೆದುರಿಗೆ ಕದಿಯುವವನು ಎಂದರ್ಥ. **'ದಿಶೋದಂಡ'** ದಿಗಂತ ಎಂದರ್ಥ. ಈ ರೀತಿಯ ಪದಪುಂಜಗಳಿವೆ ಎಂದು ನವೀನರು ಹೇಳಿದ್ದಾರೆ. ಹೀಗಿರುವಾಗ ವಾಚೋಯುಕ್ತಿಃ ಎಂಬ ಶಬ್ದರೂಪಕ್ಕೆ ವಚನಭಂಗಿ ಎಂಬ ಅರ್ಥವು ಸರಿಯೆನಿಸುತ್ತದೆ. 'ಆಪ್ಟೆ' ಎಂಬ ಮಹನೀಯರು ರಚಿಸಿರುವ 'ಸಂಸ್ಕೃತ-ಆಂಗ್ಲ' ನಿಘಂಟಿನಲ್ಲಿ ವಾಚೋಯುಕ್ತಿ ಎಂಬುದಕ್ಕೆ

Good or clever Speech ಎಂದು **ಅರ್ಥ** ಬರೆದಿದ್ದಾರೆ. ಈ ಅಭಿಪ್ರಾಯವು ನಮಗೂ ಸಮ್ಮತವಾಗಿದೆ. **'ಕಾ ತರ್ಹಿ ಇಯಮ್ ವಾಚೋ ಯುಕ್ತಿ ?' 'ಏಷೈಷಾ ವಾಚೋಯುಕ್ತಿ'** ಎಂಬ ವಾಕ್ಯವು ಪತಂಜಲಿಯವರ **ಮಹಾಭಾಷ್ಯ**ದಲ್ಲಿ ಬಹಳವಾಗಿ ಕಂಡು ಬರುತ್ತದೆ. ಮನೆಗಳಲ್ಲಿ, ಮಿತ್ರಕೂಟಗಳಲ್ಲಿ ಪರಿಹಾಸದ **ವೇಳೆ**ಯಲ್ಲಿ ಉಪಯೋಗಿಸುವ ಅನೇಕ ಪದಗಳು ದೊರೆಯುತ್ತವೆ. ವಿದ್ವತ್ಸಭೆಗಳಲ್ಲಿ ಶಾಸ್ತ್ರಗ್ರಂಥಗಳಲ್ಲಿ ಮಾತ್ರ ಅಲ್ಲ.'

ವಾಚೋಯುಕ್ತಿ : ಎಂಬುದಕ್ಕೆ ಕೇವಲ 'ಈಡಿಯಮ್ಸ್' ಎಂಬ ಅರ್ಥ ಮಾತ್ರ ಅಲ್ಲವೆಂದು ನಮ್ಮ ಆಲೋಚನೆ. 'ಈಡಿಯಮ್ಸ್' ಪದ ಕೊಡುವಂತಹ ಅರ್ಥವನ್ನೇ ಕೊಡುವುದಾದರೂ 'ವಾಚೋಯುಕ್ತಿ'ಗಳು ಇಡೀ ವಾಕ್ ಪ್ರಪಂಚದ ಶೋಭೆಯನ್ನು ಹೆಚ್ಚಿಸುತ್ತದೆ. ಇವುಗಳನ್ನು ಸಮಯೋಚಿತವಾಗಿ ಪ್ರಬಂಧಗಳಲ್ಲಿ ಬಳಸಿದರೆ ಅಂತಹ ಪ್ರಬಂಧಗಳು ಚಿನ್ನದಮೆರಗು ಕೊಟ್ಟಂತೆ ಶೋಭಿಸುತ್ತದೆ.

ಅಷ್ಟಾಧ್ಯಾಯೀ ಗ್ರಂಥದಲ್ಲಿದ್ದು, ಸಿದ್ಧಾಂತಕೌಮುದಿಯಲ್ಲೂ ಮತ್ತೆ ವ್ಯುತ್ಪತ್ತಿಯನ್ನು ಹೇಳಿರುವ .ಕೆಲವು ವಾಚೋ ಯುಕ್ತಿಗಳನ್ನು ಸಂಗ್ರಹಿಸಿ ಮುಂದೆ ಉದಾರಣೆಗಳೊಂದಿಗೆ ತಿಳಿಸಿಕೊಟ್ಟಿದ್ದೇವೆ. ಇಂತಹ ಪದಗಳಲ್ಲಿರುವ ಚಮತ್ಕಾರವನ್ನು ಓದುಗರು ಗ್ರಹಿಸಿ ತಮ್ಮ ವಾಕ್ಯಗಳಲ್ಲಿ ಉಪಯೋಗಮಾಡಿಕೊಳ್ಳಲೆಂದು ತಮ್ಮ ಆಶಯ.

'ಪಾತ್ರೇ ಸಮಿತಾದಯಶ್ಚ' ಎಂಬುದು ವ್ಯಾಕರಣ **ಶಾಸ್ತ್ರ**ದಲ್ಲಿನ ಒಂದು ಗಣಪಾಠ. ಈ ಗಣ ಪಾಠದಲ್ಲಿ ನಿಪಾತ ಮಾಡಿರುವ ಎಲ್ಲ ಶಬ್ದಗಳೂ ವಾಚೋಯುಕ್ತಿಗಳೇ ಆಗಿವೆ.

1. **ಪಾತ್ರೇಸಮಿತಃ** – ಕೇವಲ ಊಟಕ್ಕೆ ಮಾತ್ರ ಬರುವವನು ಕೆಲಸ ಕಾರ್ಯಗಳಿಗಿಲ್ಲ.
   ಉದಾ – ಚೈತ್ರೋ ಅಯಂ ಪಾತ್ರೇಸಮಿತಃ, ನ ಕಿಂಚಿತ್‌ಸಾಧಯಿತುಂ ಶಕ್ತಃ

2. **ಗೇಹೇಶೂರಃ** – ಮನೆಯಲ್ಲಿ ಮಾತ್ರ ಇವನ ಶೌರ್ಯ, ಬೇರೆ ಯಾವ ಕಾರ್ಯಗಳಲ್ಲಿಯೂ ಇಲ್ಲ.

   ಉದಾ – ಗೇಹೇ ಶೂರೋ ಅಯಮ್, ನ ಪರೀಕ್ಷಾಯಾಮುತ್ತೀರ್ಣವಾನ್

3. **ಕೂಪಮಂಡೂಕಃ** – ಅಲ್ಪ ಸ್ವಲ್ಪ ತಿಳಿದವನು. ಇದೇ ಅರ್ಥದಲ್ಲಿ ಉದುಂಬರಕ್ರಿಮಿ, ಕೂಪಕಚ್ಛಪ, ಅವಟಕಚ್ಛಪ, ಕುಂಭ-ಮಂಡೂಕಃ, ಉದಪಾನ ಮಂಡೂಕಃ.

4. **ನಗರ ಕಾಕಃ** – ಬೇರೆಯವರನ್ನು ವಂಚಿಸುವುದರಲ್ಲಿ ಜಾಣ

5. **ಗರ್ಭೇ ತೃಪ್ತಃ** – ದರಿದ್ರ, ಆಜನ್ಮದರಿದ್ರ

6. **ಆಖನಿಕಬಕಃ** – ಮನೆಯಲ್ಲಿರುವುದನ್ನು ತಿಂದುಂಡು ಕಾಲಕಳೆಯುತ್ತಾನೆ.

   (ಆಖನಿಕ = ಎಂಬುದಕ್ಕೆ ಜಲಧಾರೆ ಎನ್ನುವ ಅರ್ಥವಿದೆ) ಹೊರಗೆಹೋಗಿ ಸಂಪಾದನೆ ಮಾಡುವುದಿಲ್ಲ.

7. **ಮಾತರಿ ಪುರುಷ / ಪಿತರಿ ಪುರುಷ** – ಮನೆಯಲ್ಲೇ ಕುಳಿತು ತಾಯಿಯನ್ನು ಬೆದರಿಸಿಕೊಂಡು ತಿಂದುಕೊಂಡು ಇರುತ್ತಾನೆ. ಹೊರಗೆ ಹೋಗಿ ಕೆಲಸ ಮಾಡುವುದಿಲ್ಲ.

8. **ಗೇಹನರ್ದೀ** – ಮನೆಯಲ್ಲಿ ಮಾತ್ರ ಶೂರ.

9. **ಪಿಂಡೀಶೂರಃ** – ಊಟದಲ್ಲಿ ಮಾತ್ರಶೂರ, ಕೆಲಸದಲ್ಲಿಯೂ ಶೂರ.

10. **ಗೇಹಮೇಹಿ** – ಮನೆಯಲ್ಲಿ ಇರುತ್ತಾನೆ. ಕೆಲಸಕ್ಕಾಗಿ ಹೊರಗೆ ಹೋಗುವುದಿಲ್ಲ.

11. **ಗೇಹವಿಚಿತೀ** – ಮನೆಯಲ್ಲಿದ್ದುಕೊಂಡು ಇದು ಉಚಿತ ಇದು ಅನುಚಿತ ಎಂದು ವಿಮರ್ಶಿಸುತ್ತಾನೆ. ಆದರೆ ಕಾರ್ಯದ ಸಮಯದಲ್ಲಿ ಹೇಳುವುದಿಲ್ಲ.

12. ಅವಿನೀತನಾದ ದರ್ಪಬುದ್ಧಿಯವನನ್ನು **'ನಗರಶ್ವಾ'** ಎಂದು ಹೇಳಿರುವುದು.

13. **ಕರ್ಣೇಟರಿಟಿರಾ** – ಕೇಳುವವರ ಇಷ್ಟಾನಿಷ್ಟಗಳನ್ನು ಲೆಕ್ಕಿಸದೆ ಒಂದೇ ಸಮನೆ ಹರಟುವವನು.

14 **ಕರ್ಣೇ ಚುರುಚುರಾಃ** – ಇದಕ್ಕೂ ಮೇಲಿನದ್ದೇ ಅರ್ಥ.

ಇಂತಹ ಶಬ್ದಗಳು ಕನ್ನಡದಲ್ಲಿ ಮಿಟಿಮಿಟಿ ಕಿರಿಕಿರಿ ಎಂದೇ ವಾಡಿಕೆಯಿದೆ.

ಇದೇ ರೀತಿ ಮಯೂರ ವ್ಯಂಸಕಾದಿ ಗಣಪಾಠದ ಕೆಲವು ಪದಗಳು. ಮುಂದೆ ಮಯೂರ ವ್ಯಂಸಕಗಣದ ಕೆಲವು ಶಬ್ದಗಳಿವೆ.

1. **ಅಶ್ನೀತಪಿಬತಾ/ಖಾದತ ಮೋದತಾ/ಪಚತ ಭೃಜತಾ** ಈ ನುಡಿಗಟ್ಟುಗಳಿಗೆ ಹೆಚ್ಚಾಗಿ ತಿಂದು, ಕುಡಿದು ಮಾಡುವಿಕೆ ಎಂದೇ ಅರ್ಥ.

   ಉದಾ – ರಾಜ್ಞೋ ದಶರಥಸ್ಯ ಅಶ್ವಮೇಧಯಾಗೇ ಮಹತೀ ಭೋಜನವ್ಯವಸ್ಥಾ ಬಭೂವ. ಸರ್ವದಾ ಅಶ್ನೀತ ಪಿಬತಾ, ಖಾದತ ಮೋದತಾ ಚ ಸಮಭವತ್.

2. **ಏಹಿರೇಯಾಹಿರಾ** – ಏಯ್, ಇಲ್ಲಿ ಬಾ, ಏಯ್ ಅಲ್ಲಿ ಹೋಗು ಎಂದು ಅಗೌರವದ ಆಜ್ಞೆಮಾಡಲು ಬಳಸುವ ಶಬ್ದ.

   ಉದಾ – ಈ ಧನಿಕನ ಮನೆಯಲ್ಲಿ ನಾನು ಇರವುದಿಲ್ಲ. ಯಾವಾಗಲೂ ಏಹಿರೇಯಾಹಿರಾ ಎಂದು ನನ್ನನ್ನು ಪೀಡಿಸುತ್ತಾನೆ.

   'ನಾಹಂ ತಸ್ಯಧನಿಕಸ್ಯಗೃಹೇ ಸ್ಥಾಸ್ಯಾಮಿ । ಸರ್ವದಾ ಏಹಿರೇಯಾಹಿರಾ ಇತಿ ಮಾಂ ಪೀಡಯತಿ.

3. **ಕಣೇಹತ್ಯ – ಮನೋಹತ್ಯ** – ಈ ಪದಗಳಿಗೆ ಕಂಠಪೂರ್ತಿ ಅಥವಾ ತೃಪ್ತಿಯಾಗುವವರೆಗೂ ಎಂದರ್ಥ. ಕಣೇಹತ್ಯಸುರಾಂ ಪಿಬತಿ, ಮನೋಹತ್ಯ ಪುಷ್ಪಾಣಿ ಪಶ್ಯತಿ, ಮನಸ್ಸು ತುಂಬುವವರೆಗೂ ಹೂಗಳನ್ನು ನೋಡುತ್ತಾನೆ.

4. **ಕುತುಪಸೌಶ್ರುತ** – ಕುತುಪ ಎಂದರೆ ಕುರಿಯ ಉಣ್ಣೆಯಿಂದ ಮಾಡಿದ ಕಂಬಳಿ.

ಯಾವಾಗಲೂ ಇದನ್ನು ಧರಿಸಿದವನು ಕುತುಪಸೌಶ್ರುತ.

5. **ಅಜಾತೌಲ್ವಲಿ** – ಮೇಕೆಗಳನ್ನು ಕೊಂಡು, ಮಾರಿಸುವ ದಲ್ಲಾಳಿಯು ಅಜಾತೌಲ್ವಲಿ ಎನ್ನಿಸಿಕೊಳ್ಳುತ್ತಾನೆ.

6. **ಉಷ್ಟ್ರಕೋಶೀ** – ಒಂಟೆಯಂತೆ ಕೂಗುವವನು

7. **ಕಾಕರಾವೀ** – ಕಾಗೆಯಂತೆ ಶಬ್ದ ಮಾಡುವವನು
ಉದಾ – ಇವನು ಹೇಗೆ ಒಂಟೆಯಂತೆ ಕೂಗಿ ಜನಗಳನ್ನೂ ಉದ್ವೇಗಗೊಳಿಸುತ್ತಾನೆ. ಗುರುಗಳ ಸನ್ನಿಧಾನದಲ್ಲಿ ಕಾಗೆಯಂತೆ ಶಬ್ದವಾಡುತ್ತಿರಬಾರದು.

ಈಗ ಮಯೂರವ್ಯಂಸಕಾದಿ ಗಣ

ತರಕಾರಿಗಳನ್ನು ಮಾರುತ್ತಾ ದಾರಿಯಲ್ಲಿ ಹೋಗುತ್ತಿರುವ ಮಾರಾಟಗಾರನನ್ನು ಗೃಹಿಣಿಯು **ಏಹಿವಾಣಿಜ** ಎಂದು ಕರೆಯುತ್ತಾಳೆ. ಈಕೆಯ ಆಹ್ವಾನವು ಏಹಿವಾಣಿಜಾ, ಹಾಗೆಯೇ ವ್ಯಾಪಾರದಲ್ಲಿ ಜಗಳ ಮಾಡಿ ಮಾರಾಟಗಾರನನ್ನು ಮನೆಯಿಂದ ಹೊರಗೆ ಕಳುಹಿಸುವ ಕ್ರಿಯೆಯು **ಅಪೇಹಿ ವಾಣಿಜ.**

ಚೇಲವೆಂದರೆ ವಸ್ತ್ರ (ಬಟ್ಟೆ) ಎಂದರ್ಥ. ಬಟ್ಟೆಯನ್ನು ತರುವ ಕ್ರಿಯೆಯು **ಆಹರಚೇಲಾ, ಆಹರವಸನಾ,** ಇದೇರೀತಿ ನೆಗೆದು ಹಾರಿ ಬೀಳುವ ಕ್ರಿಯೆಯು **ಉತ್ಪತಪತನಾ,** ಸ್ನಾನ ಮಾಡಿದರೂ ದೇಹದ ಮಲಿನತೆಯು ಕಳೆಯದೆ ಇದ್ದರೆ ಅವನನ್ನು **ಸ್ನಾತ್ವಾಕಾಲಕಃ** ಎನ್ನುತ್ತಾರೆ.

ಯಾವತ್ ಮತ್ತು **ಪುರಾ**ಶಬ್ದಗಳು ಯಾವುದಾದರೂ ನಿಶ್ಚಯವಾದ ಕ್ರಿಯೆಯಲ್ಲಿ ತೋರುತ್ತಿದ್ದಂತೆ ಆಗ ಆ ನಿಪಾತಗಳು ಭವಿಷ್ಯತ್ಕಾಲದ ಅರ್ಥವನ್ನು ಸೂಚಿಸುತ್ತವೆ.
(ಸೂತ್ರ – ಯಾವತ್ ಪುರಾನಿಪಾತಯೋರ್ಲಟ್ ಸ್ಯಾತ್)

ಉದಾ – ಹನುಮಂತನು ಸೀತೆಗೆ ಹೇಳುತ್ತಾನೆ. ದೇವಿ **'ಯಾವತ್ ರಾಮೋ ಲಂಕಾಮಾಗಚ್ಛತಿ, ರಾಮಲಕ್ಷ್ಮಣೌ ರಾಕ್ಷಸಸೈನ್ಯಂ ಪುರಾ ವಿಧಮತಃ'** ದೇವಿಯೇ ಯಾವಾಗ ರಾಮನು ಲಂಕೆಗೆ ಬರುತ್ತಾನೆಯೋ, ಆಗ ರಾಮ-ಲಕ್ಷ್ಮಣರು ರಾಕ್ಷಸಸೈನ್ಯವನ್ನು ಧ್ವಂಸಮಾಡುತ್ತಾರೆ.

ಮತ್ತೊಂದು ಕಡೆ 'ಕಾರಮ್' ಶಬ್ದವು ತನ್ನ ಜೊತೆಯಲ್ಲಿರುವ ಪದಕ್ಕೆ ಕೇವಲ ಅಲಂಕಾರ ಪ್ರಾಯವಾಗಿರುತ್ತದೆ. ಯಾವುದೇ ರೀತಿಯಲ್ಲಿ ಅರ್ಥ ಬದಲಾವಣೆ ಹೊಂದುವುದಿಲ್ಲ.
(ಅನ್ಯಥಾ, ಏವಂ, ಕಥಮ್, ಇತ್ಥಂ...... ಎಂಬ ಸೂತ್ರದಂತೆ)

1. **ವಾಹನಮಾನೇತವ್ಯಮ್ ಅನ್ಯಥಾಕಾರಂ ನಾಹಮಾಗಮಿಷ್ಯಾಮಿ.**
ಒಂದು ವಾಹನವನ್ನು ತರಲೇ ಬೇಕು ಇಲ್ಲದಿದ್ದರೆ ನಾನು ಬರುವುದಿಲ್ಲ.
ಇಲ್ಲಿ 'ಕಾರಂ' ಎಂಬ ಶಬ್ದವು ಕೇವಲ ಅಲಂಕಾರಕ್ಕಾಗಿ ಮಾತ್ರ ಇದೆ. ಇದಕ್ಕೆ

'ಅನ್ಯಥಾ' ಎನ್ನುವುದೇ ಅರ್ಥ.

2. **ಏವಂಕಾರಂ** = ಏವಂಕಾರಂ ಯದಿ ಬ್ರೂಷೇ, ತರ್ಹಿ ರಾಜಾ ರಕ್ಷತಿ. (ನೀನು ಹೀಗೆ ಹೇಳಿದರೆ ರಾಜನು ನಿನ್ನನ್ನು ರಕ್ಷಿಸುತ್ತಾನೆ.)

3. **ಇತ್ಥಂಕಾರಂ** – ಶಾಸ್ತ್ರೇ ತಾವದಿತ್ಥಂಕಾರಂ ವ್ಯವಸ್ಥಾಪಿತಮ್ ಶಾಸ್ತ್ರದಲ್ಲಿ ಈ ರೀತಿ ವ್ಯವಸ್ಥೆ ಮಾಡಿದೆ.
ಈ ವಾಕ್ಯಗಳಲ್ಲಿ, ಅನ್ಯಥಾ, ಏವಂ, ಇತ್ಥಂ ಎನ್ನುವುದಕ್ಕೂ, ಅನ್ಯಥಾಕಾರಂ, ಏವಂಕಾರಂ, ಇತ್ಥಂಕಾರಂ ಎನ್ನುವುದಕ್ಕೂ ಯಾವ ವ್ಯತ್ಯಾಸವೂ ಇಲ್ಲ.

4. **ಯಥಾಕಾರಮಹಂ ಭೋಕ್ಷ್ಯೇ ತಥಾಕಾರಂ ಭೋಕ್ಷ್ಯೇ ! ಕಿಂ ತವಾನೇನ ?**
ನಾನು ಎಷ್ಟು ಬೇಕೋ ಅಷ್ಟು ಊಟ ಮಾಡುತ್ತೇನೆ. ಅದರಿಂದ ನಿನಗೇನು ?
ಯಥಾಕಾರಮುಪವಿಶಾಮಿ, ತಥಾಕಾರಮುಪವಿಶಾಮಿ
ಹೇಗೆ ಬೇಕೋ ಹಾಗೆ ಕುಳಿತುಕೊಳ್ಳುತ್ತೇನೆ.

ಯಥಾಕಾರಮಗಚ್ಛಮ್ ತಥಾಕಾರಮಗಚ್ಛಮ್
ಹೇಗೆ ಬೇಕೋ (ಇಷ್ಟವೋ) ಹಾಗೆ ಬಂದೆ.

ಇಂತಹವುಗಳನ್ನು ನಾವೇ ಊಹಿಸಬಹುದು.

5. **ಉದಪೇಷಮ್** – ತಂಡುಲಮುದಪೇಷಮ್ ಪಿನಷ್ಟಿ (ಅಕ್ಕಿಯನ್ನು ನೀರು ಸೇರಿಸಿಕೊಂಡು ರುಬ್ಬು' ಎಂದರ್ಥ)

6. **ಯಾಹಿ ಯಾಹೀತಿ ಯಾತಿ** – ಮತ್ತೆ ಮತ್ತೆ ಹೋಗುತ್ತಾನೆ.

7. **ಪಠ ಪಠೇತಿ ಪಠತಿ** – ಮತ್ತೆ ಮತ್ತೆ ಓದುತ್ತಾನೆ.

8. **ಅಧೀಷ್ವ ಅಧೀಷ್ವ ಇತಿ ಅಧೀತೇ** – ಮತ್ತೆ ಮತ್ತೆ ಅಧ್ಯಯನ ಮಾಡುತ್ತಾನೆ.

9. **ಶೇಷ್ವ ಶೇಷ್ವೇತಿ ಶೇತೆ** – ಬಹಳ ಹೊತ್ತು ಮಲಗುತ್ತಾನೆ.

ಇವುಗಳಿಗೆ ಎಲ್ಲ ಪುರುಷಗಳಲ್ಲಿಯೂ ಎಲ್ಲ ವಚನಗಳಲ್ಲಿಯೂ ಪ್ರಯೋಗವಿದೆ.

10. ಮತ್ತೊಂದು ರೀತಿಯ ವಿಶೇಷ ಪ್ರಯೋಗ ಅನದ್ಯತನ ಭೂತಾರ್ಥಕ್ಕೆ ಪ್ರಯೋಗವು ಭವಿಷ್ಯತ್ಕಾಲದಲ್ಲಿದೆ.

ಸ್ಮರಸಿ ಕೃಷ್ಣ, ಗೋಕುಲೇ ವತ್ಸ್ಯಾಮಃ ।
ಗೋಕುಲದಲ್ಲಿ ವಾಸಿಸಿದ್ದು ನೆನಪಿದೆಯೋ ಕೃಷ್ಣ ?

ಸ್ಮರಸಿ ಸೀತೆ ಮಂದಾಕಿನ್ಯಾಂ ಸ್ನಾಸ್ಯಾಮಃ ।
ಮಂದಾಕಿನಿಯಲ್ಲಿ ಸ್ನಾನ ಮಾಡಿದ್ದು ನೆನಪಿದೆಯೋ ಸೀತೆ ?

11. **ವಿಷ್ಣವತಿ, ಅವಿಷ್ಣವತಿ** ಎಂಬ ಶಬ್ದಗಳಿಗೆ ಶಬ್ದಮಾಡಿಕೊಂಡು ಊಟಮಾಡುತ್ತಾನೆ. ಏನೋ ಶಬ್ದ ಕೇಳಿಸುತ್ತಿದೆಯಲ್ಲಾ – ಈ ವಿದ್ಯಾರ್ಥಿಯು ಪಾಯಸವನ್ನು

ತಿನ್ನುತ್ತಿದ್ದಾನೆ.

ಗೌರನ್ನವಿಷ್ಣವತಿ – ಹಸುವು ಅನ್ನವನ್ನು ಶಬ್ದಮಾಡಿಕೊಂಡು ತಿನ್ನುತ್ತಿದೆ. (ಸೂತ್ರ – ವೇಷ್ಣ ಸ್ವನೋ ಭೋಜನೇ ಸೂತ್ರದಂತೆ)

ಹೀಗೆ ವ್ಯಾಚೋಯುಕ್ತಿಗಳಿಗೆ ಒಂದು ದಿಕ್ಸೂಚಿಯನ್ನು ತೋರಿಸಿಕೊಟ್ಟಿದೆ. ರತ್ನಗರ್ಭವಾದ ಈ ಸಂಸ್ಕೃತ ಭಾಷೆಯಲ್ಲಿ ಅನೇಕ ನುಡಿಗಟ್ಟುಗಳಿವೆ. ವಿದ್ವಾಂಸರುಗಳು ಇಂತಹವುಗಳನ್ನು ಹುಡುಕಿ ತೋರಿಸಿಕೊಡಿ. ಕವಿಗಳೂ ಪ್ರಬಂಧ ಲೇಖಕರೂ ತಮ್ಮ ಕಾವ್ಯಗಳಲ್ಲಿ ಪ್ರಬಂಧಗಳಲ್ಲಿ ಇವುಗಳನ್ನು ಬಳಸಿಕೊಳ್ಳಿ. ಹೀಗೆ ಉಪಯೋಗ ಮಾಡಿಕೊಳ್ಳದಿದ್ದರೆ ಮುಂದೊಂದು ದಿನ ಇಂತಹ ಶಬ್ದಗಳೇ ಕಾಣದಾಗುತ್ತವೆ. ಪ್ರಯೋಗದಲ್ಲಿಲ್ಲದೆ ಕೆಲವು ಶಬ್ದಗಳ ಅರ್ಥವು ಈಗಲೂ ತಿಳಿಯುತ್ತಿಲ್ಲ. ಹೀಗೆ ಅರ್ಥ ತಿಳಿಯದ ಪದಗಳ ಪ್ರಯೋಗದಿಂದ ಪ್ರಯೋಜನವೂ ಇಲ್ಲ.

ಈ ದೇವವಾಣಿಯು ಶಬ್ದ ಸಂಪತ್ತಿನ ನಿಧಿ. ಅರ್ಥಗರ್ಭಿತವಾದ ಶಬ್ದರಾಶಿಯೇ ಇದ್ದರೂ ಶಬ್ದಗಳದಾರಿದ್ರ್ಯವನ್ನೂ ಹೊಂದಿದವರಂತೆ, ಕೃಪಣರಂತೆ ಆಗಬಾರದಲ್ಲವೇ. ಈ ಸಂಸ್ಕೃತ ಭಾಷೆಯ ಸಂಪುಟದ ಮುಚ್ಚಳವನ್ನು ತೆಗೆದು ಆ ಪದಗಳಿಂದ ಈ ದೇವವಾಣಿಯನ್ನು ಸಿಂಗರಿಸದಿದ್ದರೆ ನಾವು ಕೃತಘ್ನರಾದಂತೆ. ಹೊಸದಾಗಿ ಕಲಿಯುವವರಿಗೆ ಸುಲಭಸಾಧ್ಯವಾಗುವಂತೆ ಸರಳವಾದ ಪದಗಳಿಂದ ತಿಳಿಸುವುದು ಉತ್ತಮವಾದ ಉಪಾಯವೇ. ಮಕ್ಕಳಿಗೆ ರುಚಿಸುವ ಆಹಾರ ಪಾನೀಯಗಳು ದೊಡ್ಡವರಿಗೆ ಹಿತವಾಗುವುದಿಲ್ಲವಲ್ಲವೇ.

ಭೂಷ್ಯತಾಂ ದೇವವಾಣೀಯಂ ತದೀಯೈರೇವ ಭೂಷಣೈಃ ।
ಮಾ ಭೂತ್ ಕೃಪಣತಾ ತಸ್ಯಾಂ ಯಯೈವೋಜ್ಜೀವಿತಾಃ ವಯಮ್ ॥

ಯಾರಿಂದ ನಾವು ಅಸ್ತಿತ್ವ ಕಂಡಿದ್ದೇವೆಯೋ ಅಂತಹ ಈ ದೇವವಾಣಿಯನ್ನು ಆಕೆಯದ್ದೇ ಆದ ಆಭರಣಗಳಿಂದ ಸಿಂಗರಿಸಿ. ಅಲ್ಲಿ ಜಿಪುಣತನ ಬೇಡ.

ಸಂಸ್ಕೃತ ಭಾಷೆಯು ಸಕಲಜನವ್ಯವಹಾರ ಭಾಷೆಯಾಗಿತ್ತೆಂಬುದಕ್ಕೆ ಪಾಣಿನೀಯ ಶಾಸ್ತ್ರದಲ್ಲಿ ದೊರೆಯುವ ಗಮಕಗಳು

ಸಂಸ್ಕೃತ ಭಾಷೆಯು ಎಲ್ಲರ ದೈನಂದಿನ ವ್ಯವಹಾರದಲ್ಲಿ ಭಾಷೆಯಾಗಿತ್ತೇ ಎನ್ನುವುದರಲ್ಲಿ ವಿದ್ವಾಂಸರೂ ಗೊಂದಲದಲ್ಲಿದಂತೆ ತೋರುತ್ತದೆ. ಇದು ಕೇವಲ ಪಂಡಿತರು ಕಲ್ಪಿಸಿಕೊಂಡ ಭಾಷೆ. ಶಾಸ್ತ್ರಗ್ರಂಥಗಳ ರಚನೆಯಲ್ಲಿ ಮಾತ್ರ ಬಹಳ ಉಪಯೋಗಕ್ಕೆ ಬಂದಿದೆ ಎನ್ನುವುದು ಕೆಲವರ ಮತ. ಒಂದು ವೇಳೆ ವ್ಯವಹಾರದಲ್ಲಿದ್ದರೂ ಕೇವಲ ಬ್ರಾಹ್ಮಣರ ಭಾಷೆಯಾಗಿತ್ತೇ ಹೊರತು ಸಕಲಜನ ವ್ಯವಹಾರದಲ್ಲಿರಲಿಲ್ಲ ಎಂದು ಇನ್ನೊಂದು ಅಭಿಪ್ರಾಯ. ಇಂದಿನ ದಿನಗಳಲ್ಲಿ ಎಲ್ಲಿಯೂ ಈ ಭಾಷೆಯು ವ್ಯವಹಾರದಲ್ಲಿಲ್ಲವೆಂಬುದೇ ಈ ಎಲ್ಲ ವಿವಾದಗಳ ಮೂಲವಾಗಿದೆ. ಸಂಸ್ಕೃತ ಭಾಷೆಯು ವ್ಯವಹಾರಕ್ಕೆ ಯೋಗ್ಯವಾಗಿಲ್ಲ. ಅತ್ಯಂತ ಕ್ಲಿಷ್ಟವಾದ

ಭಾಷೆ ಇದು. ಈ ಎಲ್ಲ ಕಾರಣಗಳಿಂದ ಇದು ಹಿಂದೆಯೂ ವ್ಯವಹಾರದಲ್ಲಿ ಇರಲಿಲ್ಲ ಈಗಲೂ ಇದು ವ್ಯವಹಾರಯೋಗ್ಯವಾಗಿಲ್ಲ ಎಂಬುದೇ ಹಲವರ ಅಭಿಮತವಾಗಿದೆ.

ಇದಕ್ಕೆ ಉತ್ತರವನ್ನು ಹೀಗೆ ಹೇಳಬಹುದು ನಮ್ಮ ಮಾತೃಭಾಷೆಯಲ್ಲಿ ನಾವು ಲೀಲಾಜಾಲವಾಗಿ ವ್ಯವಹಾರಮಾಡಬಹುದಾದರೂ ಆ ಭಾಷೆಯು ಬೇರೆಯವರಿಗೆ ಕ್ಲಿಷ್ಟವಾಗಿಯೇ ಇರುತ್ತದೆ. ನಮ್ಮ ಮಾತೃಭಾಷೆಯು ಸಮಕಾಲೀನ ಬೇರೆ ಭಾಷೆಗಳು ದೈನಂದಿನ ವ್ಯವಹಾರದಲ್ಲಿದ್ದು ಮತ್ತೆ ಮತ್ತೆ ನಾವು ಆ ನುಡಿಗಳನ್ನು ಕೇಳುತ್ತಿದ್ದರೆ ಆ ಭಾಷೆಯನ್ನು ಕಲಿಯುವುದು ಸುಲಭ. ಪಾಶ್ಚಾತ್ಯರಿಗೆ ಕರ್ನಾಟಕ ಭಾಷೆಯು ಕಠಿಣವೇ ಆಗಿರುತ್ತದೆ. ಕ್ಲಿಷ್ಟವಾದ ಭಾಷೆಯಾದುದರಿಂದ ವ್ಯವಹಾರ ಯೋಗ್ಯವಲ್ಲ ಎಂಬುದು ಸರಿಯಾದ ಕಾರಣವಲ್ಲ.

ಪಾಣಿನೀಯ ಶಾಸ್ತ್ರದಲ್ಲಿ ಈ ರೀತಿ ಜನಗಳ ವ್ಯವಹಾರದಲ್ಲಿ ಸಂಸ್ಕೃತ ಭಾಷೆ ಇತ್ತೆಂಬುದಕ್ಕೆ ಅನೇಕ ಉದಾಹರಣೆಗಳು ದೊರೆಯುತ್ತವೆ. ಅವುಗಳನ್ನಿಲ್ಲಿ ಪರೀಶಿಲಿಸೋಣ. ಪಾಣಿನೀಯ ಶಾಸ್ತ್ರವೆಂಬುದರಲ್ಲಿ ಅಷ್ಟಾಧ್ಯಾಯೀ, ವಾರ್ತಿಕಗಳು ಮತ್ತು ಮಹಾಭಾಷ್ಯ ಈ ಮೂರನ್ನೂ ಸೇರಿಸಿ ಹೇಳಿದೆ. ಆಚಾರ್ಯ ಪಾಣಿನಿಯವರು ತಮ್ಮ ಅಷ್ಟಾಧ್ಯಾಯೀ ಗ್ರಂಥದಲ್ಲಿ ಛಂದಸಿ, ಭಾಷಾಯಾಮ್ ಎಂದು ಶಬ್ದಗಳನ್ನು ಎರಡು ರೀತಿಯಲ್ಲಿ ವಿಭಜಿಸಿ ಹೇಳಿದ್ದಾರೆ. ಇಲ್ಲಿ ಭಾಷಾಯಾಮ್ ಎನ್ನುವುದಕ್ಕೆ ಲೌಕಿಕ ಭಾಷೆಯೆಂದೇ ಅರ್ಥ. ಮಹಾಭಾಷ್ಯಕಾರರಾದ ಪತಂಜಲಿಯವರು **'ಅಥ ಶಬ್ದಾನುಶಾಸನಮ್' ಕೇಷಾಂ ಶಬ್ದಾನಾಮ್ ? ಲೌಕಿಕಾನಾಂ ವೈದಿಕಾನಾಂ ಚ'** ಎಂದು ವಿವರಿಸಿದ್ದಾರೆ. ಇದರಿಂದ ವೇದಗಳಲ್ಲಿ ಕಂಡುಬರುವ ಶಬ್ದಗಳನ್ನೂ ವೈದಿಕ ಶಬ್ದಗಳೆಂದೂ ಜನರ ವ್ಯವಹಾರದಲ್ಲಿ ಉಪಯೋಗವಾದವುಗಳನ್ನು ಲೌಕಿಕವೆಂದೂ ತಿಳಿಯಬಹುದು. ಕೈಯಟನೆಂಬ ವೈಯಾಕರಣನು, ಲೋಕದ ಜನರು ತಿಳಿದ ಬಾಷೆಯು ಲೌಕಿಕವೆಂದು ನಿರ್ವಚನ ಮಾಡಿದ್ದಾನೆ. ಲೋಕವು ತಿಳಿದ ಭಾಷೆಯು ಲೌಕಿಕ ಅರ್ಥಾತ್ ಲೋಕದ ಜನರು ವ್ಯವಹರಿಸುವ ಭಾಷೆಯೇ ಲೌಕಿಕ ಭಾಷೆ.

ಮನೆಗೆ ಬಂದ ಅಳಿಯನಿಗೆ ಆತನ ಪತ್ನಿಯ ಸಹೋದರರು ಪರಿಹಾಸ ಮಾಡುವ ವಾಕ್ಯಗಳನ್ನು ಆಚಾರ್ಯ ಪಾಣಿನಿಯು ತಮ್ಮ ಗ್ರಂಥಗಳಲ್ಲಿ ಸೂತ್ರ ರಚನೆಯೊಂದಿಗೆ ತೋರಿಸಿಕೊಟ್ಟಿದ್ದಾರೆ.

1. ಚೆನ್ನಾಗಿ ಹೊಟ್ಟೆ ತುಂಬ ಊಟ ಮಾಡುತ್ತೇನೆಂದು ಬಂದೆಯಲ್ಲವೇ ! ಆಕಸ್ಮಾತ್ತಾಗಿ ಬಂದ ಅತಿಥಿಗಳು ಊಟಮಾಡಿ ಇದ್ದ ಅಡಿಗೆಯೆಲ್ಲಾ ಖಾಲಿಯಾಗಿದೆ.
2. ರಥವನ್ನು ಹತ್ತಿಕೊಂಡ ಹೋಗುವೆನೆಂದು ಬಂದೆಯಲ್ಲಾ ಅದೇ ರಥವನ್ನು ಹತ್ತಿ ನಿಮ್ಮ ತಂದೆಯು ಆಗಲೇ ಹೊರಟುಹೋದರು. ಇಂತಹ ಅನೇಕ ವಾಕ್ಯಗಳಿವೆ. ಇವುಗಳಲ್ಲಿ ಮಧ್ಯಮಪುರುಷ, ಉತ್ತಮ ಪುರುಷ ಪ್ರತ್ಯಯಗಳು ವ್ಯತ್ಯಯವಾಗಿವೆ. ಹೀಗಿರುವಾಗ ಇಂತಹ ವಾಕ್ಯಗಳು ಶಾಸ್ತ್ರಗ್ರಂಥಗಳಲ್ಲಿರಲು ಹೇಗೆ ಸಾಧ್ಯ. ಜನಗಳ ಆಡುನುಡಿಯಲ್ಲಿ ಬಂದ ಪರಿಹಾಸದ ಮಾತುಗಳು ಇವು. ಈ ರೀತಿ ಪುರುಷ ವ್ಯತ್ಯಯವಾದ ಮಾತಿನ ರೀತಿಯು ಪರಿಹಾಸ್ಯದ ಸಮಯದಲ್ಲಿ ಕನ್ನಡ ಮೊದಲಾದ ಭಾಷೆಗಳಲ್ಲಿಯೂ ಕಂಡು ಬರುತ್ತದೆ.

(ಟಿಪ್ಪಣಿ – ಪಾ.ಸೂ. 1.4.106) "ಪ್ರಹಾಸೇ ಚ ಮನ್ಯೋಪಪದೇ ಮನ್ಯತೇರುತ್ತಮ ಏಹಿ ಮನ್ಯೇ ಓದನಂ ಭೋಕ್ಷ್ಯಸೇ. ನಹಿ ಭೋಕ್ಷ್ಯಸೇ ಭುಕ್ತಃ ಏಕವಚ್ಚ ಸ ಅತಿಥಿಭಿಃ ಏಹಿಮನ್ಯೇ ರಥೇನ ಯಾಸ್ಯಸಿ. ನಹಿ ಯಾಸ್ಯಸಿ ಯಾತಸ್ತೇನ ತೇ ಪಿತಾ" ಈ ವಾಕ್ಯಗಳಲ್ಲಿ ಮನ್ಯೇ ಎನ್ನುವುದು ಉತ್ತಮ ಪುರುಷ ಕ್ರಿಯಾಪದ ಪರಿಹಾಸ್ಯದ ಮಾತುಗಳಲ್ಲಿ ಮನ್ ಧಾತುವನ್ನು ಮಧ್ಯಮ ಪುರುಷಕ್ಕೆ ಉಪಯೋಗಿಸುವಾಗ ಉತ್ತಮ ಪುರುಷದಲ್ಲಿ ಉಪಯೋಗ ಮಾಡಿದೆ.

'ಅಭಿವಾದನ'ವೆಂದರೆ ಗುರುಹಿರಿಯರು ನಮ್ಮನ್ನು ಆಶೀರ್ವದಿಸುವಂತೆ ಪ್ರಾರ್ಥಿಸುವ ಒಂದು ಕ್ರಿಯೆ. ಇದಕ್ಕೆ ಗುರುಹಿರಿಯರು ಕಿರಿಯರಿಗೆ ಹೇಳುವ ಆಶೀರ್ವಚನವೇ ಪ್ರತ್ಯಭಿವಾದ. ಇಂತಹ ಸಮಯದಲ್ಲಿಯೂ ಬ್ರಹ್ಮ, ಕ್ಷತ್ರಿಯ, ವೈಶ್ಯರಿಗೂ, ಶೂದ್ರರಿಗೂ ಆಶೀರ್ವಚನ ಹೇಳುವ ಕ್ರಮವು ಸ್ವಲ್ಪ ಭಿನ್ನವಾಗಿದೆ. (ಪಾ.ಸೂ 8.2.83) ದೇವದತ್ತನಾದ ನಾನು ನಮಸ್ಕರಿಸುತ್ತಿದ್ದೇನೆ ಎನ್ನುವ ಶಿಷ್ಯನ ವಚನಕ್ಕೆ ಗುರುವಿನ ಆಶೀರ್ವಾದವು ಹೀಗಿದೆ – 'ಇಲ್ಲಿ ಬಾ ದೇವದತ್ತ.... ಆಯುಷ್ಮಂತನಾಗು' ಇಲ್ಲಿ ದೇವದತ್ತ ಎಂಬ ಹೆಸರಿನ ಕೊನೆಯ ವರ್ಣವು ದೀರ್ಘಾಕ್ಷರಕ್ಕಿಂತಲೂ ಒಂದು ಮಾತ್ರಾಕಾಲದಲ್ಲಿ ಹೆಚ್ಚಾಗಿ ಉಚ್ಚರಿತವಾಗಿದೆ. 'ತುಷಜಕನಾದ ನಾನು ನಮಸ್ಕರಿಸುತ್ತಿದ್ದೇನೆ' ಎಂಬ ಶೂದ್ರನ ವಾಕ್ಯಕ್ಕೆ ನೀನು ಕುಶಲವೇ ತುಷಜಕ ಎಂದು ಕುಶಲ ಪ್ರಶ್ನೆ ಕೇಳುವಾಗ ತುಷಜಕ ಎಂಬ ಹೆಸರಿನ ಮುಂದೆ ದೀರ್ಘವಿಲ್ಲ. ಈ ಉದಾಹರಣೆಯಿಂದ ನಮಗೆ ತಿಳಿದು

ಬರುವುದೆಂದರೆ ಎಲ್ಲಾ ವರ್ಣದವರೂ ಸಂಸ್ಕೃತವನ್ನೂ ಮಾತನಾಡುತ್ತಿದ್ದರು. ಎಲ್ಲರೂ ಗುರುಗಳ ಬಳಿಗೆ ಹೋಗಿ ತಮ್ಮ ಆಗುಹೋಗುಗಳ ಬಗ್ಗೆ ಮಾತನಾಡುತ್ತಿದ್ದರೆಂಬ ವಿಷಯ. ಸ್ತ್ರೀಯರಿಗೆ ಆಶೀರ್ವಾದ ಮಾಡುವಾಗಲೂ ಹೆಸರಿನ ಮುಂದೆ ದೀರ್ಘವಿಲ್ಲ. 'ಗಾರ್ಗಿ, ನೀನು ಆಯುಷ್ಯವಂತಳಾಗು' ಇದೇ ರೀತಿ ಅಸೂಯೆ ಪಡುವವನು ಆಶೀರ್ವಾದ ಬೇಡುವಾಗಲೂ ದೀರ್ಘಾಕ್ಷರಗಳಿಲ್ಲವೆಂಬುದನ್ನು ಒಂದು ಪರಿಹಾಸ್ಯ ಪ್ರಸಂಗದ ಉದಾಹರಣೆ ಕೊಟ್ಟು ತಿಳಿಸಿದ್ದಾರೆ. ಶಿಷ್ಯನು (ಅಸೂಯಕ) ಕೇಳುತ್ತಾನೆ. ನಾನು ಒಬ್ಬ ಸ್ಥಾಲೀ (ಸ್ಥಾಲೀ = ತಟ್ಟೆ). ಇದನ್ನು ಕೇಳಿಸಿಕೊಂಡ ಗುರುವು 'ಇಲ್ಲಿ ಬಾ ಸ್ಥಾಲಿಯೇ ಆಯುಷ್ಮಂತನಾಗು ಎಂದು ಆಶೀರ್ವದಿಸುತ್ತಾನೆ'. ಈಗ ಶಿಷ್ಯನು ನನ್ನ ಹೆಸರು ಸ್ಥಾಲಿಯಲ್ಲ. ಸ್ಥಾಲೀ ಹಿಡಿದವನು ಎಂದು ಹೇಳುತ್ತಾನೆ. (ದಂಡ ಹಿಡಿದವನು ದಂಡೀಯಾಗುವಂತ ಸ್ಥಾಲಿಯನ್ನು ಹಿಡಿದ ನಾನು ನನ್ನನ್ನು ಸ್ಥಾಲೀ ಎಂದು ಹೇಳಿಕೊಂಡೆ ಎಂದು ಇವನ ವಿವರಣೆ) ದಂಡ ಹಿಡಿದವನು ದಂಡೀ ಎಂಬ ರೀತಿಯ ಶಬ್ದಗಳನ್ನು ಯೌಗಿಕಶಬ್ದಗಳೆನ್ನುತ್ತಾರೆ. ಇಂತ ಶಬ್ದಗಳಿಗೂ ಆಶೀರ್ವಚನ ಹೇಳುವಾಗ ಇದಕ್ಕೆ ದೀರ್ಘವನ್ನು ಹೇಳುವುದು ರೂಢಿಯಲ್ಲಿರಲಿಲ್ಲ. ಆದ್ದರಿಂದ ಗುರುವು ಹೇ ಸ್ಥಾಲೀ, ಆಯುಷ್ಮಂತನಾಗು ಎಂದು ಮತ್ತೆ ಆಶೀರ್ವದಿಸುತ್ತಾನೆ. ಮತ್ತೆ ಈ ಶಿಷ್ಯನು ನನ್ನ ಹೆಸರೇ ಸ್ಥಾಲೀ ಎಂದು ಹೇಳುತ್ತಾನೆ. ಆಗ ಗುರುವು ಕುಪಿತನಾಗುತ್ತಾನೆ. ನೀನೊಬ್ಬ ಅಸೂಯಕ ನೀಚ. ಆಶೀರ್ವಾದಕ್ಕೆ ಅರ್ಹನಲ್ಲ. ವೃಷಲ ಎಂದು ನಿಂದಿಸುತ್ತಾನೆ. ಇಲ್ಲಿ ನೀನು ವೃಷಲ ಎಂದರೆ ವೃಷಲನಂತಹವನು ಎಂದೇ ಅರ್ಥ. ಇಂತಹ ಪ್ರಸಂಗಗಳು ದೈನಂದಿನ ವ್ಯವಹಾರದಲ್ಲಿದ್ದವೇ ಹೊರತು ಶಾಸ್ತ್ರಗ್ರಂಥಗಳ ವಾಕ್ಯಗಳಲ್ಲಿ. ವಾಣಿಜ್ಯಕಾರರಾದ ವೈಶ್ಯರಲ್ಲಿಯೂ ಸಂಸ್ಕೃತ ವ್ಯವಹಾರವಿತ್ತೆಂಬುದೂ ಕೆಲವು ವಾರ್ತಿಕಗಳಿಂದ ತಿಳಿದು ಬರುತ್ತವೆ. ಇಲ್ಲಿ ಹೈ.. ದೇವದತ್ತ, ದೇ..ವದತ್ತ, ದೇವದ..ತ್ತ, ದೇವದತ್ತ.. ಇತ್ಯಾದಿ ಲೋಕ ವ್ಯವಹಾರಗಳು ಸಂಸ್ಕೃತ ಭಾಷೆಯ ಲೋಕರೂಢಿಯನ್ನು ತಿಳಿಸಿಕೊಡುತ್ತವೆ. (ಇಲ್ಲಿ ದೀರ್ಘವೆಂದು ತಿಳಿಸಿರುವುದು ಎರಡು ಮಾತ್ರಾಕಾಲಕ್ಕಿಂತಲೂ ಹೆಚ್ಚಾದ ಕಾಲವುಳ್ಳ ಪ್ಲುತವನ್ನೇ) ಇದೇ ರೀತಿ ಚೌರ, ಚೌರಾ... ನಿನ್ನನ್ನು ಕೊಂದುಬಿಡುತ್ತೇನೆ. ಅಂಗ, (ಕೂಜ..) ಕೂಗಿಕೋ. ನೀಚ ಈಗ ನಿನಗೆ ತಿಳಿಯುತ್ತದೆ ಇಂತಹ ವಾಕ್ಯಗಳು ದಿನನಿತ್ಯದ ಬಳಕೆಯಲ್ಲಿದ್ದವುಗಳೇ.

ಟಿಪ್ಪಣಿ –

2. ಪ್ರತ್ಯಭಿವಾದೇ ಅಶೂದ್ರೇ (ಪಾ.ಸೂ. 8.2.83) ದೇವದತ್ತೋ ಅಹಮಭಿವಾದಯೇ – ಆಯುಷ್ಮಾನೇಧಿ ದೇವದತ್ತ....

ಅಭಿವಾದಯೇ ತುಷಜಕೋಹಂ – ಕುಶಲ್ಯಸಿ ತುಷಜಕ

3. ಅಶೂದ್ರಸ್ತ್ರೀ ಅಸೂಯಕಶ್ಚೇತಿ ವಾಚ್ಯಮ್ – ವಾರ್ತಿಕ

ಆಯುಷ್ಮತೀ ಭವ ಗಾರ್ಗಿ, ಇದು ಸ್ತ್ರೀಯರಿಗೆ ಆಶೀರ್ವಾದ ಹೇಳುವಾಗ

ಅಸೂಯಕನಿಗೆ ಹೇಳುವಾಗ – ಪರಿಹಾಸ ಪ್ರಸಂಗ.

ಸ್ಥಾಲೀ ಅಹಂ ಭೋಃ – ಆಯುಷ್ಮಾನೇಧಿ ಸ್ಥಾಲಿ.....ನ್

ನೈಷಾ ಮಮ ಸಂಜ್ಞಾಸ್ಥಾಲೀ – ಆಯುಷ್ಮಾನೇಧಿ ಸ್ಥಾಲಿನ್ ಇಲ್ಲಿ ಸ್ಥಾಲಿ ಶಬ್ದವು

ಯೌಗಿಕ ಆದ್ದರಿಂದ ಪ್ಲುತವಿಲ್ಲ.

ಸ್ಥಾಲೀತಿ ಮಮ ಸಂಜ್ಞೇತಿ – ಅಸೂಯಸ್ತ್ವಮಸಿಜಾಲ್ಮ ನತ್ವಂ

ಪ್ರತ್ಯಭಿವಾದನಮರ್ಹಸಿ ಭಿದ್ಯಸ್ವ ವೃಷಲ ಸ್ಥಾಲಿನ್

4. ಭೋರಾಜನ್ಯವಿಶಾಂ ವೇತಿ ವಾಚ್ಯಮ್ – ವಾರ್ತಿಕ

5. ದೂರಾದ್ಧೂತೇ ಚ, ಹೈಹೇ ಪ್ರಯೋಗೇ ಹೈಹಯೋಃ

(8.2.84,85,86) ಗುರೋರನೃತೋ ಅನಂತ್ಯಸತಾಪ್ಯೇಕೈಕಸ್ಯ ಪ್ರಾಚಾಮ್

6. ತ್ರಿಮಾತ್ರಸ್ತು ಪ್ಲುತೋಜ್ಞೇಯಃ – ಇದು ಶಿಕ್ಷಾಗ್ರಂಥದ ವಾಕ್ಯ

7. ಆಮ್ರೇಡಿತಂ ಭರ್ತ್ಸನೇ (8.2.15) ಚೌರ, ಚೌರಾ..ಘಾತಯಿಷ್ಯಾಮಿ ತ್ವಾಂ.

8. ಅಂಗಯುಕ್ತಂ ತಿಜ್ಞಾಕಾಂಕ್ಷಮ್ – (8.2.16)

ಅಂಗ, ಕೂಜ... ಇದಾನೀಜ್ಞಾಸ್ಯಸಿ ಜಾಲ್ಮ) ಇಲ್ಲಿ 'ಕೂಜ' ಶಬ್ದವು ಕ್ರಿಯಾಪದ ಇದಕ್ಕೂ ಪ್ಲುತ ಬಂದಿದೆ.

ಕೃಷಿ ಮತ್ತು ಪಶುಪಾಲನೆಯು ಭಾರತೀಯರ ಮುಖ್ಯ ಜೀವನ ವೃತ್ತಿ. ಇಂತಹ ಕೃಷಕರು ಮತ್ತು ಗೋಪಾಲಕರ ನಿತ್ಯವ್ಯವಹಾರದಲ್ಲಿ ಕಾಣಸಿಗುವ ಪದಗಳನ್ನು ಈಗ ಪರಿಶೀಲಿಸೋಣ.

ತಿಷ್ಠದ್ಗುಃ – ಒಂದೆಡೆ ನಿಲ್ಲುವ ಕಾಲ.

ವಹದ್ಗುಃ – ಎತ್ತುಗಳು ನೇಗಿಲನ್ನು ಹೊರುವ ಕಾಲ.

ಆಯತೀಗವಮ್ – ಗೋವುಗಳು ಮನೆಗೆ ಬರುವ ಕಾಲ.

ಅದ್ಯಶ್ವೀನಾ ಗೌಃ – ಈಗತಾನೇ ಕರು ಹಾಕಿದ ಹಸು.

ಸಮಾಂಸಮೀನಾಗೌಃ – ವರ್ಷಕ್ಕೊಮ್ಮೆ ಕರು ಹಾಕುವ ಹಸು.

ಇದಕ್ಕೆ ಕನ್ನಡದಲ್ಲಿ ವರ್ಷತಂತಿ ಎನ್ನುತ್ತಾರೆ.

ಮೌದ್ಗೀನಂ ಕ್ಷೇತ್ರಮ್ – ಹೆಸರುಕಾಳು ಬೆಳೆಯುವ ಸ್ಥಳ.

ವ್ರೈಹೇಯಂ ಕ್ಷೇತ್ರಮ್ – ಭತ್ತ ಬೆಳೆಯುವ ಸ್ಥಳ.

ತಿಲ್ಯಮ್ ಅಥವಾ ತೈಲೀನಮ್ – ಎಳ್ಳು ಬೆಳೆಯುವ ಸ್ಥಳ.

ಇಕ್ಷು ಶಾಕಟಮ್, ಇಕ್ಷುಶಾಕಿನಮ್ – ಕಬ್ಬಿನ ತೋಟ.

ಖಲೇಯವಮ್ – ಸುಗ್ಗಿಯ ಕಾಲವನ್ನು ತಿಳಿಸುವ ಶಬ್ದ.

ಲೂನಯವಮ್, ಲೂನವಾನಯವಮ್ ಇತ್ಯಾದಿಗಳೂ ಪ್ರಯೋಗದಲ್ಲಿವೆ.

ಇದೇ ರೀತಿಯಲ್ಲಿ,

ಉನ್ಮತ್ತ ಗಂಗಮ್ – ಗಂಗಾನದಿಯು ಹುಚ್ಚು ಹೊಳೆಯಂತೆ ಹರಿಯುವ ಸ್ಥಳ.

ಲೋಹಿತ ಗಂಗಮ್ – ಕೆಂಪು ನೀರಿನಿಂದ ತುಂಬಿ ಹರಿಯುವ ಸ್ಥಳ.

ಇವುಗಳು ದೇಶವಾಚಿಯಾಗಿ ವ್ಯವಹಾರದಲ್ಲಿರುವ ಶಬ್ದಗಳು. ಜೂಜುಕೋರರು,

ವಂಚಕರು ಮುಂತಾದವರು ಈಗ ಪ್ರಚಲಿತವಿರುವ 'ಕವಡೆ' ಎಂಬ ಅರ್ಥಕೊಡುವ ವಸ್ತುವಿಗೆ, ಶಲಾಕಾಪರಿ, ಏಕಪರಿ ಮುಂತಾದ ವ್ಯವಹಾರ ಮಾಡಿದ್ದಾರೆ.

ಒಂದು ತಿಂಗಳಿಗೆ ಇಂತಿಷ್ಟು ಸಂಬಳವೆಂದು ನಿಗದಿಪಡಿಸಿಕೊಂಡುಕೊಂಡ ಸೇವಕನಿಗೆ ಮಾಸಂ ಭೃತಃ, ಎನ್ನುವ ಪರಿಪಾಠವಿದ್ದಿತ್ತು.

(ಟಿಪ್ಪಣಿ - ತಿಷ್ಠಂತಿ ಗಾವಃ ದೋಹನಾರ್ಥಂ ಯಸ್ಮಿನ್ ಕಾಲೇ ಸಃ ತಿಷ್ಠದ್ಗುಃ ದೋಹನಕಾಲಃ ಸಂಸ್ಕೃತದಲ್ಲಿ ಹಸು ಮತ್ತು ಎತ್ತು ಎಂಬ ಎರಡು ಅರ್ಥಗಳಿಗೂ ಗೋಶಬ್ದ ಬಳಕೆ ಇದೆ. ವಹಂತಿ ಹಲಂ ಗಾವಃ = ಬಲೀವರ್ದಾಃ (ಎತ್ತುಗಳು) ಯಸ್ಮಿನ್ ಕಾಲೇ ಸಃ ಕಾಲಃ ವಹದ್ಗುಃ

ಆಯಂತಿ ಗಾವಃ, ಯಸ್ಮಿನ್ ಕಾಲೇ ಸಃ ಆಯತೀಗವಮ್ - ಕಾಲ ವಿಶೇಷ ಸುಗ್ಗಿಯ ಕಾಲ ಎಂಬ ಕಾಲ ವಿಶೇಷವನ್ನು ತಿಳಿಸಿಕೊಡುತ್ತಾನೆ.

1. ಧಾನ್ಯಾನಾಂ ಭವನೇಕ್ಷೇತ್ರೇ (ಪಾ. ಸೂ. 5.2.1)

ಹೀಗೆ ಜನಗಳ ವ್ಯವಹಾರದಲ್ಲಿ ಬಂದ ಗೋಷ್ಠ. ಗೋಯುಗ ಮುಂತಾದ ಶಬ್ದಗಳು ಪದಕ್ಕೆ ತಕ್ಕ ಅರ್ಥಕೊಡುವ ಯೌಗಿಕ ಶಬ್ದಗಳಾಗಿದ್ದರೂ ಕಾಲಕ್ರಮೇಣದಲ್ಲಿ ರೂಢ ಶಬ್ದಗಳಾಗಿರುವುದೂ ಕಂಡು ಬಂದಿದೆ. ಅವುಗಳನ್ನು ಮುಂದೆ ಗಮನಿಸೋಣ.

ಯಥಾರ್ಥವನ್ನು ಅರಿಯದ ಕೆಲವು ಜನರು ಶಬ್ದಗಳನ್ನು ಬೇರೊಂದು ಅರ್ಥದಲ್ಲಿ ಉಪಯೋಗಿಸಿರುವುದೂ ಉಂಟು. ಪಂಡಿತರು ಪರಿಶೀಲನೆ ಮಾಡಿದಾಗ ಇದು ಸರಿಯಾದ ಪದವಲ್ಲ ಎನಿಸಿದ್ದರೂ ಭಾಷೆಯಲ್ಲಿ ಬಹಳವಾಗಿ ಬಳಕೆಯಾಗಿರುವುದರಿಂದ ಈ ಪದಗಳೂ ರೂಢಿಗೆ ಬಂದಿವೆ.

ಹಸುಗಳನ್ನು ಕಟ್ಟುವ ಜಾಗಕ್ಕೆ ಗೋಷ್ಠವೆಂದು ಹೆಸರು. ಪಶುಪಾಲಕರಲ್ಲಿ ಉಪಯೋಗದಲ್ಲಿದ್ದ ಈ ಶಬ್ದವು ಗೋವು ಎನ್ನುವ ಅರ್ಥವನ್ನು ಬಿಟ್ಟು ಪ್ರಾಣಿಗಳನ್ನು ಕಟ್ಟುವ ಸ್ಥಾನ ಎಂದು ರೂಢಿಗೆ ಬಂದಿದೆ. **ಹಸುಗಳ = ಗೋಗೋಷ್ಠಮ್, ಅವಿಗೋಷ್ಠಮ್ = ಕುರಿಗಳಗೋಷ್ಠ, ಮಹಿಷಗೋಷ್ಠಮ್ = ಎಮ್ಮೆಗಳಗೋಷ್ಠ** ಎಂದು ಆಯಾ ಪ್ರಾಣಿಗಳ ಜಾತಿಯೊಂದಿಗೆ ಗೋಷ್ಠ ಶಬ್ದವನ್ನು ಸೇರಿಸಿದ್ದಾರೆ. ಇದೇ ರೀತಿ ರೈತರು ನೇಗಿಲನ್ನು ಎಳೆಯಲು ಎರಡು ಗೋವುಗಳನ್ನು ಕಟ್ಟುವುದು ಅಭ್ಯಾಸ. ಇದಕ್ಕೆ ಗೋಯುಗವ್ ಎಂದು ಹೇಳುತ್ತಿದ್ದರು. ಕಾಲಕ್ರಮದಂತೆ ಈ ಪದವು ಗೋಯುಗವ್ ಎನ್ನುವುದೇ ಒಂದು ಜೋಡಿ ಎನ್ನುವ ಅರ್ಥದಲ್ಲಿ ಬಳಕೆಗೆ ಬಂದಿದೆ. ಆದ್ದರಿಂದ **ಖರಗೋಯುಗಮ್- ಕತ್ತೆಗಳ ಜೋಡಿ, ಉಷ್ಟ್ರಗೋಯುಗಮ್ ಒಂಟೆಗಳ ಜೋಡಿ** ಎನ್ನುವುದು ರೂಢಿಯಾಗಿದೆ.

ಗೋವುಗಳ ಗುಂಪಿಗೆ ಷಡ್ಗವವ್ ಎಂದು ಹೇಳುತ್ತಿದ್ದರು. ಈ ಪದವೂ ಕೂಡ ತನ್ನಲ್ಲಿರುವ ಗೋ ಶಬ್ದದ ಅರ್ಥವನ್ನು ಕಳೆದುಕೊಂಡು ಕೇವಲ ಆರರ ಗುಂಪು ಎಂದು ಹೇಳುವಲ್ಲಿ ರೂಢಿಯಾಗಿದೆ. ಆರು **ಆನೆಗಳ ಗುಂಪು-ಹಸ್ತಿಷಡ್ಗವಮ್**, ಆರು ಗೋಗಳನ್ನು ಗುರುತಿಸಲು ಕುಡುಗೋಲಿನ ಆಕಾರದ ಚಿಹ್ನೆಯನ್ನು ಕಿವಿಯ ಮೇಲೆ ಹಾಕುವುದು ಅಥವಾ ಗೋಗಳ ಕಿವಿಯನ್ನು ಸ್ವಲ್ಪ ಛಿದ್ರ (ಭಿನ್ನ) ಮಾಡುವುದು ಪದ್ಧತಿಯುಂಟು. ಹೀಗೆ ಕುಡುಗೋಲಿನ ಆಕಾರದ ಚಿಹ್ನೆಯುಳ್ಳಗೋವು 'ದಾತ್ರಕರ್ಣಃ

ಸ್ವಲ್ಪ ಭೇದಿಸಿದ ಕಿವಿಯುಳ್ಳ ಗೋವುಗಳ 'ಭಿನ್ನಕರ್ಣಃ' ಛಿದ್ರಕರ್ಣಃ ಮುಂತಾಗಿ ಸಂಡ ಎಂದರೆ ಎತ್ತು. ಗ್ರಾಮಸಂಡ ಎಂಬ ಪದವೂ ಬಳಕೆಯಲ್ಲಿದೆ.

(ಟಿಪ್ಪಣಿ – 1. ಗಾವಃ ತಿಷ್ಠಂತಿ ಅತ್ರ ಇತಿ ಗೋಷ್ಠಃ

2. ಗೋಷ್ಠಾದಯಃ ಸ್ಥಾನಾದಿಷು ಪಶುನಾಮಭ್ಯಃ – ವಾರ್ತಿಕ

3. ಉಪಮಾನಾದ್ವಾ ಸಿದ್ಧಮ್ – ವಾರ್ತಿಕ

4. ಕರ್ಣೇ ಲಕ್ಷಣಸ್ಯಾವಿಷ್ಠೇ – ಸೂತ್ರ

ಪಿತುಃ ಪುತ್ರಃ – ಎಂದರೆ ಪ್ರಖ್ಯಾತನಾದ ತಂದೆಯ ಮಗ ಎಂದರ್ಥ ರಘುವು ಪ್ರಖ್ಯಾತನಾದರಾಜ ಆದ್ದರಿಂದ ಅಜನು ಪಿತುಃ ಪುತ್ರಃ, ಕುಮಾರೀ ಪುತ್ರಕಃ, ಕುಮಾರೀಶ್ವಶುರಃ ಮುಂತಾದ ಶಬ್ದಗಳು ಲಜ್ಜಾ ಸ್ವಭಾವವುಳ್ಳವನಿಗೆ ಹೇಳಿದ್ದಾರೆ. ಕನ್ಯೆಗೆ ಪುತ್ರನುಂಟಾದರೆ ಅವನು ಕಾನೀನ ನೆನೆಸಿಕೊಳ್ಳುತ್ತಾನೆ. ಅವನು ಸಹಜವಾಗಿಯೇ ಲಜ್ಜಾಶೀಲನಾಗಿರುತ್ತಾನೆ. ಇವನು ಕುಮಾರೀ ಪುತ್ರಕ. ಯಾರು ಕುಮಾರಿಯಾದವಳಲ್ಲಿ ಅವಿನೀತನಾಗಿ ನಡೆದುಕೊಳ್ಳುತ್ತಾನೆಯೋ ಅಂತಹವನ ತಂದೆಯು ಲಜ್ಜೆಯಿಂದ ಕೂಡಿದವನಾಗಿರುತ್ತಾನೆ. ಇವನಿಗೆ ಕುಮಾರೀಶ್ವಶುರಕನೆಂಬ ವ್ಯವಹಾರವಿದೆ. ಇಂತಹ ಶಬ್ದಗಳು ಜನಗಳ ವ್ಯವಹಾರ ಮಾತ್ರಗೋಚರವಾದವುಗಳು, ಶಾಸ್ತ್ರಗ್ರಂಥಗಳ ವಿಷಯಗಳಲ್ಲ. ವೀರಣಾ ಎಂಬುದು ಒಂದು ಜಾತಿಯ ಹುಲ್ಲು. ಈ ಹುಲ್ಲಿನಿಂದ ತಯಾರಾದ ಚಾಪೆಯನ್ನು ಪ್ರೋಹಕಟಾ ಎನ್ನುವುದು ರೂಢಿ. ಚಳಿಗಾಲದಲ್ಲಿ ಮಾಡುವ ಶೀತ್ಕಾರ ಶೀಕಾಯತೇ ಎಂದು ಪ್ರಯೋಗವಿದೆ. ಆಗ ತಾನೇ ರುಬ್ಬಿದ ಹಿಟ್ಟು – ದೃಷತ್‌ಶಾರದಾಃ

(ದಿಕ್ ಶಬ್ದೇಭ್ಯಃ ತೀರಸ್ಯ ತಾರಭಾವೋ ವಾ – ಇದು ವಾರ್ತಿಕ) ಇದರಂತೆ ದಕ್ಷಿಣತೀರ, ಉತ್ತರತೀರ ಮುಂತಾದ ಶಬ್ದಗಳು ದಕ್ಷಿಣತಾರಮ್ ಉತ್ತರತಾರಮ್ ಎಂದು ಪ್ರಯೋಗವಿದೆ. ಇಂತಹ ಬದಲಾವಣೆಗಳು (ವಿಕಾರಾಃ) ಹೇಗೆ ಉಂಟಾಗಿರಬಹುದು ? ರೂಢಿಗೆ ಬಂದ ಶಬ್ದಗಳೆಂದು ಶಾಸ್ತ್ರಕಾರರು ಇವುಗಳನ್ನು ಸಾಧು ಶಬ್ದಗಳೆಂದು ಪರಿಗ್ರಹಿಸಿದ್ದಾರೆ.

ಈ ಎಲ್ಲಾ ಉದಾಹರಣೆಗಳನ್ನು ವಿವೇಚಿಸಿದರೆ ಸಂಸ್ಕೃತ ಭಾಷೆಯು ಕೇವಲ ಪಂಡಿತರ ಸಭೆಗಳಲ್ಲಿ, ಗ್ರಂಥಗಳಲ್ಲಿ ಮಾತ್ರ ಉಪಯೋಗದಲ್ಲಿರದೆ ದೈನಂದಿನ ಜನಪದ ವ್ಯವಹಾರದಲ್ಲಿಯೂ ಇತ್ತೆಂದು ತಿಳಿಯಬಹುದು. ಗ್ರಂಥಗಳಲ್ಲಿ ಮಾತ್ರ ಇರುವ ಭಾಷೆಯನ್ನು ಪ್ರಯತ್ನಪೂರ್ವಕವಾಗಿ ಶಾಲೆಯಲ್ಲಿ ಕಲಿಯಬೇಕಾಗುತ್ತಿತ್ತು. ವಿಶೇಷ ಸ್ವರೂಪಗಳಲ್ಲಿ ಬಳಕೆಯಾಗುವ ಪದಗಳು ದೈನಂದಿನ ವ್ಯವಹಾರದಲ್ಲಿಯೂ ಇತ್ತೆಂದು ನಿಸ್ಸಂಶಯವಾಗಿ ನಿರ್ಧರಿಸಬಹುದು.

ನಾಮಪದಗಳು ಸಾಮಾನ್ಯವಾಗಿ ಬದಲಾವಣೆಯನ್ನು ಪಡೆಯುವುದಿಲ್ಲ. ಆದ್ದರಿಂದ ನೆಹರೂ ಮಹಾಶಯಃ, ಮದ್ರಾಸ್ ನಗರಮ್ ಮುಂತಾಗಿಯೇ ಹೇಳಬೇಕಾಗುತ್ತದೆ. ಅದೇ ರೀತಿ, ರೈಲುಯಾನಮ್, ಬಸ್ ವಾಹನಮ್, ಚೆಕ್ ಪತ್ರಮ್ ಇತ್ಯಾದಿ ಬೇರೆ ಭಾಷೆಯ ಪದಗಳೊಂದಿಗೆ ಸಂಸ್ಕೃತ ಶಬ್ದಗಳನ್ನು ಜೋಡಿಸಿ ಹೇಳಿದರೂ ನಷ್ಟವೇನಿಲ್ಲ.

ಭಾಷೆಯ ಬಳಕೆಗೆ ಬರುವುದು ಮುಖ್ಯ.

ಭರತಖಂಡದ ಉತ್ತರ ಭಾಗದಲ್ಲಿ ವ್ಯವಹಾರದಲ್ಲಿರುವ ಹಿಂದೀ, ಗುಜರಾತೀ, ಪಂಜಾಬೀ, ಕಾಶ್ಮೀರೀ, ಬಂಗಾಲೀ ಮುಂತಾದ ಭಾಷೆಗಳ ಮೂಲಭಾಷೆಯು ಸಂಸ್ಕೃತವೇ ಎಂದು ಭಾಷಾಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಕನ್ನಡ ಮೊದಲಾದ ದ್ರಾವಿಡ ಭಾಷೆಗಳಿಗೂ ಸಂಸ್ಕೃತವೇ ಮೂಲಭಾಷೆಯಾಗಿದೆ. ಕೇವಲ ಬೇಟೆ ಮುಂತಾದುವುಗಳಿಂದಲೇ ಜೀವಿಸಿರುವ ವನ್ಯಮಾನವರು (ಕಾಡು ಜನರು) ಸ್ವಲ್ಪ ಬೇರೆಯಾದ ರೀತಿಯಲ್ಲಿ ಭಾಷೆಯ ಉಚ್ಚಾರ ಮಾಡುತ್ತಿರಬಹುದು. ಆದರೆ ಪಾಶ್ಚಾತ್ಯ ಭಾಷೆಗಳಲ್ಲಿಯೂ ಸಂಸ್ಕೃತದ ಅನುಕರಣೆಯು ಕಂಡು ಬರುವುದನ್ನು ಗಮನಿಸಿದಾಗ ಜಗತ್ತಿನ ಎಲ್ಲ ಭಾಷೆಗಳ ಮೂಲವೂ ಸಂಸ್ಕೃತವೇ ಆಗಿತ್ತೆಂದು ಹೇಳಿದರೆ ಅದು ಅತಿಶಯೋಕ್ತಿಯೇನೂ ಅಲ್ಲ. ಪ್ರಪಂಚದ ಎಲ್ಲ ಭಾಷೆಗಳಲ್ಲಿಯೂ ಈ ಗೀರ್ವಾಣಿಯ ಸ್ಪಂದನವಿದೆ. ಎನ್ನುವುದಕ್ಕೆ ಒಂದು ಶ್ರುತಿ ವಾಕ್ಯವನ್ನು ಉದಾಹರಿಸಬಹುದು.

'ತಾಂ ವಿಶ್ವರೂಪಾಃ ಪಶವೋ ವದಂತಿ' ಎಂಬ ನುಡಿಯಂತೆ ಈ ವಾಣಿಯು ಭಗವಂತನಂತೆ ವಿಶ್ವವ್ಯಾಪಿಯಾದುದು. **'ಅನಾದಿ ನಿಧನಾ ನಿತ್ಯಾವಾಗುತ್ಸೃಷ್ಟಾ ಸ್ವಯಂಭುವಾ, ಆದೌವೇದಮಯೀ ದಿವ್ಯಾಯತಃ ಸರ್ವಾಃ ಪ್ರವೃತ್ತಯಃ'**

ದೇಶ ಕಾಲ, ಜನಾಂಗಗಳ ಭೇದದಂತೆ ಉಚ್ಚಾರಣೆಯಲ್ಲಿ ಭೇದವು ಕಂಡುಬರುತ್ತದೆ. (ಒಂದೇ ದೈವದ ಅನೇಕ ರೂಪಗಳಿದ್ದಂತೆ)

ವರ್ಣಾಕೃತಿ ವಿಭೇದೋ ಅತ್ರ ಸಹಜಃ ಪ್ರಾಕೃತೈರ್ಗುಣೈಃ ।
ಏಕಗೋತ್ರಾ ಯಥಾಲೋಕೇ ಮನುಜಾಃ ಭಿನ್ನ ಮೂರ್ತಯಃ ॥

ಸಾಮಾನ್ಯವಾಗಿ ಸಂಸ್ಕೃತ ಭಾಷೆಯನ್ನು ಲೌಕಿಕ ಮತ್ತು ಪಾರಮಾರ್ಥಿಕ ಎಂಬುದಾಗಿ ಎರಡು ರೀತಿಯಾಗಿ ವಿಭಾಗ ಮಾಡಬಹುದು. ಪಾರಮಾರ್ಥಿಕ ಆನಂದವನ್ನು ಬಯಸುವವರಿಗೂ, ಐಹಿಕಸುಖ ಸಂತೋಷಗಳನ್ನು ಬಯಸುವವರಿಗೂ ಹಿತವನ್ನುಂಟುಮಾಡಬಲ್ಲದು ಈ ಸಂಸ್ಕೃತಭಾಷೆ.

ಸರ್ವಸ್ತರತು ದುರ್ಗಾಣಿ ಸರ್ವೋಭದ್ರಾಣಿ ಪಶ್ಯತು ।
ಸರ್ವಃ ಸುಖಮವಾಪ್ನೋತು ಮಾ ಕಶ್ಚಿತ್ ದುಃಖಭಾಗ್ ಭವೇತ್ ॥

ಇಂತಹ ವಚನಗಳಿಂದ ವಿಶ್ವ ಶಾಂತಿಯನ್ನು ಬಯಸಿರುವ ವಾಣಿ ಸಂಸ್ಕೃತವಾಣಿ. 'ಮನು' ಮುಂತಾದ ಮಹರ್ಷಿಗಳು ಎಲ್ಲರಿಗೂ ಗುಣ, ನಡವಳಿಕೆಗಳನ್ನು ಬೋಧಿಸುವ ಮೂಲಕ ಜಗತ್ತಿನ ಉನ್ನತಿಯನ್ನೇ ಬಯಸುತ್ತಿದ್ದರು. ಏತದ್ದೇಶ ಪ್ರಸೂತಸ್ಯ, ಸಕಾಶಾದಗ್ರಜನ್ಮನಃ । ಸ್ವಂ ಸ್ವಂ ಚರಿತ್ರಂ ಶಿಕ್ಷೇರನ್, ಪೃಥಿವ್ಯಾಂ ಸರ್ವಮಾನವಾಃ ॥ ಇಂತಹ ವಾಕ್ಯಗಳಿಂದ ಈ ಭಾಷೆಯು ಕೇವಲ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ ಇಡೀ ವಿಶ್ವವನ್ನೇ ಆವರಿಸಿತ್ತು ಎಂದು ನಿಶ್ಚಯಿಸಬಹುದು.

'ಕೃಣ್ವಂತೋ ವಿಶ್ವಮಾರ್ಯಮ್' ಎಂಬ ವಾಕ್ಯವೂ ಇದಕ್ಕೆ ಮತ್ತೊಂದು ಉದಾಹರಣೆ. ಸಮಸ್ತ ಜನಾಂಗದ ಉನ್ನತಿಯನ್ನೇ ಬಯಸಿರುವ ವಾಣಿ ಇದು. ಆದುದರಿಂದಲೇ ಅನೇಕ ಮಹರ್ಷಿಗಳೂ, ಕವಿಗಳೂ, ವಿದ್ವಾಂಸರೂ ಅತ್ಯಂತ ಶ್ರಮವಹಿಸಿ ಸಂಸ್ಕೃತ ಭಾಷೆಯಲ್ಲಿಯೇ ಅಸಂಖ್ಯ ಗ್ರಂಥಗಳನ್ನು ರಚನೆಮಾಡಿ ಈ ಭಾಷೆಯನ್ನು ವಿಸ್ತರಿಸಿದ್ದಾರೆ. ಈ ಭಾಷೆಯು ಗಂಗೆಯಂತೆ ಭರತಭೂಮಿಯಲ್ಲಿ ಹರಿಯುತ್ತಾ ತನ್ನ ಬಳಿಗೆ ಬಂದವರನ್ನು

ಪಾವನಗೊಳಿಸುತ್ತಾ ಶೋಭಿಸುತ್ತಿದೆ.

ಸಂಸ್ಕೃತಾಧ್ಯಯನದಲ್ಲಿ ಎಲ್ಲರಿಗೂ ಅಧಿಕಾರ

ಸಂಸ್ಕೃತ ಭಾಷೆಗೆ ಇದು ಕೇವಲ ಪುರೋಹಿತಭಾಷೆ ಬ್ರಾಹ್ಮಣ ಭಾಷೆ ಎಂಬ ಅಪವಾದಗಳಿವೆ. ಭಾಷೆಗೆ ಜಾತಿಯೊಡನೆ ಸಂಬಂಧವಿರುವುದು ಎಲ್ಲಿಯೂ ಕಂಡುಬರುವುದಿಲ್ಲ. ವಾಲ್ಮೀಕಿ ರಾಮಾಯಣದ ಫಲಶ್ರುತಿಯಲ್ಲಿ ಹೀಗಿದೆ.

ಪಠನ್‌ದ್ವಿಜೋ ವಾಗೃಷಭತ್ವ ಮೀಯಾತ್
ಸ್ಯಾತ್ ಕ್ಷತ್ರಿಯೋ, ಭೂಮಿ ಪತಿತ್ವಮೀಯಾತ್ ।
ವಣಿಗ್‌ಜನಃ ಪಣ್ಯಪತಿತ್ವಮೀಯಾತ್
ಜನಶ್ಚ ಶೂದ್ರೋಪಿ ಮಹತ್ವಮೀಯಾತ್ ॥

(ಪಠನ್ = ಓದುತ್ತಿರುವ) ಎಂಬ ಅರ್ಥವು ಎಲ್ಲ ವರ್ಣದವರಿಗೂ ಸಂಬಂಧಿಸಿದ್ದು ಆದ್ದರಿಂದ ಚಾತುರ್ವರ್ಣದವರಿಗೂ ರಾಮಾಯಣ ಪಠನದಲ್ಲಿ ಅಧಿಕಾರವಿದೆ ಎಂದು ತಿಲಿಯುತ್ತದೆ.

ಸ್ತ್ರೀ ಶೂದ್ರ ದ್ವಿಜಬಂಧೂನಾಂ ಶ್ರುತಿರ್ನ ಶ್ರುತಿಗೋಚರಾ ।
ಅತೋ ಭಾರತಮಾಖ್ಯಾನಂ ಕೃಪಯಾ ಮುನಿನಾಕೃತಮ್ ॥

ಎಂಬ ವಾಕ್ಯದಿಂದ ಮಹಾಭಾರತವನ್ನು ಪಠಿಸಲೂ ಎಲ್ಲರಿಗೂ ಅಧಿಕಾರವಿತ್ತೆಂದು ತಿಲಿಯುತ್ತದೆ. ವಿಷ್ಣುಸಹಸ್ರನಾಮಸ್ತೋತ್ರದ ಫಲಶ್ರುತಿಯುಲ್ಲೂ ಕೂಡ, ಯ ಇದಂ ಶೃಣುಯಾನ್ನಿತ್ಯಂ ಯಶ್ಚಾಪಿ ಪರಿಕೀರ್ತಯೇತ್...... ಶೂದ್ರಃ ಸುಖಮವಾಪ್ನುಯಾತ್ ಎಂದೇ ಉಪಸಂಹಾರ ಮಾಡಿದ್ದಾನೆ: ಶೂದ್ರನಾದ ವಿದುರನು ಜ್ಞಾನಿಯೇ ಆಗಿದ್ದನಲ್ಲವೇ ? ಧರ್ಮವ್ಯಾಧನು ಬ್ರಾಹ್ಮಣನಿಗೆ ಧರ್ಮೋಪದೇಶ ಮಾಡಿದನು. ಭಾಗವತದ ದಶಮಸ್ಕಂದದಲ್ಲಿ, ಪ್ರತಿಲೋಮಜ ಸೂತನಾದ ರೋಮಹರ್ಷನು ವ್ಯಾಸಮಹರ್ಷಿಗಳ ಶಿಷ್ಯನಾಗಿ ಬ್ರಾಹ್ಮಣರಿಗೆ ಪುರಾಣಗಳನ್ನು ಹೇಳುತ್ತಿದ್ದನೆಂದು ತಿಳಿದು ಬರುತ್ತದೆ.

ಋಷೇರ್ಭಗವತೋ ಭೂತ್ವಾ ಶಿಷ್ಯೋಧೀತ್ಯಬಹೂನಿ ಚ ।
ಸೇತಿಹಾಸ ಪುರಾಣಾನಿ ಧರ್ಮಶಾಸ್ತ್ರಾಣಿ ಸರ್ವಶಃ ॥

ರೋಮ ಹರ್ಷಣನ ಮಗನಾದ ಉಗ್ರಶ್ರವಸ್ ಎಂಬುವನು ಸೂತ ಪುರಾಣಿಕನೆಂದೇ ಪ್ರಸಿದ್ಧ. 'ಸಪ್ತದ್ವೀಪಾವಸುಮತೀ' ಎಂಬ ವಾಕ್ಯವನ್ನು ಮಹಾಭಾಷ್ಯದಲ್ಲಿ ಪ್ರಯೋಗ ಮಾಡಿದ್ದಾರೆ. ಬೇರೆ ಬೇರೆ ಎಲ್ಲ ದ್ವೀಪಗಳಲ್ಲಿಯೂ ಬ್ರಾಹ್ಮಣರು ಮಾತ್ರ ವಾಸಮಾಡುತ್ತಿದ್ದರೆಂದು ತಿಳಿಯಲು ಸಾಧ್ಯವಿಲ್ಲ.

ಮಹಾಭಾಷ್ಯದಲ್ಲಿರುವ **'ಅಜೇರ್ವ್ಯಘಞಪೋ'** ಎಂಬ ಸೂತ್ರದಂತೆ ರಥವನ್ನು ನಡೆಸುತ್ತಿದ್ದ ಸೂತನೊಬ್ಬನು ವ್ಯಾಕರಣ ಶಾಸ್ತ್ರವನ್ನು ಕಲಿತಿದ್ದನೆಂದು ತಿಳಿದು ಬರುತ್ತದೆ. ರಥದಲ್ಲಿ ಕುಳಿತಿದ್ದ ವೈಯಾಕರಣ ಸೂತನನ್ನು **'ದುರುತ'** ಎಂದು ನಿಂದಿಸುತ್ತಾನೆ. ಅದಕ್ಕೆ ಸೂತನು ಹೇ ಪುರುಷ ಸೂತ ಶಬ್ದವು **'ವೇಞ'**ಧಾತುವಿನಿಂದ ನಿಷ್ಪತ್ತಿಯಾದುದಲ್ಲ. ಆದ್ದರಿಂದ ನೀನು ದುರುತ ಎಂದು ಪ್ರಯೋಗ ಮಾಡಿದರೆ ಅಪಶಬ್ದವಾಗುತ್ತದೆ. ನೀನು ನನ್ನನ್ನು ನಿಂದಿಸುವುದಾದರೆ **'ದುಸ್ಸೂತ'** ಎಂದು ಹೇಳಬೇಕು ಎಂದು

ತಿದ್ದಿಕೊಡುತ್ತಾನೆ (ಇದು ಪತಂಜಲಿಗಳ ಮಹಾಭಾಷ್ಯದ ವಾಕ್ಯ) ಇಂತಹ ಉದಾಹರಣೆಗಳಿಂದ ಸಾಮಾನ್ಯ ಜನರೂ ಶುದ್ಧವಾದ ಸಂಸ್ಕೃತ ಭಾಷೆಯನ್ನು ಮಾತನಾಡುತ್ತಿದ್ದರೆಂದು ತಿಳಿಯುತ್ತದೆ. ಬೌದ್ಧಮತೀಯರಾದ ಆರ್ಯದೇವ, ಶಾಂತರಕ್ಷಿತ, ಧರ್ಮಕೀರ್ತಿ ಮುಂತಾದ ಅನೇಕರು ನೂರಾರು ಗ್ರಂಥಗಳನ್ನು ಸಂಸ್ಕೃತಭಾಷೆಯಲ್ಲಿ ರಚಿಸಿದ್ದಾರೆ. ಜೈನಮತೀಯರಾದ ಉಮಾಸ್ವಾತಿ, ಭಟ್ಟಾಕಲಂಕ ಮುಂತಾದ ಉದ್ದಾಮ ಪಂಡಿತರು ತಮ್ಮ ತಮ್ಮ ಗ್ರಂಥಗಳನ್ನು ಸಂಸ್ಕೃತ ಭಾಷೆಯಲ್ಲಿಯೇ ರಚಿಸಿದ್ದಾರೆ. ಇಂತಹ ಸಂಸ್ಕೃತ ಗ್ರಂಥಗಳನ್ನು ಅನ್ಯ ದೇಶೀಯರು ತಮ್ಮ ತಮ್ಮ ಭಾಷೆಗೆ ಅನುವಾದ ಮಾಡಿಕೊಂಡಿದ್ದಾರೆ. ಅನೇಕ ಬೌದ್ಧ ಗ್ರಂಥಗಳು ಚೀನೀ ಭಾಷೆಗೆ ಅನುವಾದಗೊಂಡಿವೆ. ಮ್ಲೇಚ್ಛರಾದ ಅಲ್ಬರೂನಿ-ಫೈಸಿ-ಅಬುಲ್‌ಫಸಲ್ ಮೊದಲಾದವರು ರಾಮಾಯಣ ಮಹಾಭಾರತಗಳನ್ನು ಗೀತೆ ಉಪನಿಷತ್ತುಗಳನ್ನು ತಮ್ಮ ಭಾಷೆಗೆ ಭಾಷಾಂತರಿಸಿದ್ದಾರೆ. ಇವರಿಗೆಲ್ಲಾ ಸುಸಂಸ್ಕೃತದ ಆಳವಾದ ಅಧ್ಯಯನವಾಗಿಲ್ಲದಿದ್ದರೆ ಇಂತಹ ಕಾರ್ಯಗಳು ಹೇಗೆ ಸಾಧ್ಯವಾಗುತ್ತಿದ್ದವು ? ಯವನರಲ್ಲಿ ಭಾರತೀಯರ ಜ್ಯೋತಿಶಾಸ್ತ್ರವೂ ಕಂಡುಬರುತ್ತದೆ.

ಮ್ಲೇಚ್ಛಾ ಹಿ ಯವನಾಸ್ತೇಷು ಸಮ್ಯಕ್ ಶಾಸ್ತ್ರಮಿಂದ ಸ್ಥಿತಮ್ ।
ದ್ವಿಜವತ್ತೇ ಅಪಿ ಪೂಜ್ಯಂತೇ ಕಿಂ ಪುನರ್ವೇದವಿತ್ ದ್ವಿಜಃ ॥

ಇದು ವರಾಹಮಿಹಿರಾಚಾರ್ಯರು ಬೃಹತ್ ಸಂಹಿತೆಯಲ್ಲಿ ಹೇಳಿರುವ ವಾಕ್ಯ.

ಭಾರತದೇಶದ ಅಖಂಡತೆಗೆ ಕಾರಣ

ಕರ್ನಾಟಕ ಆಂಧ್ರ ಮುಂತಾದ ರಾಜ್ಯಗಳಲ್ಲಿ ಬೇರೆ ಬೇರೆ ಭಾಷೆಗಳಿವೆ. ಆಹಾರಾದಿಗಳಲ್ಲಿಯೂ ಏಕತೆಯಿಲ್ಲ. ಇದೇ ರೀತಿ ಪ್ರಾಚೀನ ಕಾಲದಿಂದಲೂ ಅಂಗ ವಂಗ ಕಲಿಂಗ ಕಾಂಭೋಜ ಕಾಶ್ಮೀರ ಮೊದಲಾದ ದೇಶಗಳೂ ಆದೇಶಗಳನ್ನು ಬೇರೆ ಬೇರೆ ರಾಜರು ಆಳುತ್ತಿದ್ದರು. ಅವುಗಳಿಗೆ ತಮ್ಮದೇ ಆದ ರೀತಿ ನೀತಿ, ಪ್ರಾಂತೀಯಭಾಷೆ, ವೇಷಭೂಷಣಗಳು, ಆಹಾರಾದಿಗಳು ಎಲ್ಲವೂ ಭಿನ್ನವೇ ಆಗಿರುತ್ತಿತ್ತು. ಭಾರತದೇಶವು ಅಖಂಡವಾದ ಒಂದೇ ರೂಪವಾಗಿದೆ ಎನ್ನುವುದಕ್ಕೆ ಕಾರಣವೇನು ? ಸಂಸ್ಕೃತ ಭಾಷೆಯೇ ದೇಶದ ಸಮಗ್ರ ಏಕತೆಗೆ ಸೇತುವಿನಂತೆ ಇದೆ ಎಂದು ಸೂಕ್ಷ್ಮವಾಗಿ ಅವಲೋಕಿಸಿದರೆ ತಿಳಿದು ಬರುತ್ತದೆ. ರಾಮೇಶ್ವರದಿಂದ ಕಾಶ್ಮೀರದವರೆಗೆ ಎಲ್ಲ ರಾಜ್ಯಗಳಲ್ಲಿಯೂ ಈ ಭಾಷೆಯು ಹರಡಿತು. ಪ್ರಾಕೃತಭಾಷೆಗಳು ಹುಟ್ಟಿಕೊಂಡರೂ ಸಂಸ್ಕೃತವನ್ನು ಎಲ್ಲರೂ ಸಾಮಾನ್ಯವಾಗಿ ತಿಳಿದಿದ್ದರು. ಆದ್ದರಿಂದಲೇ ಕಾಲಿದಾಸ ಮುಂತಾದ ಕವಿಗಳ ನಾಟಕಗಳಲ್ಲಿ ಸಮ್ಮಿಶ್ರ ಭಾಷೆಯು ಕಂಡು ಬರುತ್ತದೆ. ಕೇರಳದಲ್ಲಿ ಜನಿಸಿದ ಶಂಕರರು ಶುದ್ಧಸಂಸ್ಕೃತ ಭಾಷೆಯಲ್ಲೇ ತಮ್ಮ ಗ್ರಂಥಗಳನ್ನು ರಚಿಸಿದರು. ಹೀಗೆ ಭಾರತದ ಉದ್ದಗಲಕ್ಕೂ ಹರಡಿ ನಿಂತಿರುವ ಭಾಷೆಯೆಂದೇ ಇದಕ್ಕೆ 'ಭಾರತೀ' ಎಂಬ ನಾಮ ಅನ್ವರ್ಥವಾಗಿದೆ. 'ಬ್ರಾಹ್ಮೀ ತು ಭಾರತೀ ಭಾಷಾ ಗೀರ್ವಾಗ್ ವಾಣೀಸರಸ್ವತೀ' ಎಂದು ಅಮರಸಿಂಹನು ಸಂಗ್ರಹಿಸಿದ್ದಾನೆ. ಇಂದಿಗೂ ವೇದ, ಶಾಸ್ತ್ರ ಪುರಾಣ ಧರ್ಮಶಾಸ್ತ್ರಗಳು ಇವುಗಳ ಮೂಲಕ ಸಂಸ್ಕೃತ ಭಾಷೆಯು ಭಾರತದ ಎಲ್ಲೆಡೆ ಹರಡಿ ನೆಲೆಸಿದೆ. ಸಂಸ್ಕೃತದೊಂದಿಗೇ ಸಂಸ್ಕೃತಿಯೂ ಕೂಡಿಕೊಂಡಿದೆ. ದೇಶದ ಎಲ್ಲ ರಾಜ್ಯಗಳಲ್ಲಿಯೂ ರಾಮ ಕೃಷ್ಣಾದಿ ಅವತಾರಗಳಲ್ಲಿ ನಂಬಿಕೆ ಇದೆ. ಗಂಗಾನದಿಯು

ಪವಿತ್ರತೆಯಲ್ಲಿ ಪೂಜ್ಯ ಭಾವನೆಯಿದೆ. ಕಾಶೀ ಮುಂತಾದ ಕ್ಷೇತ್ರಗಳಲ್ಲಿ ಗೌರವವಿದೆ. ಅಶ್ವತ್ಥ ಬಿಲ್ವ ತುಳಸಿ ಮುಂತಾದುವುಗಳಲ್ಲಿ ಪೂಜ್ಯ ಭಾವನೆ ಇದೆ. ಎಲ್ಲರಲ್ಲಿಯೂ ಗೋವಿನ ಬಗ್ಗೆ ಮಾತೃ ಭಾವನೆ ಇದೆ. ಧರ್ಮಶಾಸ್ತ್ರಗಳು ಹೇಳುವಂತೆ ವಿವಾಹಾದಿ ಸಂಸ್ಕಾರಗಳು, ವಿಗ್ರಹಾರ್ಚನೆ, ವಿನಾಯಕವ್ರತ ಮುಂತಾದುವುಗಳು. ಅತಿಥಿಸತ್ಕಾರ, ಹೂಗಳಿಂದ ದೇವತಾರ್ಚನೆ, ನಮಸ್ಕಾರಕ್ರಮ, ತಿಲಕಧಾರಣೆ, ಮನೆಯ ಹೊಸ್ತಿಲಿಗೆ ಬರೆಯುವ ಮಂಗಳ ಸೂಚಕ ರಂಗವಲ್ಲಿಗಳು ಹೀಗೆ ಅನೇಕ ರೀತಿಯ ಸಂಸ್ಕೃತಿಗಳು ಭಾರತದ ಏಕತೆಯನ್ನು ಬಿಂಬಿಸುತ್ತವೆ. ದಾಳಿಂಬೆಯ ಹಣ್ಣಿನಲ್ಲಿ ಕಾಳುಗಳು ತೆಳುವಾದ ಒಂದು ಪೊರೆಯಿಂದ ಆವೃತವಾಗಿ ಒಂದೇ ಅಖಂಡವಾದ ಹಣ್ಣು ತೋರಿ ಬರುವಂತೆ ಭಾರತದೇಶದ ಎಲ್ಲ ರಾಜ್ಯಗಳೂ ಸಂಸ್ಕೃತ ಭಾಷೆಯಿಂದ ಹುಟ್ಟಿ ಬಂದ ಸಂಸ್ಕೃತಿಯ ವಜ್ರಲೇಪದಿಂದ ಬದ್ಧವಾಗಿ ಸಮಗ್ರ ಭಾರತವನ್ನೂ ಸುಂದರಗೊಳಿಸಿವೆ.

ವಿಶ್ವ ಜನೀನಾ ಸಂಸ್ಕೃತಭಾಷಾ

ಈ ಸುರವಾಣಿಯಿಂದ ಜನಹಿತಕ್ಕಾಗಿ ಏನು ಉಪಯೋಗವಿರಬಹುದು ಎಂದು ಈಗ ಗಮನಿಸೋಣ. ವಿಷ್ಣು ಪುರಾಣದ ಒಂದು ಶ್ಲೋಕದಂತೆ ವಿದ್ಯಾಸ್ಥಾನಗಳು ಹದಿನೆಂಟು ಎಂದು ತಿಳಿದಿದ್ದೇವೆ.

ಅಂಗಾನಿ ವೇದಾಶ್ಚತ್ವಾರೋ ಮೀಮಾಂಸಾ ನ್ಯಾಯವಿಸ್ತರಃ ।
ಧರ್ಮಶಾಸ್ತ್ರಂ ಪುರಾಣಂಚ ವಿದ್ಯಾಹ್ಯೇತಾಶ್ಚತುರ್ದಶಃ ॥
ಆಯುರ್ವೇದೋ ಧನುರ್ವೇದೋ ಗಾಂಧರ್ವಶ್ಚೇತಿ ತೇತ್ರಯಃ ।
ಅರ್ಥಶಾಸ್ತ್ರಂ ಚತುರ್ಥಂಚ ವಿದ್ಯಾಹ್ಯಷ್ಟಾದಶೈವ ತಾಃ ॥

ವೇದಗಳು ವೇದಾಂಗಳು ನ್ಯಾಯಶಾಸ್ತ್ರ, ಮೀಮಾಂಸಾ ಧರ್ಮಶಾಸ್ತ್ರ ಪುರಾಣಗಳು ಹೀಗೆ ಹದಿನಾಲ್ಕು ಆಯುರ್ವೇದ, ಧನುರ್ವೇದ, ಗಾಂಧರ್ವ, ಅರ್ಥಶಾಸ್ತ್ರಗಳೂ ಸೇರಿ ಹದಿನೆಂಟು.

ಅರ್ಥಶಾಸ್ತ್ರದಲ್ಲಿಯೇ ಬಹಳ ವಿಧಗಳು ನೀತಿಶಾಸ್ತ್ರ, ಅಶ್ವಶಾಸ್ತ್ರ, ಗಜಶಾಸ್ತ್ರ, ಶಿಲ್ಪಶಾಸ್ತ್ರ, ಸೂಪಕಾರಶಾಸ್ತ್ರ, ಕಲಾಶಾಸ್ತ್ರ ಮುಂತಾಗಿ ಮತ್ತೆ ಕಲಾಶಾಸ್ತ್ರದಲ್ಲಿ ಗೀತ, ವಾದ್ಯ, ನಾಟ್ಯ, ನಾಟಕ ಮುಂತಾಗಿ ಅರವತ್ತನಾಲ್ಕು, ಕಾವ್ಯರಚನೆ, ಕಾವ್ಯ ಮೀಮಾಂಸಾ ಇವುಗಳೂ ಕಲಾಶಾಸ್ತ್ರದಲ್ಲಿಯೇ ಸೇರಿವೆ. ಅರವತ್ತನಾಲ್ಕು ಕಲೆಗಳಲ್ಲಿ ವಾಸ್ತು, ವಿದ್ಯೆ, ಬಡಗಿ, ಕೃಷಿಕರ್ಮ, ಸೂಚಿಕರ್ಮ, ಹೊಲಿಗೆಯಂತ್ರ ರಚನೆ, ಧಾತುವಾದ, ಭೂಗರ್ಭವಿಜ್ಞಾನಶಾಸ್ತ್ರ (ಉತ್ಖನನಶಾಸ್ತ್ರ) ಮುಂತಾದ ಅನೇಕ ಶಾಸ್ತ್ರಗಳು ಸಂಸ್ಕೃತ ಭಾಷೆಯಲ್ಲಿಯೇ ಇವೆ. ಇವುಗಳ ಅಧ್ಯಯನದಿಂದಲೇ ಮಾನವನು ತನ್ನ ಜೀವನೋಪಾಯವನ್ನು ಕಂಡುಕೊಳ್ಳಲು ಸಾಧ್ಯ. ಆಯುರ್ವೇದ, ಯುದ್ಧವಿದ್ಯೆ, ಧನುರ್ವೇದ, ಗಾಂಧರ್ವವೇದ ಮುಂತಾದುವುಗಳಿಂದ ಆಗುವ ಪ್ರಯೋಜನಗಳನ್ನು ಹೇಳಬೇಕಾಗಿಯೇ ಇಲ್ಲ. ಅಸಂಖ್ಯವಾದ ಸುಭಾಷಿತಗಳಿಂದ ದೊರೆಯುವ ಜೀವನ ನೀತಿಯೇನೂ ಕಡಿಮೆಯಿಲ್ಲ. ಮಾನವನು ತನ್ನ ಜೀವನವನ್ನು ಉತ್ತಮವಾಗಿ ನಡೆಸಲು ಯಾವ ಯಾವ ವಿಷಯಗಳನ್ನು ತಿಳಿಯಬೇಕೋ ಅವೆಲ್ಲವೂ ಸಂಸ್ಕೃತಭಾಷೆಯಲ್ಲಿಯೇ ಸಂಗ್ರಹವಾಗಿದೆ. ಆಸ್ತಿಕ ದರ್ಶನಗಳು, ಬೌದ್ಧ

ಚಾರ್ವಾಕಾದಿ ನಾಸ್ತಿಕದರ್ಶನಗಳು, ಶಾಸ್ತ್ರತಂತ್ರಗಳು ಎಲ್ಲವೂ ಸಂಸ್ಕೃತ ಭಾಷೆಯಲ್ಲಿಯೇ ಇವೆ. ಆಧ್ಯಾತ್ಮ ವಿಷಯದಲ್ಲಿ, ಪಾರಮಾರ್ಥಿಕ ವಿಷಯಗಳಲ್ಲಿ ಅತ್ಯಂತ ಮಹತ್ವಪೂರ್ಣ ವಿಷಯಗಳೂ ಸಂಸ್ಕೃತ ಭಾಷೆಯಲ್ಲಿವೆ. ಭಗವದ್ಗೀತೆಯಂತಹ ಇನ್ನೊಂದು ಗ್ರಂಥವು ಪ್ರಪಂಚದ ಬೇರೆ ಯಾವ ಭಾಷೆಯಲ್ಲಿಯೂ ಇಲ್ಲ. ಇಂತಹ ಗೀರ್ವಾಣ ವಾಣಿಯು ಸಂಸ್ಕೃತವೇ.

ಸಂಸ್ಕೃತ ಭಾಷೆಯಲ್ಲಿ ಸಂಖ್ಯಾವಾಚಕಗಳ ಪ್ರಯೋಗ

ಸಂಖ್ಯೆಗಳನ್ನು ಎರಡು ರೀತಿಯಲ್ಲಿ ಬರೆಯುತ್ತೇವೆ. ಉದಾ – ಅಕ್ಷರಗಳಲ್ಲಿ – ಒಂದು ಸಾವಿರದ ಎಂಟುನೂರ ಐವತ್ನಾಲ್ಕು, ಅಂಕೆಗಳಲ್ಲಿ – 1854. ಕೆಲವು ಕಡೆಗಳಲ್ಲಿ ಎರಡು ರೀತಿಯಲ್ಲಿಯೂ ಬರೆದಿರುತ್ತಾರೆ. ಬೇರೆಯವರು ತಿದ್ದಬಾರದೆಂಬುದೇ ಇದರ ಉದ್ದೇಶ.

ಈ ಉದ್ದೇಶಕ್ಕಾಗಿ ಅಕ್ಷರಗಳಲ್ಲಿ ಬರೆದರೆ ಭದ್ರತೆ ಹೆಚ್ಚು. ಆದರೆ ಅಂಕೆಗಳಲ್ಲಿ ಬರೆದರೆ ತಿಳಿಯಲು ಸುಲಭ. ಆದುದ್ದರಿಂದ ಲೋಕವ್ಯವಹಾರದಲ್ಲಿ ಅಂಕೆಗಳು ಬಳಕೆಗೆ ಬಂದವು. ಎಲ್ಲ ಸ್ಥಳಗಳಲ್ಲಿಯೂ ಅಷ್ಟೊಂದು ಭದ್ರತೆಯ ಅವಶ್ಯಕತೆ ಇಲ್ಲ. ಅಂಕೆಗಳು ಒಂದರಿಂದ ಒಂಭತ್ತು ಇವೆ. ಒಂಭತ್ತರಿಂದ ಮೇಲ್ಪಟ್ಟು ಎಣಿಸುವುದಾದರೆ, ಒಂದರ ಪಕ್ಕಕ್ಕೆ ಸೊನ್ನೆ ಬರೆದರೆ ಸಾಕು. ಹೀಗೆ ಹತ್ತು ಹತ್ತುಗಳಾದರೆ ನೂರು. ಅಂದರೆ ಒಂದು ಸೊನ್ನೆಯು ಅದರ ಹತ್ತರಷ್ಟನ್ನು ಸೂಚಿಸುತ್ತದೆ. ಇಪ್ಪತ್ತು ಎರಡು ಹತ್ತು, ಮೂವತ್ತು ಮೂರು ಹತ್ತು ಹೀಗೆ ಎಲ್ಲ ಭಾಷೆಗಳಲ್ಲಿಯೂ ವ್ಯವಹಾರವಿದೆ.

ಇದೇ ರೀತಿ ಸಂಸ್ಕೃತದಲ್ಲಿಯೂ ಇದೆ.

ಅಂಕೆಗಳು ಒಂಭತ್ತು ಅಲ್ಲಿಂದ ಮುಂದಕ್ಕೆ 'ಒಂದು' ಎಂಬ ಅಂಕೆಗೆ ಸೊನ್ನೆಯನ್ನು ಸೂಚಿಸುತ್ತದೆ. ದಶ + ಏಕ, ಏಕಾದಶ, ದಶ + ದ್ವಿ – ದ್ವಾದಶ ಇವುಗಳಿಗೆ ಆಗುವ ಸಂಧಿಕಾರ್ಯಗಳು ಇಲ್ಲಿ ಪ್ರಸ್ತುತವಲ್ಲ. ದಶ + ದಶ = ಶತಮ್ ಇಲ್ಲಿಂದ ಮುಂದಕ್ಕೆ ಸಹಸ್ರ ಎನ್ನುವವರೆಗೆ ಬೇರೆ ನಿರ್ದೇಶವಿಲ್ಲ. ಸಹಸ್ರಮ್ ಶತಮ್ ಇವುಗಳು ನಿಪಾತಗಳು. ಈಗ ಬೇರೆ ಭಾಷೆಗಳ ಸಂಖ್ಯಾವಾಚಕಗಳಿಗೂ ಸಂಸ್ಕೃತಕ್ಕೂ ಇರುವ ವೈಲಕ್ಷಣ್ಯವನ್ನೂ ಗಮನಿಸೋಣ.

ಹತ್ತರ ಮೇಲಿನ ಸಂಖ್ಯೆಗಳನ್ನು ಹೇಳುವಾಗ ಬೇರೆಲ್ಲಾ ಭಾಷೆಗಳಲ್ಲಿ ಮೊದಲು ದೊಡ್ಡ ಸಂಖ್ಯೆ, ಆಮೇಲೆ ಸಣ್ಣ ಸಂಖ್ಯೆಯನ್ನು ಹೇಳುವುದು ಅಭ್ಯಾಸ. ಹತ್ತು ಎನ್ನುವುದು ಒಂದು ವ್ಯವಸ್ಥೆಯನ್ನುಂಟುಮಾಡುವ ಒಂದು ಸಂಖ್ಯೆ. ಉದಾಹರಣೆ, ಹನ್ನೆರಡು ಹದಿಮೂರು ಎಂದು ಹೇಳುವಾಗ ಮೊದಲು ಹತ್ತು, ಆಮೇಲೆ ಎರಡು, ಮೂರು ಮುಂತಾಗಿ ತಿಳಿಯುತ್ತದೆ. ಆದರೆ ಸಂಸ್ಕೃತದಲ್ಲಿ ಈ ಅಭ್ಯಾಸವು ವೈಪರೀತ್ಯವಾಗಿದೆ. ಬರೆಯುವುದಕ್ಕೂ ಹೇಳುವುದಕ್ಕೂ ವ್ಯತ್ಯಾಸ ಕಾಣುತ್ತದೆ.

ಸಂಖ್ಯೆಗಳನ್ನು ಬರೆಯುವಾಗ, ಸ್ಥಾನಪಲ್ಲಟವಾದಾಗ, ಅದರ ಸ್ಥಾನದಿಂದ ಅದು ಎಷ್ಟನ್ನು ಬೋಧಿಸುತ್ತದೆ ಎಂದು ತಿಳಿಯುತ್ತದೆ. ಉದಾ –2864 ಎಂಬಲ್ಲಿ, 6 ಹತ್ತುಗಳನ್ನೂ, 8 ನೂರುಗಳನ್ನೂ ಎರಡು ಸಾವಿರಗಳನ್ನೂ ತಿಳಿಸಿಕೊಡುತ್ತದೆ. ಎಲ್ಲಾ ಭಾಷೆಗಳಲ್ಲಿಯೂ ಮೊದಲು ದೊಡ್ಡ ಸಂಖ್ಯೆ, ಆಮೇಲೆ ಕಡಿಮೆ ಮೊತ್ತದ ಸಂಖ್ಯೆ ಇರುವಂತೆ ಬರೆಯುತ್ತೇವೆ. ಹೇಗೆ ಬರೆದಿದ್ದೇವೆಯೋ ಹಾಗೆ ಓದುತ್ತೇವೆ. ಸಾವಿರ, ನೂರು, ಎನ್ನುವ ಶಬ್ದದಿಂದ ಹೇಳುವಾಗಲೇ ಅದು ಯಾವ ಜಾಗದಲ್ಲಿ ಬರೆದಿದೆ ಎನ್ನುವುದು ತಿಳಿಯುತ್ತದೆ.

ಆದರೆ ಸಂಸ್ಕೃತದಲ್ಲಿ ಇದು ವಿಪರೀತವಾಗಿದೆ. ಇಲ್ಲಿ **'ಅಂಕಾನಾಂ ವಾಮತೋ ಗತಿಃ'** ಎಂಬ ಪದ್ಧತಿ ಇದೆ. ಹೇಳುವಾಗ ಕಡಿಮೆಯಾದ ಸಂಖ್ಯೆಯಿಂದ ಆರಂಭಿಸಿ ಅನಂತರ ಅಧಿಕವಾದ ಸಂಖ್ಯೆಯನ್ನು ಹೇಳುತ್ತೇವೆ. ಈ ರೀತಿ ಹೇಳುವುದು, ತಿಳಿಯುವುದು ಎರಡೂ ಕಷ್ಟ. ಎಂತಹ ಪಂಡಿತರಿಗೂ ಇದನ್ನು ಶೀಘ್ರವಾಗಿ ತಿಳಿಯುವುದು ಕಷ್ಟ. ಈ ಪದ್ಧತಿಯ ಯಾಕಾಗಿ ಬಂತೆಂದು ತಿಳಿದಿಲ್ಲ. ಆದ್ದರಿಂದ ಇತರೆ ಭಾಷಗಳಲ್ಲಿದ್ದಂತೆ ಮಾಡಿಕೊಂಡರೆ ವ್ಯವಹಾರಕ್ಕೆ ಅನುಕೂಲವೇ ಆಗುತ್ತದೆ. 2864 ಎಂಬುದನ್ನು **'ಸಹಸ್ರದ್ವಯಂ ಅಷ್ಟೌಶತ ಷಷ್ಟಿ ಚತ್ವಾರಿ'** ಎಂದು ಹೇಳಿದರೆ ತಿಳಿಯುವುದು ಸುಲಭ. ಇದಕ್ಕೆ ಯಾವ ಪ್ರತ್ಯಯ ಸಮಾಸಗಳೂ ಬೇಡ. ಆಗ **'ಅಂಕಾನಾಂ ವಾಮತೋಗತಿ'** ಎಂಬ ಪದ್ಧತಿಗಿಂತ ಭಿನ್ನವಾಗಿ ಇರುತ್ತದೆ ಮಾತ್ರ.

ನೂರರವರೆಗೆ ಪ್ರಸಿದ್ಧವಾದ ಶಬ್ದಗಳಿವೆ. ಉದಾ – ಚತ್ವಾರಿಂಶತ್ ಪಂಚಾಶತ್ ಮೊದಲಾದವು. ಇಂತಹ ಕಡೆಗಳಲ್ಲಿ **'ಚತ್ವಾರಿ ಶೂನ್ಯಮ್'** ಮುಂತಾಗಿ ಹೇಳಬೇಕಾಗಿಲ್ಲ. ಸಪ್ತತಿ, ಅಶೀತಿ ಮುಂತಾದವುಗಳನ್ನೆಲ್ಲಾ ಹೇಗೆ ಪ್ರಸಿದ್ಧಿ ಇದೆಯೋ ಹಾಗೆ ಬಳಸಿಕೊಳ್ಳಬಹುದು. ಕನ್ನಡದಲ್ಲಿಯೂ ಹೀಗೆ ಎಪ್ಪತ್ತು, ಎಂಭತ್ತು ಮೊದಲಾದ ಶಬ್ದಗಳಿವೆ.

ಅಂಕೆಗಳು ಒಂಭತ್ತೇ ಆದರೂ ನೂರರವರೆಗೆ ಬೇರೆ ಬೇರೆ ಶಬ್ದಗಳಿವೆ. ನೂರಾದ ಮೇಲೆ ಸಾವಿರದವರೆಗೆ ಬೇರೆ ಶಬ್ದಗಳಿಲ್ಲ. ಇಲ್ಲಿ ತೊಡಕನ್ನು ನಿವಾರಣೆ ಮಾಡಿಕೊಳ್ಳಲು ಬೇರೆ ಗತಿಯನ್ನು ಕಂಡುಕೊಳ್ಳಬೇಕು. ವಾವತೋಗತಿಯಲ್ಲಿ ವ್ಯವಹಾರ ಕಷ್ಟ. ಇದನ್ನು ದಕ್ಷಿಣತಃ ಎಂದು ಮಾಡಿಕೊಳ್ಳಬೇಕು. ಆಗ ಒಂದೊಂದೇ ಹೇಳಿ ಅಧಿಕ, ಅಧಿಕ ಎಂದೇನೂ ಉಪಯೋಗಮಾಡದೆ, ಪ್ರಸಿದ್ಧ ಶಬ್ದಗಳನ್ನು ಇರುವಂತೆಯೇ ಹೇಳಬಹುದು. ಸಮಾಸವನ್ನು ಮಾಡದೇ ಬಿಟ್ಟರೆ ವ್ಯಾಕರಣ ದೋಷವೇನೂ ಬರುವುದಿಲ್ಲ.

ವಾಮತೋಗತಿಯಲ್ಲಿ ಹೇಳಿದರೆ ಬರೆದುಕೊಳ್ಳುವುದೂ ಕಷ್ಟ. ಗ್ರಹಿಸಿಕೊಳ್ಳಲೂ ತುಂಬಾ ಕಠಿಣ. ವಿದ್ವಾಂಸರಿಗೂ ಭ್ರಮೆಯುಂಟಾಗುತ್ತದೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಆಗ ಸಂಸ್ಕೃತವನ್ನೂ ವ್ಯವಹಾರಕ್ಕೆ ತರುವುದು ಸಂಖ್ಯೆಗಳ ವಿಷಯದಲ್ಲಿ ಸುಲಭ ಸಾಧ್ಯವಾಗುವುದಿಲ್ಲ.

ಉದಾ – ಅಂಗಡಿಗೆ ಹೋಗಿ ಪದಾರ್ಥಗಳ ಮೂಲ್ಯಗಳನ್ನು ತಿಳಿಯುವಾಗ.... ಇಂತಹ ಸ್ಥಳಗಳಲ್ಲಿ, ಸಮಾಸ ಪದಗಳನ್ನು ಮಾಡದೆ, ಬೇರೆ ಭಾಷೆಗಳಲ್ಲಿರುವಂತೆ **'ಅಷ್ಟೌಸಹಸ್ರಾಣಿ, ನವಶತಾನಿ'** ಮುಂತಾಗಿ ಹೇಳಿದರೆ ಸುಲಭ ಗ್ರಾಹ್ಯವಾಗುತ್ತವೆ. ಇದಿಷ್ಟೇ ಅಲ್ಲದೇ, ಸಂಖ್ಯೆಗಳನ್ನು ತಿಳಿಸಲು ಜ್ಯೋತಿಃ ಶಾಸ್ತ್ರಜ್ಞರು ಕ ಟ ಪ ಯಾ ದಿ ಸೂತ್ರ ಮುಂತಾದುವುಗಳನ್ನೂ, ಛಂದಶಾಸ್ತ್ರದ ಸೂರ್ಯ, ರುದ್ರ, ಅಶ್ವ ಯುಗ ಮುಂತಾದ ಸಂಕೇತಗಳನ್ನೂ ಅವಲಂಬಿಸಿಕೊಂಡಿದ್ದಾರೆ. ಇಂತಹ ಸೂತ್ರಗಳೂ, ಸಾಂಕೇತಿಕ ಶಬ್ದಗಳೂ ಹುಟ್ಟಿಕೊಂಡಿರುವುದೂ ಸೌಲಭ್ಯಕ್ಕಾಗಿಯೇ.

ಆದರೆ ಭಾಷೆಯನ್ನು ಸುಲಭವಾಗಿ ವ್ಯವಹಾರಕ್ಕೆ ತರುವಾಗ ಸುಲಭಮಾರ್ಗ ಅನುಸರಿಸಿ, ಅಂಕೆಗಳಿಗೆ ದಕ್ಷಿಣಗತಿಯನ್ನು ಹೇಳಿದರೆ ವ್ಯವಹಾರವು ಸರಳವಾಗುತ್ತದೆ. ಮಧ್ಯದಲ್ಲಿ ಶೂನ್ಯ ಬರುವಂತೆ ಸಂಖ್ಯಾ ಕ್ರಮವಿದ್ದರೂ (ಉದಾ 8904) ಆಗ ಮಧ್ಯಮಪದಲೋಪಿ ಸಮಾಸ ಮಾಡುವುದರಿಂದ ಬೇರೆ ಭಾಷೆಗಳಲ್ಲಿರುವಂತೆಯೇ

ಕ್ರಮವು ಇರುತ್ತದೆ. **'ಅಷ್ಟ ಸಹಸ್ರ ನವಶತ ಚತ್ವಾರಿ'** ಎಂದು ಹೇಳುದಾಗ ಸಹಸ್ರ, ಶತ ಶಬ್ದಗಳೇ ಅವುಗಳ ಸ್ಥಾನವನ್ನು ಸೂಚಿಸುತ್ತವೆ. ಹೀಗೆ ಹೇಳುವುದರಿಂದ ಯಾವುದೇ ವ್ಯಾಕರಣ ದೋಷವು ಬರುವುದಿಲ್ಲ. ನಾವು ವ್ಯಾಕರಣ ಶಾಸ್ತ್ರಕ್ಕೆ ವಿರೋಧಿಗಳೇನೂ ಅಲ್ಲ. ಭಾಷೆಯನ್ನು ವ್ಯವಹಾರದಲ್ಲಿ ಸುಲಭಮಾಡಿಕೊಡಲು ಸಂಖ್ಯೆಗಳ ಬಳಕೆಯಲ್ಲಿ ಕೆಲವು ಮಾರ್ಗಗಳನ್ನು ತೋರಿಸಿಕೊಟ್ಟದ್ದೇವೆ. ಇಲ್ಲವಾದರೆ ಸಂಖ್ಯೆಗಳ ಬಳಕೆಯೇ ಗಡುಸಾಗಿ ವ್ಯವಹಾರವು ಕಷ್ಟವಾಗುತ್ತದೆ. ಒಂದೊಂದನ್ನೂ ಹೇಳುವಾಗಲೂ ಪದವನ್ನು ಪೂರ್ಣವಾಗಿ 'ಅಷ್ಟೌಸಹಸ್ರಾಣಿ, ನವಶತಾನಿ' ಮುಂತಾಗಿ ಹೇಳಬಹುದು. ಅಥವಾ 'ಅಷ್ಟಸಪಸ್ರನವಶತ....' ಮುಂತಾಗಿ ಹೇಳಬಹುದು. ಈ ಎರಡು ವಿಧಗಳಲ್ಲಿಯೂ ದೋಷವಿಲ್ಲ. ಹೀಗೆ ಅನೇಕ ಉದಾಹರಣೆಗಳನ್ನು ತೋರಿಸಿಕೊಡುವುದರ ಮೂಲಕ ಜನಗಳಿಗೆ ಮನವರಿಕೆ ಮಾಡಿ, ಸಾಮಾನ್ಯ ವ್ಯವಹಾರದಲ್ಲಿ ಸಂಖ್ಯಾ ಪ್ರಯೋಗವನ್ನು ಸುಲಭಮಾರ್ಗದಲ್ಲಿ ತರಬೇಕೆಂಬುದು ನಮ್ಮ ಅಭಿಪ್ರಾಯ.